ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 3 ಸಂಚಿಕೆ 27

ಜುಲೈ 05, 2009

ಕನ್ನಡ ವಾರಪತ್ರಿಕೆ

5/-






ರೆಡ್ಡಿ ಗುಂಪಿಗೆ ಕ್ರಿಮಿನಲ್ ಮೊಕದ್ದಮೆಗಳ ಮಾಫಿ
ತೋಳಗಳ ಆಡಳಿತದ ಅರಣ್ಯ ನ್ಯಾಯ



ತೃಣಮೂಲ - ಮಾವೋವಾದಿ ಮೈತ್ರಿಯೂ ಅರಾಜಕ ಹಿಂಸಾಚಾರವೂ

'ಪ್ರಜಾಪ್ರಭುತ್ವ'ದ ವಿಚಿತ್ರ ಬಹುಮತವಿಲ್ಲದೆಯೂ ಸರ್ಕಾರ !

ಖಾಸಗಿ ಮೊಸಳೆಗಳ ಬಾಯಿಗೆ ರಕ್ಷಣಾ ವಲಯದ ಉದ್ದಿಮೆ

ಮಳೆ ಕೊರತೆ : ನಿಜ ಆತಂಕಗಳು ಮತ್ತು ಮಾಧ್ಯಮ ಲೋಕದ ಉತ್ಪ್ರೇಕ್ಷೆಗಳು

ಸಂದರ್ಶನ

ಕೋಲಾರ ತಾಲ್ಲೂಕಿನಲ್ಲಿ ಹೆಜ್ಜೆ ಹೆಜ್ಜೆಗೂ ಹೋರಾಟ ನಡೆಸಿ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿ ಮಾಡಿಸಲಾಗಿದೆ. ಪಟ್ಟಭದ್ರ ಶಕ್ತಿಗಳ ಬೆದರಿಕೆ, ಹಲ್ಲೆಗಳಿಗೆ ಜಗ್ಗದೆ ಧೈರ್ಯ ತೋರಿದ್ದಕ್ಕೆ ರೈತಸಂಘವೂ ಬಲಗೊಳ್ಳುತ್ತಿದೆ.

"ಉದ್ಯೋಗ ಖಾತ್ರಿ :ರೈತ ಸಂಘವೇ ಜಾರಿ ಮಾಡಿಸಿದಂತೆ"

ಹೋಳೂರು ಶಂಕರ್



ಜನಶಕ್ತಿ: ಕೋಲಾರ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಜಾರಿ ಪರಿಸ್ಥಿತಿ ಹೇಗಿದೆ? ಅದಕ್ಕಾಗಿ ನೀವೇನೇನು ಮಾಡಿದಿರಿ?

ಹೋಳೂರು ಶಂಕರ್: ಕೋಲಾರದಲ್ಲಿ ಅಕ್ಟೋಬರ್ 2008ರವರೆಗೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜಾರಿಯನ್ನೇ ಮಾಡಿಲಿಲ್ಲ. ಈ ಕುರಿತು ಕರ್ನಾಟಕ ಪ್ರಾಂತ ರೈತ ಸಂಘದಿಂದ ತೀರ್ಮಾನ ಮಾಡಿ, ಹೋರಾಟಕ್ಕೆ ಸುಗಟೂರು ಪಂಚಾಯ್ತಿಯನ್ನು ಆಯ್ಕೆ ಮಾಡಿಕೊಂಡವು. ಸರ್ಕಾರದಿಂದ ಉದ್ಯೋಗ ಚೀಟಿ ಅಗತ್ಯವೇ ಇಲ್ಲದವರಿಗೆ ಕೊಟ್ಟಿದ್ದರು. ಕೆಲಸ ಮಾಡುವಂತಹವರಿಗೆ ಅದು ಸಿಕ್ಕಿರಲೇ ಇಲ್ಲ. ನಾವು ಪ್ರತ್ಯೇಕ 3500 ಅರ್ಜಿ ಹಾಕಿಸಿದೆವು. ಕೆಲಸ ಕೊಡಲಿಲ್ಲ. ತೀವ್ರ ಹೋರಾಟ ಶುರು ಮಾಡಿದೆವು. ಪಂಚಾಯ್ತಿ ಕಾರ್ಯ ನಿರ್ವಹಣಾಧಿಕಾರಿಗಳು ಯೋಜನೆ ಜಾರಿ ಮಾಡುವ ಸ್ಥಿತಿಯಲ್ಲೇ ಇರಲಿಲ್ಲ. ಮದನಹಳ್ಳಿ ಪಂಚಾಯ್ತಿ ಮುಂದೆ ಪ್ರತಿಭಟನೆಗೆ 500 ಜನ ಕೂಲಿಕಾರರು ಸೇರಿದ್ದರು. 'ದಿ ಹಿಂದೂ' ಇತ್ಯಾದಿ ಪತ್ರಿಕೆಗಳಲ್ಲಿ ಸುದ್ದಿಯಾದ ಮೇಲೆ ಗ್ರಾಮೀಣಾಭಿವೃದ್ಧಿ ಪಂಚಾಯತ್ ಕಾರ್ಯದರ್ಶಿಗಳು ತಮ್ಮ ಕಛೇರಿಯಲ್ಲಿ ಸಭೆಗೆ ಕರೆಸಿದರು. ಆದರೆ ಪಂಚಾಯ್ತಿ ಕಾರ್ಯದರ್ಶಿ ಕುಮ್ಮಕ್ಕು ಕೊಟ್ಟು ದಲಿತ ವಿರೋಧಿ ಶಕ್ತಿಗಳೆಲ್ಲಾ ಸೇರಿ ಸಭೆಯಲ್ಲಿ ನಮ್ಮನ್ನು ಸುತ್ತುವರೆದು ಮಾತನಾಡದಂತೆ ತಡೆ ಒಡ್ಡಿದರು ಹಾಗೂ ದಬಾವಣೆ ಮಾಡಿದರು. ನಮ್ಮ ಜನಗಳು, ಕೂಲಿಕಾರರು ಆ ಸ್ಥಳಕ್ಕೆ ಬಂದ ಮೇಲೆ ನಮಗೆ ಮಾತನಾಡಲು ಅವಕಾಶವಾಯಿತು.

ಆ ಹಂತದಲ್ಲಿ ಯೋಜನೆ ಆರಂಭಿಸಿ 100 ದಿನ ಕೆಲಸ ಕೊಡಲು ಸಾಧ್ಯವಿರಲಿಲ್ಲ. ಕೆಲಸಗಳನ್ನು ಯೋಜಿಸುವಾಗ ಗ್ರಾಮ ಸಭೆ ನಡೆಸಿರಲಿಲ್ಲ. ಪಂಚಾಯ್ತಿ ಸದಸ್ಯರುಗಳ ಸ್ವಂತ ಹಿತಕ್ಕೆ ಅನುಕೂಲವಾಗುವಂತೆ ಮಾಡಿದ್ದರು. ಕೂಲಿ ದರ (ಬಿಎಸ್ಆರ್) ಕಡಿಮೆ. (ಅದನ್ನು ಮಾರ್ಚ್ ತಿಂಗಳಲ್ಲಿ ಬದಲಿಸಲಾಯಿತು) ಕೊನೆಗೂ ಯೋಜನೆ ಡಿಸೆಂಬರ್ 31ಕ್ಕೆ ಆರಂಭವಾಯಿತು. ವೆಲಗಲ ಬುರೆ ಗ್ರಾಮದಲ್ಲಿ 171 ಜನ ಸೇರಿ ಉದ್ಯೋಗ ಖಾತ್ರಿ ಕೆಲಸವನ್ನು ಕೆರೆ ಹೂಳೆತ್ತುವ ಮೂಲಕ ಉದ್ಘಾಟಿಸಲಾಯಿತು. (ರೈತ ಸಂಘವೇ ಉದ್ಘಾಟನೆ ಆಯೋಜಿಸಿದ್ದು) ಎಲ್ಲಾ ಪಂಚಾಯ್ತಿಗಳ ಮುಂದೆ ಪ್ರತಿಭಟನೆ ಹಾಗೂ ಕೋಲಾರದಲ್ಲಿಯೂ ಪ್ರತಿಭಟನೆಗಳ ಮೂಲಕವೇ ಯೋಜನೆ ಜಾರಿಗೆ ಬರುವಂತಾಯ್ತು. ಇದರಿಂದ ಪಂಚಾಯ್ತಿ ಕಾರ್ಯದರ್ಶಿಗೆ ಇರಿಸು ಮುರಿಸಾಯ್ತು. ಕೂಲಿಕಾರರು ಒಗ್ಗಟ್ಟಾಗುತ್ತಿರುವುದು ನೋಡಿ ಭೂ ಮಾಲೀಕರ ಪಟ್ಟ ಭದ್ರ ರಾಜಕಾರಣಿಗಳ ಶ್ರೀಮಂತರ ಕಣ್ಣು ಕೆಂಪಗಾಯ್ತು. 40 ರೂಪಾಯಿ ಕೂಲಿಗೆ ದುಡಿಯುತ್ತಿರುವ ಕೂಲಿಕಾರರು, 82 ರೂ.ಕೂಲಿಯ ಉದ್ಯೋಗ ಖಾತ್ರಿ ಯೋಜನೆ ಕಡೆಗೆ ಹೋಗಿ ಬಿಟ್ಟರೇ? ಸರಿ, ಕಿರುಕುಳ ದೌರ್ಜನ್ಯ ಶುರುವಾಯಿತು. ಎಸ್. ಅಗ್ರಹಾರ ಎಂಬಲ್ಲಿ ಸಂಜೆ 6-7 ಗಂಟೆಯಲ್ಲಿ (ಸಭೆ ಮಾಡುವಾಗ) ಕಲ್ಲು ಹೊಡೆಸಿದರು. ಮದನಹಳ್ಳಿಯಲ್ಲಿಯೂ ಹಾಗೆ ಆಯಿತು. ಇಷ್ಟಾದರೂ 2000-3000 ಜನರನ್ನು ಕೆಲಸಕ್ಕೆ ಇಳಿಸಲಾಯಿತು. ಕೂಲಿ ಪ್ರಶ್ನೆ, ಕೆಲಸದ ಪ್ರಶ್ನೆ, ಮಾಡಿದ ಕೆಲಸದ ಅಳತೆಯ ಪ್ರಶ್ನೆ ಎಲ್ಲಾ ಪ್ರಶ್ನೆಗಳಲ್ಲಿ ಹೋರಾಟ ಮಾಡಬೇಕಾಗಿ ಬಂತು. 17 ಊರುಗಳಲ್ಲಿ ಈ ಸಂಬಂಧ ತೀವ್ರ ಪ್ರತಿಭಟನೆಗಳು ನಡೆದವು.

ಜನಶಕ್ತಿ: ಕಾನೂನು ಪ್ರಾಧಿಕಾರದೊಂದಿಗೆ ಸೇರಿ ನಡೆಸಲಾದ ಕಾರ್ಯಕ್ರಮ ಏನು?

ಹೋಳೂರು ಶಂಕರ್: ನಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ ಹಲವಾರು ಜನರಿಗೆ ಕೈ ಕಾಲುಗಳಿಗೆ ಏಟು ಬಿದ್ದು ಗಾಯಗೊಂಡಿದ್ದರು. ಅವರಿಗೆ ಯಾವುದೇ ಪರಿಹಾರ ಸಿಕ್ಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕಾನೂನು ಪ್ರಾಧಿಕಾರದೊಂದಿಗೆ 'ಲೋಕ ಅದಲಾತ್ತು' ನಡೆಸಲಾಯಿತು. ನಂತರ ಪರಿಹಾರ ನೀಡುವ ಜವಾಬ್ದಾರಿ ನಿರ್ವಹಿಸದ ಇ.ಓ. ವಿರುದ್ಧ ಕೇಸು ದಾಖಲಿಸಿದೆವು. ಇದರಿಂದ 25 ಸಾವಿರ, 30 ಸಾವಿರಗಳಂತೆ ಗುಂಪುಗಳಿಗೆ ಪರಿಹಾರ ಮತ್ತು ಆಸ್ಪತ್ರೆ ವೆಚ್ಚ ಸಿಗುವಂತಾಯಿತು.

ಕೆಲಸದ ಸ್ಥಳಗಳಲ್ಲಿ ಪ್ರಥಮ ಚಿಕಿತ್ಸೆ, ನೆರಳು, ಕುಡಿಯುವ ನೀರು, ಎಳೆಯ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ, ಸಲಕರಣೆಗಳು ಮೂಲ ಭೂತ ಸೌಕರ್ಯಗಳು ಸಮರ್ಪಕವಾಗಿರಲಿಲ್ಲ. ಹೋರಾಟದ ಫಲವಾಗಿ ವ್ಯವಸ್ಥೆಗಳಾದವು. ಈ ಯೋಜನೆಯನ್ನು ಸರ್ಕಾರ ತಾನು ಜಾರಿ ಮಾಡುವುದಕ್ಕೆ ಬದಲಾಗಿ ಪ್ರಾಂತ ರೈತ ಸಂಘ ಇದನ್ನು ಜಾರಿ ಮಾಡಿಸಿದಂತೆಯೇ ಆಯ್ತು. ಇದರಿಂದಾಗಿ ಸುಗುಟೂರು ಪಂಚಾಯ್ತಿ ವ್ಯಾಪ್ತಿಯಲ್ಲಿ ಮೊದಲಿಗೆ ಅಷ್ಟೇನೂ ಇಲ್ಲದಿದ್ದ ಪ್ರಾಂತ ರೈತ ಸಂಘಕ್ಕೆ ಈಗ ಎಲ್ಲಾ ಕಡೆ ಸಂಪರ್ಕ ಬೆಳೆದುಬಂದಿದೆ. ಈ ವಿಚಾರದಲ್ಲಿ ಅಧಿಕಾರಿಗಳಿಗೂ ನಮಗೂ, ನಮಗೂ-ಕಾಂಗ್ರೆಸ್ ಮುಖಂಡರ ನಡುವೆ ಹಲವಾರು ಬಾರಿ ತಿಕ್ಕಾಟಗಳಾಗಿವೆ.

ಜನಶಕ್ತಿ: ಸುಗುಟೂರಿನಲ್ಲಿ ನಡೆದ ಗಲಾಟೆ ಏನದು? ಯಾಕೆ?

ಹೋಳೂರು ಶಂಕರ್: ಸುಗುಟೂರು ಕೇಂದ್ರದಲ್ಲಿ ಒಂದು ವರ್ಷ ಒಂದು ತಿಂಗಳು ಕಳೆದರೂ ಯೋಜನೆ ಜಾರಿಯಾಗಿರಲಿಲ್ಲ. ಉದ್ಯೋಗ ಖಾತ್ರಿ ಯೋಜನೆಯ ವೇತನ ತೆಗೆದುಕೊಳ್ಳಲು ಸುಗುಟೂರು ಬ್ಯಾಂಕ್‌ಗೆ ಬರುವ ಸುತ್ತಮುತ್ತಲ ಹಳ್ಳಿಗಳ ಜನರನ್ನು ನೋಡಿ, ಯೋಜನೆ ಜಾರಿಯ ಬಗೆಗೆ ಕೇಳಿ ಕೆಲಸ ಇಲ್ಲದೇ ಪರದಾಡುತ್ತಿದ್ದ ಸುಗುಟೂರಿನ ಕೂಲಿಕಾರರು ನಮಗೂ ಕೆಲಸಬೇಕೆಂದು ಸಭೆ ಸೇರಿಸಿದರು. 100-120 ಜನ ಸಭೆ ಸೇರಿದ್ದರು. ಎಲ್ಲಾ ಮಾತಾಡಿ ಇನ್ನೇನು ಹೊರಡ ಬೇಕೆನ್ನುವಾಗ ಕಾಂಗ್ರೆಸ್ ಮುಖಂಡ ಕದರಪ್ಪ ಎನ್ನುವವರು ಏಕಾಏಕಿ ಅವರ ಆಸ್ತಿಯನ್ನು ನಾವು ಹೊಡೆದುಕೊಳ್ಳುತ್ತಿದ್ದೇವೇನೋ ಎನ್ನುವಂತೆ ಸಭೆಗೆ ನುಗ್ಗಿ ಗಲಾಟೆ ಮಾಡಿ ಬೆದರಿಕೆ ಹಾಕಿದರು. ಅಲ್ಲಿ ಸೇರಿದ್ದವರು ಹೊಸ ಜನರು. ಗಂಗಮ್ಮ ರೈತ ಸಂಘದ ತಾಲ್ಲೂಕು ಸಹ ಕಾರ್ಯದರ್ಶಿ, ಪಕ್ಕದ ಗೂರ್ಜೇನಹಳ್ಳಿಯವರು. ಇವರು ದಲಿತ ಕುಟುಂಬದ ಕೂಲಿಗಾರ್ತಿ. ಈಗ ಇಡೀ ಹೋಬಳಿಯಲ್ಲೆಲ್ಲಾ ತಿರುಗಾಡಿ ಸಂಘಟನೆ ಮಾಡುತ್ತಿರುವುದನ್ನು ಸಹಿಸಲಾರದೆ ಗಂಗಮ್ಮ ಅವರ ಕುತ್ತಿಗೆಗೆ ಕೈ ಹಾಕಿ ಹಲ್ಲೆಗೆ ಯತ್ನಿಸಿದರು. ಕದರಪ್ಪ ಮತ್ತು ಮಕ್ಕಳು ಬೆದರಿಕೆ ಕೂಡ ಹಾಕಿದರು. ಈ ಪಂಚಾಯ್ತಿ ಸದಸ್ಯೆ ಕದರಪ್ಪ ಉದ್ಯೋಗ ಖಾತ್ರಿ ಯೋಜನೆ ಇನ್ನೂ ಜಾರಿಗೆ ಬಂದೇ ಇಲ್ಲ ಎಂದು ಹೇಳಿಕೊಂಡು ಓಡಾಡುತ್ತಿದ್ದವರು.

ಜನಶಕ್ತಿ : ಹಲ್ಲೆಗೆ ಸಂಘಟನೆ ಹೇಗೆ ಪ್ರತಿಕ್ರಮಿಸಿತು?

ಹೋಳೂರು ಶಂಕರ್: ನಾವು ತತ್‌ಕ್ಷಣ ಮೇ 3, 2009 ರಂದು ಕ್ರಿಮಿನಲ್ ದೂರು ದಾಖಲಿಸಿದೆವು. ಚುನಾಯಿತ ಪಂಚಾಯತ್ ಸದಸ್ಯನ ಸದಸ್ಯತ್ವ ಅನರ್ಹ ಗೊಳಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಕೊಟ್ಟೆವು. ಸುಮಾರು 350-400 ಜನರು ಪಾಲ್ಗೊಂಡ ಪ್ರತಿಭಟನಾ ಸಭೆಯನ್ನು ನಡೆಸಲಾಯಿತು. ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮುಂತಾದವರು ಪಾಲ್ಗೊಂಡಿದ್ದರು.

ಪೋಲೀಸ್ ಠಾಣೆಯಲ್ಲಿ ದೂರು ದಾಖಲಾದ ಮೂರನೇ ದಿನವೇ ಪಂಚಾಯ್ತಿ ಸದಸ್ಯ ಒಂದಿಷ್ಟು ದಲಿತ ಕೂಲಿಕಾರರನ್ನು ಮಾತ್ರ ಆಯ್ಕೆ ಮಾಡಿ ಉದ್ಯೋಗಖಾತ್ರಿ ಕೆಲಸಕ್ಕೆ ಬಿಟ್ಟರು. ಅವರ ಮೇಲೂ ದಾಳಿ ದಬ್ಬಾಳಿಕೆ. ಮೊದಲಿಗೆ 100 ಜನ ಇದ್ದವರು ನಂತರ 50 ಜನ ಆದರು. ನಮ್ಮ ಹೋರಾಟ ಮಧ್ಯ ಪ್ರವೇಶದಿಂದಾಗಿ ಈಗ 70-80 ಜನ ಕೆಲಸ ಮಾಡುತ್ತಿದ್ದಾರೆ. ಈ ವಿವಿಧ ಹೋರಾಟಗಳಲ್ಲಿ ಕೋಲಾರ ತಾಲ್ಲೂಕು ಕಾರ್ಯದರ್ಶಿ ಟಿ.ಎ. ವೆಂಕಟೇಶ್, ತಾಲ್ಲೂಕು ಅಧ್ಯಕ್ಷ ಟಿ.ಕೃಷ್ಣೆಗೌಡ ಮುನಿಸ್ವಾಮಿ ಮುಂತಾದವರು ಹೋರಾಟದ ಮುಂಚೂಣಿಯಲ್ಲಿದ್ದು ತುಂಬಾ ಶ್ರಮಿಸಿದ್ದಾರೆ.

'ಊರೋಳ್ಗ ನುವ್ವು ರಾವದ್ದು ಪೋವೆ' ಅಂದರು ಅವರು



ಈ ಚಿತ್ರದಲ್ಲಿ ಕಾಣಿಸುತ್ತಿರುವ ಮಹಿಳೆ ಗಂಗಮ್ಮ ಅಂತ. ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ತಾಲ್ಲೂಕು ಸಹ ಕಾರ್ಯದರ್ಶಿ. ದಲಿತ ಮಹಿಳೆ. ಜಾತಿಯ ಹೆಸರು 'ದೊಕ್ಕಲಿಗರು' ಅಂತ. ಗಮನಿಸಬೇಕಾದ ವಿಚಾರ ಅಂದರೆ ಈ ದೊಕ್ಕಲಿಗರನ್ನು ಸಂಪ್ರದಾಯವಾದಿ ಮಾದಿಗ-ಹೊಲೆಯ-ಜಾತಿಯುವರನ್ನು ಕೂಡ ತಮ್ಮ ಕೇರಿಗೆ ಸೇರಿಸುವುದಿಲ್ಲ. ಇವರು ಹಸುವಿನ ಕಂಕುಳಿನಿಂದ ಜನಿಸಿದವರು ಎಂಬುದು ಸಾಂಪ್ರದಾಯಿಕವಾದ ನಂಬಿಕೆಯಂತೆ.

ಇವರು ಪ್ರಾಂತ ರೈತ ಸಂಘದ ಸಂಪರ್ಕಕ್ಕೆ ಬಂದ ಮೇಲೆ ತಮ್ಮ ಊರಾದ ಮಾಧವ ಗೂರ್ಜೇನಹಳ್ಳಿಯಲ್ಲಿ ರೇಷನ್‌ಕಾರ್ಡ್ ಯಾರಿಗೆ ದೊರೆತಿಲ್ಲ ಪಟ್ಟಿ ಮಾಡಿಕೊಂಡು ಬರಲು ರೈತ ಮುಖಂಡರು ಕರೆದಾಗ ಗಂಗಮ್ಮರಿಗೆ ಜೊತೆಗೆ ಹೋಗಲು ಧೈರ್ಯವಿರಲಿಲ್ಲ. 'ನಮ್ಮನ್ನು ಊರೊಳಕ್ಕೆ ಬರಿಸಲ್ಲ. ಮನೆ ಹತ್ರ ಬಿಟ್ಕೋಳಲ್ಲ. ನಾನು ಬರಲ್ಲ' ಅಂದಿದ್ದಾರೆ. ಮುಖಂಡರ ಅಭಯ, ಒತ್ತಾಸೆ ಮೇರೆಗೆ ಊರೊಳಗೆ ಹೋದರೆ, ದಲಿತರೇ ಆದ ಚಿಕ್ಕಪ್ಪಯ್ಯ ಎಂಬುವವರು 'ನೂವ್ವು ರಾವದ್ದು ಪೋವೆ' ಎಂದು ಗದರಬೇಕೆ. ಮೊದಮೊದಲಿಗೆ ಆಕೆ ಹಿಂಜರಿದಿದ್ದು ನಿಜ. ಆದರೆ ಈಗ ಹಾಗಿಲ್ಲ.

ಕೋಲಾರ ತಾಲ್ಲೂಕಿನ 32 ಹಳ್ಳಿಗಳಲ್ಲಿ ಓಡಾಡುತ್ತಾ ರಾತ್ರಿ, ಹಗಲು, ಉದ್ಯೋಗ ಖಾತ್ರಿ ಯೋಜನೆ, ರೇಷನ್ ಕಾರ್ಡ್ ಸಮಸ್ಯೆ ಇತ್ಯಾದಿಯಾಗಿ ಹೋರಾಟದ ಸಿದ್ದತೆಯಲ್ಲಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಜನಗಳು ಅವರನ್ನು ಒಬ್ಬ ನಾಯಕಿಯನ್ನಾಗಿ ಗುರುತಿಸುತ್ತಿದ್ದಾರೆ.

'ಇಂಥಾ ಸ್ಥಿತಿಗೆ ಪ್ರಾಂತ ರೈತ ಸಂಘವೇ ಕಾರಣ. ಎಂದೆಂದೂ ನಾನು ರೈತ ಸಂಘವನ್ನು ಬಿಡುವುದಿಲ್ಲ ನನ್ನ ಪ್ರಾಣ ಬೇಕಾದರೂ ಕೊಡಲು ಸಿದ್ದ' ಎನ್ನುತ್ತಾರೆ ಪಟ್ಟಭದ್ರರ ಬೆದರಿಕೆಗೆ ಜಗ್ಗದ ಗಂಗಮ್ಮ.

ಸಂಪಾದಕೀಯ

ತೋಳಗಳ ಮಂದೆಯ ಅರಣ್ಯ ನ್ಯಾಯ

ರೆಡ್ಡಿ ಗುಂಪಿನ ಮೇಲಿನ ಕ್ರಿಮಿನಲ್ ಮೊಕದ್ದಮೆಗಳ ಮಾಫಿ

ಗುರುವಾರ, ಜೂನ್ 18 ರಂದು ಸೇರಿದ ಸಚಿವ ಸಂಪುಟ ಒಂದೆಡೆ ರಾಜ್ಯದ ಪ್ರಥಮ ಖಾಸಗಿ ವಿಶ್ವವಿದ್ಯಾನಿಲಯ ಸ್ಥಾಪಿಸಲು ಅನುಮತಿ ನೀಡಿ ದೇಶದ ದೊಡ್ಡ ಖಾಸಗಿ ಬಂಡವಾಳಗಾರರಿಗೆ ಯಾವ ವಿಶ್ವವಿದ್ಯಾನಿಲಯದ ನಿಯಂತ್ರಣವೂ ಇಲ್ಲದೆ, ಜನರ ನಿಯಂತ್ರಣವೂ ಇಲ್ಲದೇ ಸ್ವೇಚ್ಛೆಯಿಂದ ತಮಗೆ ಬೇಕಾದಂತೆ ಶಿಕ್ಷಣವನ್ನು ರೂಪಿಸುವ ಅವಕಾಶ ನೀಡಿದೆ. ಸಾರ್ವಜನಿಕ ಶಿಕ್ಷಣವನ್ನು ತುಳಿದು ಖಾಸಗಿ ಲಾಭಕೋರರಿಗೆ ಕರ್ನಾಟಕದ ಬೌದ್ಧಿಕ ಸಂಪತ್ತನ್ನು ಅಡಿಯಾಳಾಗಿಸಹೊರಟಿದೆ.

ಅದೇ ಸಚಿವ ಸಂಪುಟದಲ್ಲಿ ಹಲವು ನಿರ್ಣಯಗಳ ಜೊತೆಗೆ ಸಂದಿಯಲ್ಲಿ ಸಮಾರಾಧನೆ ಎಂಬಂತೆ ಬಳ್ಳಾರಿಯ ರೆಡ್ಡಿ ಧಣಿಗಳ ಮೇಲಿನ ಹತ್ತಾರು ಕ್ರಿಮಿನಲ್ ಮೊಕದ್ದಮೆಗಳನ್ನು ವಾಪಸ್ ಪಡೆಯಲಾಗಿದೆ. ಇವುಗಳಲ್ಲಿ ಕಾರ್ಪೊರೇಷನ್, ವಿಧಾನಸಭಾ ಚುನಾವಣೆಗಳಲ್ಲಿ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಗಾಗಿ ಹಾಕಿದ ಕೇಸುಗಳು, ಕರ್ನಾಟಕದ ಗಡಿ ಭಾಗದಲ್ಲಿದ್ದ ದೇವಾಲಯವನ್ನು ನಾಶ ಮಾಡಿದ ಕೇಸುಗಳೂ ಸೇರಿವೆ. ಸ್ವತ: ಸಚಿವ ಶ್ರೀರಾಮುಲುರವರ ಮೇಲೆ ಹಾಕಿದ ಕೇಸು ಇದೆ. ಇದನ್ನು ಮುಚ್ಚಿಹಾಕಲು ರೈತನಾಯಕ ಕರುಬೂರು ಶಾಂತಕುಮಾರ್ ಮತ್ತು ಸಹಚರರ ಮೇಲಿನ ಕೇಸೊಂದನ್ನು ಹಿಂತೆಗೆದುಕೊಳ್ಳಲಾಗಿದೆ.



ಕೃಪೆ: ಪ್ರಜಾವಾಣಿ

ಈ ಕೇಸುಗಳ ಹಿಂತೆಗೆತದ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪನವರು "ಕೇಸು ಹಿಂತೆಗೆತದ ಬಗ್ಗೆ ಅನ್ಯಥಾ ಭಾವಿಸಬಾರದು. ರಾಜ್ಯದ ಹಿತದೃಷ್ಟಿಯಿಂದ ಈ ಕೇಸು ಹಿಂಪಡೆಯಲಾಗಿದೆ" ಎಂದು ಹೇಳಿದ್ದಾರೆಂದು ವರದಿಯಾಗಿದೆ. ವಿರೋಧ ಪಕ್ಷಗಳ ವಾಗ್ದಾಳಿ ನಂತರ ಗೃಹ ಸಚಿವರು ಅಪಾರ ಶ್ರಮ ವಹಿಸಿ ವಿವರಗಳನ್ನೆಲ್ಲಾ ಬಾಯಿಪಾಠ ಮಾಡಿಕೊಂಡು ಸುದ್ದಿಗಾರರಿಗೆ ತಿಳಿಸಿದ್ದಾರೆ. ಅವರು ತಿಳಿಸಿದ ವಿವರಗಳೇ ಸಚಿವ ಸಂಪುಟದ ಕ್ರಮ ಎಷ್ಟೊಂದು ಅಸಮರ್ಥನೀಯ ಎಂಬುದನ್ನು ಎತ್ತಿ ತೋರುವಂತಿದೆ. ಇಷ್ಟಾದರೂ ಸಚಿವ ಶ್ರೀರಾಮುಲುರವರನ್ನು ರೌಡಿ ಪಟ್ಟಿಯಿಂದ ಹೊರತೆಗೆಯಲಾಗಿಲ್ಲ.ಅದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳು ಇನ್ನಷ್ಟು ಸಮಯವನ್ನು ಬೇಡುತ್ತವೆ ಎಂದು ಗೃಹಸಚಿವರಿಗೆ ಬಹಳ ವಿಷಾದವಾಗಿದೆ.

ಇನ್ನು ಸಚಿವ ಶ್ರೀರಾಮುಲು ಹೇಳುತ್ತಾರೆ. "ಸಚಿವ ಸಂಪುಟದ ತೀರ್ಮಾನವನ್ನು ಯಾರೂ ಪ್ರಶ್ನಿಸುವಂತಿಲ್ಲ". ರೌಡಿ ಪಟ್ಟಿಯಲ್ಲಿರುವ ಈ ಸಚಿವರೆಂಬುವವರಿಗೆ ಪ್ರಜಾಪ್ರಭುತ್ವ, ಸಂವಿಧಾನ, ಅಭಿವ್ಯಕ್ತಿ ಸ್ವಾತಂತ್ರ್ಯವೆಂಬ ಯಾವ ಮಾತಿಗೂ ಅರ್ಥ ಸಹ ಗೊತ್ತಿರುವಂತಿಲ್ಲ. ಸರ್ಕಾರವೆಂದರೆ ಸಚಿವ ಸಂಪುಟವೆಂದರೆ ಚೌಪಟ್ ರಾಜ ಅಂಧಾ ದರ್ಬಾರ್ ಎಂದು ಭ್ರಮಿಸಿದ್ದಾರೆ. ಭ್ರಮಿಸಿದ್ದಾರೇಕೆ ಬಳ್ಳಾರಿಯಲ್ಲಿ ಅದನ್ನೇ ನಡೆಸಿದ್ದಾರೆ. ಎಲ್ಲ ಅಧಿಕಾರಿಗಳು ಇವರ ಗುಲಾಮರಂತೆ ಹೇಳಿದ್ದಕ್ಕೆ ಹೂಂಗುಡಬೇಕು. ಯಾವ ಕಾನೂನು, ನಿಯಮಗಳ ಪಾಲನೆಯ ಮಾತೆತ್ತಬಾರದು.'

ಇಡೀ ಜಿಲ್ಲೆಯ ಜನರು ಕುರಿಗಳಂತೆ ಇವರ ಹಿಂದೆ ಸಾಗುತ್ತಿರಬೇಕು. ಇದು ರೆಡ್ಡಿ ಕುಟುಂಬದ ಪ್ರಜಾಪ್ರಭುತ್ವದ ಮಾದರಿ! ಬಳ್ಳಾರಿಯೇಕೆ, ನಾವು ಇಡೀ

ಪುಟ 4ಕ್ಕೆ

ಮಳೆ ಕೊರತೆಯ ನಿಜ ಆತಂಕಗಳು ಮತ್ತು ಮಾಧ್ಯಮಲೋಕದ ಉತ್ಪ್ರೇಕ್ಷೆಗಳು

ಜಿ.ಎನ್.ನಾಗರಾಜ್

ಒಂದು ಕಡೆ ತೀವ್ರ ಬೆಲೆ ಏರಿಕೆ, ಮತ್ತೊಂದು ಕಡೆ ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಉದ್ಯೋಗಕ್ಷಾಮ ಇವುಗಳ ನಡುವೆ ಮಳೆ ಕೊರತೆಯ ಆತಂಕ ದೇಶವನ್ನು ಕಾಡಲಾರಂಭಿಸಿದೆ. ಈಗ್ಗೆ ಕೆಲ ದಿನಗಳಲ್ಲಿ ಮಾಧ್ಯಮ ಪತ್ರಿಕೆಗಳ ಸಾಮ್ರಾಜ್ಯದಲ್ಲಿ ಬರಗಾಲದ ಆರಂಭ ಎನ್ನುವಂತೆ ಚಿತ್ರಿಸಲಾಗುತ್ತಿದೆ. ಮಾಧ್ಯಮ-ಪತ್ರಿಕೆಗಳು ಒಂದು ವಿಷಯವನ್ನು ಹೇಗೆಲ್ಲಾ ಎಳೆದಾಡುತ್ತವೆ. ತಮ್ಮ ತಮ್ಮ ಟಿ.ವಿ. ಛಾನೆಲ್‌ಗಳ-ಪತ್ರಿಕೆಗಳ ಪ್ರಸಾರವನ್ನು ಹೆಚ್ಚಿಸಿಕೊಳ್ಳಲು ಒಬ್ಬರೊಡನೊಬ್ಬರು ಸ್ಪರ್ಧೆ ಹೂಡಿ ಹೆಚ್ಚು ಹೆಚ್ಚು ಆತಂಕಗಳನ್ನು ಸೃಷ್ಟಿಸಬಯಸುತ್ತಾರೆ. ಉತ್ಪ್ರೇಕ್ಷೆ ಅತಿ ಉತ್ಪ್ರೇಕ್ಷೆಯ ಪದ, ಭಾಷೆಗಳನ್ನು ಸಲೀಸಾಗಿ ಬಳಸುತ್ತಾರೆ. ಇಂತಹ ಸಮಯದಲ್ಲಿ ಎಲ್ಲರೂ ಒಂದೇ ರಾಗ ಹಾಡುವುದನ್ನು ಕೇಳಿ ಜನ ನಂಬಲಾರಂಭಿಸುತ್ತಾರೆ. ಹೆಚ್ಚು ಹೆಚ್ಚು ಜನ ಟಿ.ವಿ. ಸುದ್ದಿಗಳನ್ನು ನೋಡಲಾರಂಭಿಸುತ್ತಾರೆ. ಛಾನೆಲ್‌ನಿಂದ ಛಾನೆಲ್‌ಗೆ ಧಾವಿಸುತ್ತಾರೆ. ಯಾರು ಚೀರು ದನಿಯಲ್ಲಿ ಕೂಗಾಡುತ್ತಾರೋ ಆ ಛಾನೆಲ್‌ನತ್ತ ಆಕರ್ಷಿತವಾಗುತ್ತಾರೆ. ಇದು ಭಾರತದ ಜನರ ಜೀವನಾಡಿಯಾದ ಮಾನ್ಸೂನು ಮಳೆಯ ವಿಷಯದಲ್ಲಿಯೂ ನಿಜವಾಗಿದೆ.

ನಿಜ ಆತಂಕಗಳು

ಈ ಬಾರಿ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಮಳೆ ಉತ್ತಮವಾಗಿ ಹಾಗೂ ಬೇಗನೆ ಆರಂಭಗೊಂಡಿದೆ. ಆದರೆ ನಂತರದ ಮೂರು ನಾಲ್ಕು ವಾರಗಳಲ್ಲಿ ಸರಾಸರಿ ಮಳೆಗಿಂತ ಕಡಿಮೆ ಮಳೆಯಾಗಿದೆ. ಆದ್ದರಿಂದ ಬಿತ್ತನೆ ಮಾಡಿದವರಿಗೆ ಆತಂಕ. ಮುಂದಿನ ಬಿತ್ತನೆಗಳು ಸ್ಥಗಿತವಾಗಿವೆ. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಉಳಿದ ಭಾಗಗಳಂತೆ ಮಳೆ ಕೊರತೆ ತೀವ್ರವಾಗಿಲ್ಲ. ವಿವಿಧ ಪ್ರದೇಶಗಳ ಕೊರತೆ ಬಗ್ಗೆ ಬಾಕ್ಸ್ ನೋಡಿ) ಕರ್ನಾಟಕದಲ್ಲಿಯೂ ಹೆಚ್ಚಿನ ಕೊರತೆ ಕಾಣುತ್ತಿರುವುದು ಕರಾವಳಿ ಪ್ರದೇಶದಲ್ಲಿ. ಹೈದರಾಬಾದ್ ಕರ್ನಾಟಕಕ್ಕೂ ಮಳೆ ಕೊರತೆ ಕಾಡಬಹುದೆಂಬ ಮುನ್ಸೂಚನೆ ನೀಡಲಾಗಿದೆ. ಭಾರತದಲ್ಲಿ ಈ ಮೊದಲು ಈ ವರ್ಷದ ಮಳೆ 50 ವರ್ಷದ ಸರಾಸರಿ ಮಳೆಯ ಸನಿಹದಲ್ಲಿರುತ್ತದೆ. ಎಂದರೆ ಸರಿಸುಮಾರು ಸರಾಸರಿ ಮಳೆಯ ನಿರೀಕ್ಷೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಈಗ್ಗೆ 3-4 ವಾರಗಳಿಂದ ಸರಿಯಾಗಿ ಮಳೆಯಾಗಿರದಿದ್ದರೂ ಕೂಡ ಮುಂದೆ ಜುಲೈನಲ್ಲಿ ಅದಕ್ಕಿಂತ ಹೆಚ್ಚಾಗಿ ಆಗಸ್ಟ್‌ನಲ್ಲಿ ಈ ಕೊರತೆ ತುಂಬಿಕೊಳ್ಳುತ್ತದೆ ಎಂದು ಇಲಾಖೆಯ ತಜ್ಞರ ನಿರೀಕ್ಷೆ. ಆದ್ದರಿಂದ ಬಹಳ ಆತಂಕಕ್ಕೆ ಇನ್ನೂ ಕಾರಣವಿಲ್ಲ. ಆದರೆ ಸರಿಸುಮಾರು ಸರಾಸರಿ (ಶೇ.96) ಎಂಬ ಮುನ್ಸೂಚನೆಯನ್ನು ಸರಾಸರಿಗಿಂತ ಸ್ವಲ್ಪ ಕಡಿಮೆ (ಶೇ.93) ಎಂದು ಗುರುತಿಸಲಾಗಿದೆ.

ಮಳೆ ಕೊರತೆಗೆ ಕಾರಣಗಳು :

ಮಳೆ ಕೊರತೆಗೆ ವೈಜ್ಞಾನಿಕವಾಗಿ ಕಾರಣಗಳನ್ನು ಹುಡುಕಲು ಪ್ರಯತ್ನ ನಡೆಸಿದ್ದಾರೆ. ನಮ್ಮ ದೇಶದ ಬಂಗಾಳಕೊಲ್ಲಿಯಲ್ಲಿ ಐಲಾ ಎಂಬ ಮಾರುತವೊಂದು ಹುಟ್ಟಿ ಬಂಗಾಲದಲ್ಲಿ ಪ್ರವಾಹಕ್ಕೆ ಕಾರಣವಾಗಿದ್ದು ಒಂದು ಪ್ರಮುಖ ಕಾರಣ. ದೂರದ ಅಮೇರಿಕಾ ಖಂಡದ ಫೆಸಿಫಿಕ್ ಸಾಗರದಲ್ಲಿ ಸಮುದ್ರದ ಮೇಲ್ಮೈ ಬಿಸಿಯಾಗಿ ಹುಟ್ಟುವ ಎಲ್ ನಿನೊ ಎಂಬ ಬಿಸಿ ನೀರಿನ ಪ್ರವಾಹ (ಪುಟ 6 ರ ಬಾಕ್ಸ್‌ನೋಡಿ) ಹವಾಮಾನದ ಈ ಬೆಳವಣಿಗೆ ಮುಂದಿನ ತಿಂಗಳುಗಳಲ್ಲಿ ಯಾವ ರೀತಿ ಬೆಳೆಯುತ್ತದೆ ಎಂಬುದು ಭಾರತದ ಮಳೆಯ ಪ್ರಮಾಣವನ್ನು ನಿರ್ಧರಿಸಲಿದೆ. ಇದನ್ನು ತಜ್ಞರು ಸೂಕ್ಷ್ಮವಾಗಿ, ನಿರಂತರವಾಗಿ ಗಮನಿಸುತ್ತಾ ಮುನ್ಸೂಚನೆ ನೀಡಬೇಕು. ಅದೇ ಸಮಯದಲ್ಲಿ ಪ್ರಧಾನವಾಗಿ ಕೇಂದ್ರ ಸರ್ಕಾರ ಜೊತೆಗೆ ರಾಜ್ಯ ಸರ್ಕಾರಗಳು ಮಳೆಯ ಕೊರತೆಯನ್ನೆದುರಿಸಲು ಸಿದ್ಧತೆ ನಡೆಸಬೇಕು.

ಸರ್ಕಾರಗಳು ನಡೆಸಬೇಕಾದ ಸಿದ್ಧತೆಗಳು

ಮಳೆಯ ಕೊರತೆ ಮುಖ್ಯವಾಗಿ ನೀರಿನ ಕೊರತೆ, ಕೃಷಿ ಉತ್ಪಾದನೆಯ ಕೊರತೆ ವಿದ್ಯುತ್ ಕೊರತೆ, ಉದ್ಯೋಗ ಕೊರತೆ, ಇವೆಲ್ಲ ಸಮಸ್ಯೆಗಳನ್ನು ತೀವ್ರಗೊಳಿಸುವಂತೆ ಬೆಲೆ ಏರಿಕೆಗಳಿಗೆ ಕಾರಣವಾಗುತ್ತದೆ. ಇವುಗಳಲ್ಲಿ ತೀವ್ರ ಮಳೆ ಕೊರತೆಯಾದರೆ ಇಡೀ ವರ್ಷ ನೀರಿನ ಕೊರತೆ, ಇಲ್ಲವಾದರೆ ತಕ್ಷಣ ನೀರಿನ ಕೊರತೆಗಳಿಗೆ ಸರ್ಕಾರ ಕುಡಿಯುವ ನೀರಿನ ಸಂಪನ್ಮೂಲಗಳನ್ನು ರಕ್ಷಿಸುವುದು, ಹೆಚ್ಚು ನೀರು ಶೇಖರಿಸುವುದು, ಕುಡಿಯುವ ನೀರನ್ನು ಸಾಗಿಸುವುದು, ಒದಗಿಸುವುದು ಮೊದಲಾದ ಕ್ರಮಗಳಿಗೆ ಮುಂದಾಗಬೇಕು.

ಪುಟ 6ಕ್ಕೆ

ಮಳೆಯ ಕೊರತೆಯ ಪ್ರಮಾಣ ಮತ್ತು ಮುಂದಿನ ನಿರೀಕ್ಷೆಗಳು

	ಕೊರತೆಯ ಪ್ರಮಾಣ	ಮುಂದಿನ ನಿರೀಕ್ಷೆ
ಉತ್ತರ ಭಾರತ (ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಹರ್ಯಾಣ, ಕಾಶ್ಮೀರ)	ಶೇ.46	ಶೇ.81
ಕೇಂದ್ರ ಭಾರತ (ಗುಜರಾತ್, ಮಹಾರಾಷ್ಟ್ರ ಮಧ್ಯಪ್ರದೇಶ, ಛತ್ತೀಸ್ ಗಢ, ಒರಿಸ್ಸಾ)	ಶೇ.75	ಶೇ.99
ಈಶಾನ್ಯ ಭಾರತ (ಬಿಹಾರ, ಪ.ಬಂಗಾಳ, ಅಸ್ಸಾಂ ಮತ್ತಿತರೆ ರಾಜ್ಯಗಳು)	ಶೇ.56	ಶೇ.92
ದಕ್ಷಿಣ ಭಾರತ	ಶೇ.25	ಶೇ.92
ದಕ್ಷಿಣ ಕನ್ನಡ ಜಿಲ್ಲೆ	ಶೇ.60	

ಹರಿಹರ : ಬಾಕಿ ತುಟ್ಟಿಭತ್ಯೆ ಪಡೆದೇ

ಧರಣಿ ನಿಲ್ಲಿಸಿದ ಬೀಡಿ ಕಾರ್ಮಿಕರು

ದೊಡ್ಡ ಬಾತಿಯಲ್ಲಿರುವ ಗಣೇಶ ಬೀಡಿ ಕಂಪನಿಯ ಜ್ಯೋತಿ ಹೋಂ ಇಂಡಸ್ಟ್ರೀಸ್ ಕಛೇರಿಯ ಒಳಗಡೆ ಹರಿಹರ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ (ಸಿ.ಐ.ಟಿ.ಯು.) ಜೂನ್ 18 ರಂದು ನೂರಾರು ಕಾರ್ಮಿಕರು ಧರಣಿ ನಡೆಸಿದರು. ಬಾಕಿ ತುಟ್ಟಿಭತ್ಯೆಯನ್ನು ನೀಡಲು ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಮಧ್ಯಾಹ್ನ 1 ಗಂಟೆಯಿಂದ ಸಂಜೆ 6ರವರೆಗೂ ಕಂಪನಿಯ ಪ್ರತಿನಿಧಿಗಳೊಡನೆ ವಾಗ್ವಾದ ಘೋಷಣೆಗಳು ನಡೆದವು. ಬೀಡಿ ಕಾರ್ಮಿಕರು ಅಡುಗೆ ಮಾಡಿ ಅಲ್ಲಿಯೇ ಮಧ್ಯಾಹ್ನ ಊಟ ಉಂಡರು. ಕಾರ್ಮಿಕರ ಚಳುವಳಿಗೆ ಮಣಿದ ಕಂಪನಿಯ ಪ್ರತಿನಿಧಿಗಳು ಕೊನೆಗೆ ಕಾರ್ಮಿಕರೊಬ್ಬರಿಗೆ ತುಟ್ಟಿಭತ್ಯೆ ಬಾಕಿ ರೂ.4,500 ಪಾವತಿಸಿ ಎಲ್ಲಾ ಕಾರ್ಮಿಕರಿಗೆ ಜೂನ್ 22 ರಿಂದ ಬಾಕಿ ಕೊಡುವುದಾಗಿ ಪೊಲೀಸ್ ಅಧಿಕಾರಿಗಳ ಸಮಕ್ಷಮದಲ್ಲಿ ಕಾರ್ಮಿಕ ಮುಖಂಡರಿಗೆ ಭರವಸೆ ನೀಡಿದ ನಂತರ ಹೋರಾಟವನ್ನು ಮುಕ್ತಾಯಗೊಳಿಸಲಾಯ್ತು.

1996 ರಿಂದ 2006 ರವರೆಗಿನ ಬಾಕಿ ತುಟ್ಟಿಭತ್ಯೆಯನ್ನು ಬೀಡಿ ಕಾರ್ಮಿಕರಿಗೆ ಅವರ ಸೇವೆಗೆ ಅನುಗುಣವಾಗಿ ಗರಿಷ್ಟ ರೂ.4,500 ನ್ನು 31.07.07 ರೊಳಗೆ ಸಲ್ಲಿಸಬೇಕೆಂದು ಮಾಲೀಕರು, ಸರ್ಕಾರ ಮತ್ತು ಕಾರ್ಮಿಕ ಮುಖಂಡರ ಮಧ್ಯೆ ತ್ರಿಪಕ್ಷೀಯ ಒಪ್ಪಂದವು ಜನವರಿ 2007 ರಲ್ಲಿ ಆಗಿತ್ತು. ಕಾರ್ಮಿಕರಿಗೆ ಹಣ ಕೊಡಲು ಮನಸ್ಸಿಲ್ಲದ ಬೀಡಿ ಕಂಪನಿಗಳ ಮಾಲೀಕರ ಒಕ್ಕೂಟವು, ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ಗಳ ಮೆಟ್ಟಲೇರಿದ್ದರೂ ವಿಫಲರಾದರು. ಕೊನೆಗೆ ಕುಂಟುನೆಪಗಳ ಮೂಲಕ ಕಾರ್ಮಿಕರಲ್ಲಿ ಗೊಂದಲವೆಬ್ಬಿಸುತ್ತಾ ಕಾಲಹರಣ ಮಾಡುತ್ತಿದ್ದ ಬೀಡಿ ಕಂಪನಿಗಳನ್ನು ಹೋರಾಟಗಳ ಮೂಲಕ ಮಣಿಸುವಲ್ಲಿ ಸಿ.ಐ.ಟಿ.ಯು ನೇತೃತ್ವದ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಯಶಸ್ವಿಯಾಯ್ತು.

ಚಳುವಳಿಗಳ ಫಲವಾಗಿ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳ 3 ಲಕ್ಷ ಬೀಡಿ ಕಾರ್ಮಿಕರು ತ್ರಿಪಕ್ಷೀಯ ಒಪ್ಪಂದದಂತೆ ಸುಮಾರು ರೂ.70.32 ಕೋಟಿ ಹಣವನ್ನು ಮಾಲೀಕರಿಂದ ಪಡೆಯುವಲ್ಲಿ ಸಫಲರಾದರು. ಆದರೆ ದಾವಣಗೆರೆ, ಹರಿಹರ ಪ್ರದೇಶದಲ್ಲಿ ನಿನ್ನೆಯವರೆಗೂ ಬಾಕಿ ತುಟ್ಟಿಭತ್ಯೆಯನ್ನು ಯಾವ ಒಬ್ಬ ಬೀಡಿ ಕಂಪನಿ ಮಾಲೀಕರೂ ನೀಡಿರಲಿಲ್ಲ. ಸಿಐಟಿಯು ನೇತೃತ್ವದಲ್ಲಿ ಕಳೆದ ಅನೇಕ ವರ್ಷಗಳ ಹೋರಾಟ, ಧರಣಿ, ಮನವಿಗಳಿಗೆ ಕೊನೆಗೂ ಇಂದು ಯಶಸ್ಸು ದೊರೆಕಿದೆ. ಭಾರತ್ ಬೀಡಿ ಕಂಪನಿಯವರು ಜೂನ್ 30, 2009 ರೊಳಗೆ ಹಣ ಪಾವತಿ ಆರಂಭಿಸುವುದಾಗಿ ಮತ್ತು ಗಣೇಶ ಬೀಡಿಯವರು ಜೂನ್ 22 ರಿಂದ ಕೊಡುವುದಾಗಿ ಘೋಷಿಸಿದ್ದು, ಚಳುವಳಿಗೆ ಸಿಕ್ಕ ಜಯವಾಗಿದೆ.

ಹೋರಾಟದ ನೇತೃತ್ವವನ್ನು ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್, ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಎಲ್.ಭಟ್ ಹರಿಹರ ತಾಲ್ಲೂಕು, ಬೀಡಿ ಕೆಲಸಗಾರರ ಸಂಘದ ಉಬೇದುಲ್ಲಾ, ಬಾಬಾಜಾನ್, ಮುಮ್ತಾಜ್‌ಬಿ, ರಜಿಯಾಬಿ, ಮಹಮ್ಮದ್ ಅಶ್ವಾಕ, ಬಿ.ಜಿ.ನಜೀರ್‌ಖಾನ್, ಹರಪನಹಳ್ಳಿಯ ರೇಣುಕಾ, ಮುಜುಬಾಬಿ, ಮಲೆಬೆನ್ನೂರಿನ ಸಲೀಮಾಬಿ, ಖಮರ್‌ತಾಜ್ ಮೊದಲಾದವರು ವಹಿಸಿದ್ದರು.

- ಕೆ.ಲಕ್ಷ್ಮಿನಾರಾಯಣ ಭಟ್

ರೆಡ್ಡಿ ಗುಂಪಿನ ಮೇಲಿನ ಕ್ರಿಮಿನಲ್ ಮೊಕದ್ದಮೆಗಳ ಮಾಫಿ

ಪುಟ 3 ರಿಂದ

ರಾಜ್ಯಕ್ಕೇ ಸಚಿವರಾಗಿರುವಾಗ ಇಡೀ ರಾಜ್ಯಕ್ಕೂ ಇದೇ ಮಾದರಿ ಅಳವಡಬೇಕು. ರಾಜ್ಯಮಟ್ಟದ ಅಧಿಕಾರಿಗಳ ಶಾಸನ ಸಭೆ, ನ್ಯಾಯಾಲಯ ಇವೆಲ್ಲಾ ಯಾಕೆ ಎಂಬ ಶ್ರೇಷ್ಠ ವೈಚಾರಿಕ ಚಿಂತನೆ ಇವರದು.

ಈ ಚಿಂತನೆಯನ್ನು ಕರ್ನಾಟಕ ರಾಜ್ಯದ ಮೇಲೆ ಹೇರಲು, ಯಡಿಯೂರಪ್ಪನವರ ಮೇಲೆ ಹೇರಲು ಹೊರಟ ರೆಡ್ಡಿ ಧಣಿಗಳು ಹಿಂದಿನ ಸಂಚಿಕೆಯಲ್ಲಿ ವಿವರಿಸಿದಂತೆ ಒಳಗೊಳಗೇ ಒಪ್ಪಂದ ಮಾಡಿಕೊಳ್ಳುವ ಮೂಲಕ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದಾರೆ. ಅದರ ಒಂದು ಸಾಕ್ಷಿ ಈ ಕೇಸುಗಳ ವಾಪಸಾತಿ.

ರಾಜ್ಯದಲ್ಲಿ ಇಲ್ಲಿಯವರೆಗೆ ಅನೇಕ ಕೇಸುಗಳನ್ನು ರಾಜ್ಯ ಸರ್ಕಾರ ವಾಪಸ್ ಪಡೆದ ಬಗ್ಗೆ ಕೇಳಿದ್ದೇವೆ. ರಾಜ್ಯದ ಕಾರ್ಮಿಕ ರೈತ ಮತ್ತಿತರ ಚಳುವಳಿಗಳ ಪರವಾಗಿ ಸಿಪಿಐ(ಎಂ) ಅಂತಹ ಮನವಿಯನ್ನೂ ಸಲ್ಲಿಸಿದೆ. ರಾಜ್ಯದ ಜನರ ಸಮಸ್ಯೆಗಳಿಗಾಗಿ ಜನಸಮುದಾಯ ವಿವಿಧ ಸಂಘಟನೆಗಳ ಮೂಲಕ ಹೋರಾಟಕ್ಕಿಳಿದಾಗ, ಆ ಸಂದರ್ಭದಲ್ಲಿ ಆಗುವ ಕಾನೂನಿನ ಉಲ್ಲಂಘನೆಗಳ ಬಗ್ಗೆ ಅಥವಾ ಅಂತಹ ಸಂದರ್ಭದಲ್ಲಿ ಚಳುವಳಿಕಾರ ಜನತೆಗೆ, ನಾಯಕರಿಗೆ ಭಯ ಹುಟ್ಟಿಸಲು ಸೃಷ್ಟಿಸಿದ ಕ್ರಿಮಿನಲ್ ಪ್ರಕರಣಗಳನ್ನು ಸಚಿವ ಸಂಪುಟ ಹಲವು ತಿಂಗಳುಗಳ ವಿವರ ಸಂಗ್ರಹ, ವಿವೇಚನೆಗಳ ಮೇಲೆ ಆಧರಿಸಿ ಕೈಬಿಡುವ ಉದಾಹರಣೆಗಳನ್ನು ಕೇಳಿದ್ದೇವೆ.

ಇದೇ ಮೊದಲು ನೇರವಾಗಿ ಕ್ರಿಮಿನಲ್‌ಗಳನ್ನೇ ರಕ್ಷಿಸುವ ಕ್ರಮವನ್ನು ಕೈಗೊಂಡು ಬಿಜೆಪಿ ಸಚಿವ ಸಂಪುಟ ಇಡೀ ದೇಶಕ್ಕೇ ಒಂದು ಮಾದರಿ ರೂಪಿಸಿದೆ. ಇನ್ನು ಚುನಾವಣಾ ಸಂಹಿತೆ ಎಂಬುದಕ್ಕೆ ಏನೂ ಅರ್ಥವಿಲ್ಲ ಎಂಬಂತಾಗಿದೆ. ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಬಿಜೆಪಿಯೊಳಗಿನ ಎಲ್ಲ ಗುಂಪುಗಳೂ, ಯಡಿಯೂರಪ್ಪನವರ ಜೊತೆಗೆ ಅನಂತಕುಮಾರ್ ಕೂಡ ಹೇಗೆ ಒಂದಾಗಿ ಎಂತಹ ಅನೈತಿಕ ಕೃತ್ಯಕ್ಕೂ ಕೈಹಾಕಬಲ್ಲರು ಎಂಬುದಕ್ಕೆ ಮತ್ತೆ ಮತ್ತೆ 'ಮಾದರಿ'ಗಳನ್ನು ಸೃಷ್ಟಿಸಿದ್ದಾರೆ. ಆಪರೇಷನ್ ಕಮಲ ಎಂಬ ಇಡೀ ದೇಶಕ್ಕೆ ಹಾಕಿಕೊಟ್ಟ ಮಾದರಿ ಅಂತಿರಲಿ, ಬಾಬಾಬುಡನ್‌ಗಿರಿಯ ಪ್ರಕರಣದ ಮುತಾಲಿಕ್, ದೇಸಾಯಿ, ಸಿ.ಟಿ.ರ... ಮೊದಲಾದವರ ಮೇಲಿನ ಕೇಸುಗಳು ಮತ್ತೊಂದು ಮಾದರಿ. ಇನ್ನು ಕೇಸು ಹಾಕಿ ಹಿಂಪಡೆಯುವ ತಾಪತ್ರಯ ಏಕೆ ಎಂದು ... ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು, ಉತ್ತರಕನ್ನಡ ಮತ್ತಿತರೆ ಜಿಲ್ಲೆಗಳಲ್ಲಿ ನೂರಾರು ಸಂಘ ಪರಿವಾರದ ಗ್ಯಾಂಗ್‌ಗಳ ಮೇಲೆ ಕೇಸು ದಾಖಲು ಮಾಡುವುದನ್ನೇ ಕೈಬಿಡಲಾಗಿದೆ. ಜೈಲಿನೊಳಗೆ ಇರಬೇಕಾದವರೆಲ್ಲಾ ಇಂದು ಧೈರ್ಯವಾಗಿ ಓಡಾಡುತ್ತಿದ್ದಾರೆ. ಅದೇ ಸಮಯದಲ್ಲಿ ಹಾವೇರಿಯಲ್ಲಿ ರೈತರನ್ನು ಗೂಂಡಾಗಳೆಂದು ಬಿಂಬಿಸಲಾಗುತ್ತಿದೆ. ಹಾವೇ... ದಾವಣಗೆರೆ, ಮೊದಲಾದ ಕಡೆಗಳಲ್ಲಿ ನೂರಾ... ರೈತರ ಮೇಲೆ ಮಂಡ್ಯದಲ್ಲಿ ಭಾಗ್ಯಜ್ಯೋತಿ ಮೀಟರುಗಳನ್ನು ಹಿಂದಿರುಗಿಸಿದ ಕೃಷಿ ಕೂಲಿಕಾರರು ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಯುವಕರು, ಅಂಗವಿಕಲರ ಮೇಲೆ ಕೂಡ ಹಾಕಿದ ಕೇಸುಗಳು ಹಾಗೇ ಇವೆ. ಇದು ತೋಳಗಳ ಆಡಳಿತದ ನ್ಯಾಯದಾನ!

ಎರಡು ತಲೆ ಹಾವು

ಕ್ಯಾತೆ


ಶ್ರೀ

ಎರಡು ತಲೆ ಹಾವನ್ನು ಸಾಕಿದರೆ ಅದೃಷ್ಟ ಒಲಿಯುತ್ತದೆ ಅಂತ ನಂಬಿಕೆ ಇದೆಯಂತೆ. ಹದಿನೈದು ಲಕ್ಷ ರೂಗಳಿಗೆ ವ್ಯವಹಾರ ಕುದುರಿಸಿ ಆಂಧ್ರದಿಂದ ಬೆಂಗಳೂರಿಗೆ ತರುತ್ತಿದ್ದ ಅಪರೂಪದ ಹಾವನ್ನು ಪೋಲೀಸರು ವಶಪಡಿಸಿಕೊಂಡು ಸಾಗಿಸುತ್ತಿದ್ದವರನ್ನು ಬಂಧಿಸಿದ್ದಾರೆ ಅಂತ ಸುದ್ದಿ.

ಸನ್ಮಾನ್ಯ ಮುಖ್ಯ ಮಂತ್ರಿ ಯಡಿಯೂರಪ್ಪನವರು ಇಂಥ ಅನೇಕ ಎರಡು ತಲೆ ಹಾವುಗಳನ್ನು ಸಾಕುತ್ತಿರುವುದರಿಂದಲೇ ಅವರ ಅದೃಷ್ಟ ಚೆನ್ನಾಗಿದೆ ಅನ್ನುವುದು ಕುಹಕವಿರಲಾರದು. ಒಂದು ಸಣ್ಣ ಉದಾಹರಣೆ ನೋಡಿ. ಸನ್ಮಾನ್ಯ ಇಂ ದನ ಸಚಿವ ಈಶ್ವರಪ್ಪನವರು ಕೆಲವೇ ದಿನಗಳ ಹಿಂದೆ ಯಡಿಯೂರಪ್ಪನವರನ್ನು ಹಿಗ್ಗಾ ಮುಗ್ಗಾ ಜಾಲಾಡುತ್ತಿದ್ದರು. ಈಗ ಹಿಗ್ಗಾಮುಗ್ಗಾ ಹೊಗಳಾಡುತ್ತಿದ್ದಾರೆ. ಇದು ಎರಡು ತಲೆಯ ಪ್ರಭಾವವೋ? ಎರಡು ನಾಲಿಗೆಯ ಪ್ರಭಾವವೋ? ಅಥವಾ ವ್ಯವಹಾರ ಕುದುರಿದ ಪ್ರಭಾವವೋ? ಎರಡು ತಲೆಯ ಒಂದು ಹಾವಿಗೇ ಹದಿನೈದು ಲಕ್ಷ ರೂಗಳಾದರೆ ಇನ್ನು ಅನೇಕ ತಲೆಗಳ ಅನೇಕ ನಾಲಿಗೆಗಳ ಹಾವುಗಳಿಗೆ ಎಷ್ಟು ಬೆಲೆಯಿರಬಹುದು? ಸನ್ಮಾನ್ಯ ಮುಖ್ಯ ಮಂತ್ರಿಯವರೇ ಇಷ್ಟೊಂದು ಎರಡು ತಲೆ ಹಾವುಗಳನ್ನು (ಆಂಧ್ರದ ಕಡೆಯಿಂದ ಬಂದವುಗಳನ್ನೂ ಸೇರಿ!) ಸಾಕುತ್ತಿರುವಾಗ, ಹಾವನ್ನು ಸಾಗಿಸುತ್ತಿದ್ದವರನ್ನು ಬಂಧಿಸಿದ್ದಾದರೂ ಯಾಕೆ? ತಪ್ಪು ಯಾರದು? ಎರಡು ತಲೆ ಹೊಂದಿದ ಹಾವಿನದೇ? ಹಿಡಿದು ಸಾಗಿಸುತ್ತಿದ್ದವರದ್ದೇ? ವ್ಯವಹಾರ ಕುದುರಿಸಿದವರದ್ದೇ? ಅದೇನೇ ಇರಲಿ ಸರಕಾರದಲ್ಲಿ ಹೇಗೋ ಇಂಥ ಹಾವುಗಳನ್ನು ಸಾಕಬಹುದು. ಆದರೆ ಪೋಲೀಸ್ ಠಾಣೆಯಲ್ಲಿ ಅದನ್ನು ಸಾಕುವುದಾದರೂ ಹೇಗೆ? ಪಾಪ ಪೋಲೀಸರು ಅದನ್ನು ಹೇಗಾದರೂ ಸಾಕಿಯಾರು, ಆದರೆ ಅನೇಕ ತಲೆ ಸರಕಾರಿ ಹಾವುಗಳ ತಂಟೆಗೆ ಹೋಗಲಾರರು ಅಲ್ಲವೇ?

ಅದೃಷ್ಟಕ್ಕೂ ಪಾಪ ಪುಣ್ಯಗಳಿಗೂ ಏನಾದರೂ ಸಂಬಂಧವಿದೆಯೋ? ಯಡಿಯೂರಪ್ಪನವರ ಹೆಸರಿನಲ್ಲೇ ಪ್ರಮಾಣವಚನ ಸ್ವೀಕರಿಸಿ, ದಿನ ನಿತ್ಯ ಅವರ ಹೆಸರಿನಲ್ಲಿ ಎಲ್ಲ ದೇವಸ್ಥಾನಗಳಲ್ಲಿ ಅರ್ಚನೆ ಮಾಡಿಸಿ, ಏಕಾದಶಿ ದಿನ ಲಾಡು ಹಂಚಿ, ಶಿವರಾತ್ರಿ ದಿನ ಗಂಗಾಜಲ ಹಂಚಿ ಏನೇನೆಲ್ಲ ಪುಣ್ಯ ಕಾರ್ಯಗಳನ್ನು ಮಾಡಿದರೂ ಪಾಪ ಕೃಷ್ಣಯ್ಯ ಶೆಟ್ಟರಿಗೆ ಅದೃಷ್ಟ ಒಲಿಯಲೇ ಇಲ್ಲ. ದೇವಸ್ಥಾನದ ಮಂತ್ರಿಯಾಗಿದ್ದವರು ತಿರುಪತಿಗೆ ಹೋಗಿ ತಲೆ ಬೋಳಿಸಿಕೊಂಡು ಚರಂಡಿಯ ಒಳ ಅಧ್ಯಕ್ಷ, ಅಲ್ಲಲ್ಲ, ಒಳ ಚರಂಡಿಯ ಅಧ್ಯಕ್ಷ ಆದರು! ಇವರ ಪರಿಸ್ಥಿತಿ ನೋಡಿ ಇವರ ಅಭಿಮಾನಿಗಳು ತಲೆ ತಲೆ ಚಚ್ಚಿಕೊಂಡರು. ಇನ್ನೂ ಏನೇನು ಪುಣ್ಯಕಾರ್ಯಗಳನ್ನು ಹಮ್ಮಿಕೊಂಡಿದ್ದರೋ ಏನೋ ಪಾಪ! ಚರಂಡಿಯಲ್ಲಿ ಕೊಚ್ಚಿಕೊಂಡು ಹೋಯಿತು! (ಅಭಿಷೇಕನ ಹಾಗೆ?). ಇನ್ನು ಗಂಗಾಜಲವನ್ನು ಚರಂಡಿಯಲ್ಲಿ ಹರಿಸಿ ಚರಂಡಿಯನ್ನು ಪವಿತ್ರಗೊಳಿಸುತ್ತಾರೋ ಏನೋ ಕಾದು ನೋಡಬೇಕು.

ಯಡಿಯೂರಪ್ಪನವರ ಸರಕಾರ ಕಲ್ಲು ಬಂಡೆಯಹಾಗೆ ಅಂತ ಈಶ್ವರಪ್ಪನವರು ಹೇಳಿದ್ದಾರಂತೆ. (ನಾಳೆ ನಾನು ಹಾಗೆ ಹೇಳೇ ಇಲ್ಲ ಮಾಧ್ಯಮದವರು ತಪ್ಪು ವರದಿಮಾಡಿದ್ದಾರೆ ಅಂತ ಹೇಳಿದರೆ ನನಗೆ ಗೊತ್ತಿಲ್ಲ.) ತಲೆ ಗಟ್ಟಿ ಇದೆ ಅಂತ ಬಂಡೆಗೆ ಚಚ್ಚಿಕೊಂಡ ಮೇಲೆ ತಿಳಿಯಿತೇನೋ? ಜನ ಸಾಮಾನ್ಯರ ಸಮಸ್ಯೆಗಳಿಗೆ ಕಿಂಚಿತ್ತೂ ಸ್ಪಂದಿಸದೆ ಗೋರ್ಕಲ್ಲಿನಂತಿರು... ಸರಕಾರ ಬಂಡೆ ಸರಕಾರವೋ, ಭಂಡ ಸರಕಾರವೋ? ಜನರಿಗೆ ತಿಳಿಯದೇ?



ಕರಾವಳಿಯ ರೈತ ಚಳುವಳಿಯ ಒಬ್ಬ ನೆಚ್ಚಿನ ಸಂಗಾತಿ ನಮ್ಮಿಂದ ದೂರವಾಗಿದ್ದಾರೆ. ನಮ್ಮನ್ನಗಲಿದ್ದಾರೆ

ದಕ್ಷಿಣ ಕನ್ನಡ ಜಿಲ್ಲೆ ರೈತ ನಾಯಕ ಕಾಂ. ರಾಮಚಂದ್ರ ಉಚ್ಚಿಲ್ ಇನ್ನಿಲ್ಲ

ಕೆ.ಆರ್.ಶ್ರೀಯಾನ್

ಸುಮಾರು ನಾಲ್ಕುವರೆ ದಶಕಗಳಿಗೂ ಮಿಕ್ಕಿದ ಕಾಲಾವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಾಲಕರ ದಬ್ಬಾಳಿಕೆಗೊಳಗಾಗಿದ್ದ ಸಹಸ್ರಾರು ರೈತರನ್ನು ಸಂಘಟಿಸಿ ಅವರ ಹೋರಾಟಗಳಿಗೆ ಮುಂಚೂಣಿಯಲ್ಲಿದ್ದು ನೇತೃತ್ವ ನೀಡಿದ್ದ ರೈತ ಮುಖಂಡರೂ, ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಆಗಿದ್ದ ಕಾ.ರಾಮಚಂದ್ರ ಉಚ್ಚಿಲರು (68) ತಾ.21.6.2009 ರಂದು ಹೃದಯಾಘಾತದಿಂದ ನಿಧನರಾದರು. ಇವರ ನಿಧನದಿಂದ ದಕ್ಷಿಣ ಕನ್ನಡ ಜಿಲ್ಲೆಯ ರೈತ ಚಳುವಳಿಗೆ ಹಾಗೂ ಸಿಪಿಐ(ಎಂ) ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ. ಬಡ ಕುಟುಂಬದಲ್ಲಿ ಜನಿಸಿದ ಕಾ.ಉಚ್ಚಿಲರು ಸೋಮೇಶ್ವರ ಗ್ರಾಮದ ಉಚ್ಚಿಲ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಕುಟುಂಬದ ಪೋಷಣೆಗಾಗಿ ಮರದ ಕೆಲಸದ ಕಾರ್ಮಿಕನಾಗಿ ಸಣ್ಣ ಪ್ರಾಯದಲ್ಲೇ ದುಡಿಮೆಗೆ ಸೇರಿದ್ದರು. ವಿದ್ಯಾಭ್ಯಾಸ ಮಾಡಲು ಬಡತನದ ದೆಸೆಯಿಂದ ಮನೆಯಲ್ಲಿ ಪ್ರೋತ್ಸಾಹವಿರಲಿಲ್ಲ. ಆದ್ದರಿಂದ ಚಿಕ್ಕಂದಿನಿಂದಲೇ ಕೆಲಸ ಮಾಡಬೇಕಾಗಿ ಬಂತು.

ಬಾಲ್ಯದಲ್ಲೇ ಕಮ್ಯುನಿಸ್ಟ್ ಚಳುವಳಿಯ ಸೆಳೆತ

ಚಿಕ್ಕಂದಿನಿಂದಲೇ ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತರಾದರು. ತನ್ನ ವಾಸ ಸ್ಥಳದಲ್ಲಿ, ಸುತ್ತಮುತ್ತಲ ಪ್ರದೇಶಗಳಲ್ಲಿರುವ ಕಾರ್ಮಿಕರ ಮಧ್ಯೆ, ರೈತರ ಮಧ್ಯೆ ಸಂಪರ್ಕ ಬೆಳೆಸಿ ಅವರೊಂದಿಗೆ ಬೆರೆತರು. ಮಂಗಳೂರಿನಲ್ಲಿ ಸಂಘಟಿತರಾಗಿದ್ದ ಹಂಚಿನ ಕಾರ್ಮಿಕರು ಅನೇಕರು ಅವರು ವಾಸಿಸುತ್ತಿದ್ದ ಪ್ರದೇಶದಲ್ಲಿ ಆಸುಪಾಸಿನ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅವರು ಕಾರ್ಖಾನೆಗಳಲ್ಲಿ ನಡೆಸುತ್ತಿದ್ದ ಹೋರಾಟಗಳ ಬಗ್ಗೆ ತಿಳಿದುಕೊಳ್ಳಲು ಚಿಕ್ಕಪ್ರಾಯದಲ್ಲೇ ಕಾ.ಉಚ್ಚಿಲರು ಹೆಚ್ಚು ಉತ್ಸುಕತೆ ತೋರಿಸುತ್ತಿದ್ದರು. ಮತ್ತು ಅವರೊಂದಿಗೆ ಚರ್ಚೆ ಮಾಡುತ್ತಿದ್ದರು. ಕಾ.ರಾಮಚಂದ್ರ ಉಚ್ಚಿಲರು ವಾಸಿಸುತ್ತಿದ್ದ ಪ್ರದೇಶದ ಸುತ್ತಲಿನ ಗ್ರಾಮಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಚಟುವಟಿಕೆಗಳು ನಡೆಯುತ್ತಿದ್ದವು. ಹಂಚಿನ ಕಾರ್ಖಾನೆಗಳ ಅನೇಕ ಕಾರ್ಮಿಕರು ತಮ್ಮ ಗ್ರಾಮಗಳಲ್ಲಿ ಪಾರ್ಟಿ ಶಾಖೆಗಳಲ್ಲಿದ್ದು ಅಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದರು. ಅಂದಿನ ದಿನಗಳಲ್ಲಿ 1948ರ ಬಳಿಕ ಈ ಪ್ರದೇಶದಲ್ಲಿ ರೈತ ಸಂಘದ ಚಟುವಟಿಕೆಗಳೂ ಬೆಳೆದು ಬರುತ್ತಿದ್ದವು. ಎ.ಕೃಷ್ಣ ಶೆಟ್ಟರು ಈ ಪ್ರದೇಶದವರೇ ಆಗಿದ್ದು ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿದ್ದರು. ಕೋಟೆಕಾರು ಮತ್ತು ಸುತ್ತಲಿನ ಗ್ರಾಮಗಳಲ್ಲಿ ಚಾಲಗೇಣಿ ವಕ್ಕಲುಗಳಿಗೆ ಭೂಮಾಲಕರಿಂದ ಆಗುತ್ತಿದ್ದ ಕಿರುಕುಳ, ದೌರ್ಜನ್ಯಗಳ ವಿರುದ್ಧವಾಗಿ ರೈತರು ನಡೆಸುತ್ತಿದ್ದ ಪ್ರತಿಭಟನೆಗಳಿಗೆ ತಾನೊಬ್ಬ ಭೂಮಾಲಕ ಕುಟುಂಬದಲ್ಲಿ ಜನಿಸಿದವರಾಗಿದ್ದರೂ ರೈತರಿಗೆ ಸಹಾಯ ಮಾಡುತ್ತಿದ್ದರು. ಕೋಟೆಕಾರ್ ಸರ್ಕಲ್‌ನಲ್ಲಿ ರೈತ ಸಂಘದ ಚಟುವಟಿಕೆಗಳಿಗೆ ಕೃಷ್ಣ ಶೆಟ್ಟರು ಮಾರ್ಗದರ್ಶನ ನೀಡುತ್ತಿದ್ದರು. ಆಗಲೇ ಎಂ.ಎಚ್.ಕೃಷ್ಣಪ್ಪನವರು ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕೃಷ್ಣ ಶೆಟ್ಟರು ಈ ಪ್ರದೇಶದ ಪಕ್ಷದ ಮುಖ್ಯ ಕಾರ್ಯಕರ್ತರಾಗಿದ್ದ ಯು.ಜನಾರ್ಧನ ನಾಯಕ್‌ರನ್ನು ಸದಾ ತನ್ನೊಂದಿಗೆ ಸೇರಿಸಿಕೊಂಡು ಪಕ್ಷದ ಹಾಗೂ ರೈತ ಸಂಘದ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಇವರಿಂದ ಆಕರ್ಷಿತರಾದ ಕಾ.ಉಚ್ಚಿಲರೂ 1955 ರ ಬಳಿಕ ಇವರೊಂದಿಗೆ ಸಂಪರ್ಕವಿರಿಸಿ ತಾನೂ ಕಾರ್ಯಕ್ರಮಗಳಲ್ಲಿ ಭಾಗವಹಿಸ ತೊಡಗಿದರು. ಗ್ರಾಮಗಳಿಗೆ ಇವರೊಂದಿಗೆ ಭೇಟಿ ಕೊಟ್ಟು ರೈತರನ್ನು ಸಂಘಟಿಸುವ ಕೆಲಸದಲ್ಲಿ ಹೆಚ್ಚು ಮುತುವರ್ಜಿವಹಿಸಿ ಕೆಲಸ ಮಾಡಲು ಆರಂಭಿಸಿದರು.

ರೈತ ಆಂದೋಲನದಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿ ಬೆಳೆದು ಬರುತ್ತಿತ್ತು. ಅದೇ ರೀತಿ ಜಿಲ್ಲೆಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಚಳುವಳಿಯೂ ಬೆಳೆದು ಬರುತ್ತಿತ್ತು. ರೈತರ ಹೋರಾಟಗಳಿಗೆ ಸಂಘಟಿತ ಕಾರ್ಮಿಕರು ಬೆಂಬಲ ನೀಡುತ್ತಿದ್ದರು. ತಾವು ಉಳುಮೆ ಮಾಡುತ್ತಿದ್ದ ಭೂಮಿಯಲ್ಲಿ ಶಾಶ್ವತ ಭದ್ರತೆಯಿಲ್ಲದೆ ಚಾಲಗೇಣಿ ವಕ್ಕಲುಗಳಾಗಿ ಸಹಸ್ರಾರು ಸಂಖ್ಯೆಯಲ್ಲಿ ರೈತರು ಉಳುಮೆ ಮಾಡುತ್ತಿದ್ದರು. ಭೂಮಾಲಕರು ರೈತರಿಂದ ವಿಪರೀತ ಗೇಣಿ ವಸೂಲಿ ಮಾಡುತ್ತಿದ್ದರು. ಗೇಣಿ ಕೊಡದಿದ್ದರೆ ಬಲಾತ್ಕಾರವಾಗಿ ವಕ್ಕಲೆಬ್ಬಿಸುತ್ತಿದ್ದರು. ಹೀಗೆ ಸದಾ ದಬ್ಬಾಳಿಕೆಯಡಿಯಲ್ಲಿ ರೈತರು ಬದುಕ ಬೇಕಾಗಿತ್ತು. ಇದರಿಂದಾಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ಸಹಸ್ರಾರು ಚಾಲಗೇಣಿ ವಕ್ಕಲುಗಳ ರಕ್ಷಣೆಗೆ ರೈತ ಸಂಘಟನೆಯ ಅವಶ್ಯಕತೆಯಿತ್ತು. ಈ ಹಿನ್ನೆಲೆಯಲ್ಲಿ ಎಂ.ಎಚ್. ಕೃಷ್ಣಪ್ಪ, ಎ.ಕೃಷ್ಣ ಶೆಟ್ಟಿಯವರ ನೇತೃತ್ವದಲ್ಲಿ ದ.ಕ. ಜಿಲ್ಲಾ ರೈತ ಸಂಘ ಸ್ಥಾಪನೆಯಾಯಿತು. 1954 ರಲ್ಲಿ ದ.ಕ. ಜಿಲ್ಲಾ ಪ್ರಥಮ ರೈತ ಸಮ್ಮೇಳನ ನಡೆಯಿತು. ಕೃಷ್ಣ ಶೆಟ್ಟರು ಅಧ್ಯಕ್ಷರಾಗಿಯೂ, ಎಂ.ಎಚ್.ಕೃಷ್ಣಪ್ಪ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ಬಿ.ಕೊರಗಪ್ಪ ರೈಯವರೂ ರೈತ ಸಂಘದಲ್ಲಿ ಕೆಲಸ ಮಾಡುತ್ತಿದ್ದರು. ಕೋಟೆಕಾರ್ ಸರ್ಕಲ್‌ನಲ್ಲಿ ರೈತ ಸಂಘದ ನಾಯಕರಾಗಿ ಕೊರಗಪ್ಪ ರೈಯವರು ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಚಳುವಳಿ, ಪ್ರತಿಭಟನೆಗಳು ಎದ್ದು ಬರುತ್ತಿದ್ದವು.

ರೈತರು ಸಹಸ್ರಾರು ಸಂಖ್ಯೆಯಲ್ಲಿ ರೈತ ಸಂಘಕ್ಕೆ ಸೇರಿದರು. ಚಳುವಳಿಗೆ ತೀವ್ರತೆ ಬಂತು. ದ.ಕ.ಜಿಲ್ಲಾ ರೈತ ಸಂಘವು ಈ ನಿಟ್ಟಿನಲ್ಲಿ ವಿಶಾಲ ಪ್ರಚಾರ ಆರಂಭಿಸಿತು. ವಕ್ಕಲೆಬ್ಬಿಸುವುದಕ್ಕಿದಿರಾಗಿ, ವಿಪರೀತ ಗೇಣಿ ವಿಧಿಸುವುದಕ್ಕಿದಿರಾಗಿ ಪ್ರತಿಭಟನೆಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಯು.ಜನಾರ್ಧನ ನಾಯಕ್‌ರೊಂದಿಗೆ ರಾಮಚಂದ್ರ ಉಚ್ಚಿಲರೂ ರೈತ ಸಂಘದಲ್ಲಿ ಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡರು.

ಬೆಂಗಳೂರಿಗೆ ಕಾಲ್ನಡಿಗೆ ಜಾಥಾ

ಉಳುವವನೇ ಹೊಲದೊಡೆಯ ಎಂಬ ರೈತ ಸಂಘದ ಘೋಷಣೆಯಡಿಯಲ್ಲಿ ಜಿಲ್ಲೆಯಲ್ಲಿ ರೈತ ಸಂಘವು ಹೆಚ್ಚು ಆಕರ್ಷಣೆ ಪಡೆಯಿತು. ಜಿಲ್ಲೆಯ ರೈತರ ತೀವ್ರ ಹೋರಾಟಗಳ ಫಲವಾಗಿ 1956 ರಲ್ಲಿ ಅಂದಿನ ಮದರಾಸು ಸರಕಾರವು ನ್ಯಾಯ ಗೇಣಿ ಕಾಯಿದೆ ಜ್ಯಾರಿಗೆ ತಂದಿತು. ರೈತ ಸಂಘದ ಮೂಲಕ ನ್ಯಾಯ ಗೇಣಿ ಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿದ ಸಹಸ್ರಾರು ರೈತರಿಗೆ ಅರ್ಧಕ್ಕರ್ಧ ಗೇಣಿ ಕಡಿಮೆಯಾಯಿತು. ನ್ಯಾಯಗೇಣಿ ಕೋರ್ಟ್‌ಗಳಲ್ಲಿ ರೈತ ಸಂಘದ ಮುಖಂಡರುಗಳೇ ರೈತರ ಪರವಾಗಿ ವಾದಿಸಿದರು. ಜಿಲ್ಲೆಯ ರೈತರ ಹೋರಾಟಗಳಿಗೆ ಸಿಕ್ಕಿದ ಪ್ರಥಮ ವಿಜಯವಿದು. ಆದರೆ ರೈತರು ಉಳುವ ಭೂಮಿಯ ಶಾಶ್ವತ ಒಡೆತನದ ಹಕ್ಕಿಗಾಗಿ ಭೂಸುಧಾರಣಾ ಕಾಯಿದೆ ಜ್ಯಾರಿಗಾಗಿ ಸರಕಾರವನ್ನು ಒತ್ತಾಯಿಸುವ ಚಳುವಳಿಗಳು ಮುಂದುವರಿದುವು. 1966 ರಲ್ಲಿ ಜಿಲ್ಲೆಯಿಂದ ಬೆಂಗಳೂರಿಗೆ ಸರಕಾರವನ್ನು ಒತ್ತಾಯಿಸಲು ಕಾಲ್ನಡೆ ಜಾಥಾವನ್ನು ಸಂಘಟಿಸಲಾಯಿತು. ಈ ಕಾರ್ಯಕ್ರಮ ಜಿಲ್ಲೆಯ ರೈತಾಪಿ ಜನತೆಯ ಮಧ್ಯೆ ತುಂಬಾ ಪರಿಣಾಮ ಬೀರಿದೆ. ರೈತ ಸಂಘದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹಲವಾರು ಮುಖಂಡರೂ, ಕಾರ್ಯಕರ್ತರೂ ದುಡಿದಿದ್ದಾರೆ. ಮಂಗಳೂರು ತಾಲೂಕಿನಾದ್ಯಂತ ರೈತ ಚಳುವಳಿ ಕಟ್ಟುವುದರಲ್ಲಿ ಬಿ.ಕೊರಗಪ್ಪ ರೈ, ಯು.ಜನಾರ್ಧನ ನಾಯಕ್ ಮತ್ತು ರಾಮಚಂದ್ರ ಉಚ್ಚಿಲರ ಪಾತ್ರವು ಪ್ರಮುಖವಾದುದು. 1973 ರಲ್ಲಿ ಭೂಸುಧಾರಣಾ ಕಾಯಿದೆ ಜ್ಯಾರಿಗೆ ಬಂತು. ಇದರಿಂದಾಗಿ ಟ್ರಿಬ್ಯೂನಲ್‌ಗೆ ಅರ್ಜಿ ಸಲ್ಲಿಸಿದ ಸಹಸ್ರಾರು ರೈತರು ತಮ್ಮ ಸ್ವಾಧೀನವಿದ್ದ ಭೂಮಿಯ ಒಡೆತನದ ಹಕ್ಕನ್ನು ಪಡೆಯುವಂತಾಯಿತು. ಇದು ರೈತರ ಚಳುವಳಿಗೆ ಸಿಕ್ಕಿದ ಇನ್ನೊಂದು ವಿಜಯವಾಗಿದೆ.

ರೈತರ ಸ್ವಾಧೀನವಿರುವ ಭೂಮಿಯ ಒಡೆತನದ ಹಕ್ಕು ಸಿಕ್ಕಿದರೂ ರೈತರ ಮಧ್ಯೆ ಬೇರೆ ಬೇರೆ ಸಮಸ್ಯೆಗಳು ಉದ್ಭವವಾಗಿವೆ. ದ.ಕ.ಜಿಲ್ಲಾ ರೈತ ಸಂಘದ ಮುಖಂಡರಾಗಿ ಈ ಸಮಸ್ಯೆಗಳನ್ನೆತ್ತಿ ಹಲವಾರು ಹೋರಾಟಗಳನ್ನು ಕಾ.ರಾಮಚಂದ್ರ ಉಚ್ಚಿಲರು ಸಂಘಟಿಸಿದ್ದಾರೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಬಡವರ ನಿವೇಶನದ ಪ್ರಶ್ನೆ, ಸರಕಾರೀ ಭೂಮಿಯನ್ನು ಅತಿಕ್ರಮಿಸಿ ಮನೆಕಟ್ಟಿ ಕೃಷಿ ಮಾಡಿ ಬದುಕುತ್ತಿದ್ದ ಹಲವಾರು ಬಡವರಿಗೆ ಅದರ ಹಕ್ಕು ಪತ್ರದ ಪ್ರಶ್ನೆ, ರೈತರು ಬೆಳೆಸಿದ ಬೆಳೆಗಳಿಗೆ ಬೆಂಬಲ ಬೆಲೆಯ ಪ್ರಶ್ನೆ ಈ ಎಲ್ಲಾ ಸಮಸ್ಯೆಗಳನ್ನೆತ್ತಿ ಜಿಲ್ಲೆಯಲ್ಲಿ ಸರಕಾರದ ನೀತಿಗಿದಿರಾಗಿ ಅನೇಕ ಹೋರಾಟಗಳನ್ನು ರೈತ ಸಂಘದ ಮೂಲಕ ಕಾ.ಉಚ್ಚಿಲರು ಸಂಘಟಿಸಿದ್ದಾರೆ. ಮಂಗಳೂರು ತಾಲೂಕಿನ ಅನೇಕ ಭಾಗಗಳಲ್ಲಿ ಮನೆಯಿಲ್ಲದ ಬಡವರಿಗೆ ಸರಕಾರೀ ಭೂಮಿಯಲ್ಲಿ ಮನೆಕಟ್ಟಿ ವಾಸಿಸಲು ಸಹಸ್ರಾರು ಜನರಿಗೆ ಪ್ರೋತ್ಸಾಹ ನೀಡಿ ಈ ಮೂಲಕ ನಿವೇಶನಗಳನ್ನು ಹೊಂದಿದವರಿಗೆ ಅದರ ಹಕ್ಕುಪತ್ರಗಳನ್ನು ನೀಡುವಂತೆ ಯಶಸ್ವೀ ಹೋರಾಟ ಗಳನ್ನು ನಡೆಸಲಾಗಿದೆ. ಹೀಗೆ ತನ್ನ ಜೀವನದುದ್ದಕ್ಕೂ ಜನಸಾಮಾನ್ಯರ ಬಗ್ಗೆ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ನಡೆಸಿದ ಹೋರಾಟಗಳು ಅಸಂಖ್ಯಾತ.

ಸಹಕಾರ ಬ್ಯಾಂಕ್‌ನ ಸಾಧನೆ

ಕೋಟೆಕಾರು ಪ್ರದೇಶದ 14 ಗ್ರಾಮಗಳ ಕ್ಷೇತ್ರಕ್ಕೆ ಸಂಬಂಧಿಸಿ ಒಂದು ಸಹಕಾರೀ ಬೇಂಕ್ ಇದೆ. ಅದು ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಬೇಂಕ್. ಹಲವು ವರ್ಷಗಳಲ್ಲಿ ಈ ಬೇಂಕಿನ ನಿರ್ದೇಶಕರಾಗಿ ಮತ್ತು ಕಳೆದ 10 ವರ್ಷಗಳಿಂದ ಅದರ ಅಧ್ಯಕ್ಷರಾಗಿದ್ದು ಈ ಬೇಂಕ್ ಜಿಲ್ಲೆಯಲ್ಲೇ ಒಂದು ಉತ್ತಮ ಆರ್ಥಿಕ ಸಂಸ್ಥೆಯಾಗಿ ಪ್ರಗತಿ ಹೊಂದುವಂತೆ ಅವರು ಮಾಡಿದ್ದಾರೆ. ಅದೊಂದು ದೊಡ್ಡ ಸಾಧನೆ.

ಪಕ್ಷವು ನಡೆಸಿದ ಅನೇಕ ಹೋರಾಟಗಳಲ್ಲಿ ಅವರು ಮುಂಚೂಣಿ ಪಾತ್ರ ವಹಿಸಿದ್ದಾರೆ. ತಳಮಟ್ಟದ ಕಾರ್ಯಕರ್ತರಾಗಿ ಬಂದು ತನ್ನ ಕಠಿಣ ಪರಿಶ್ರಮದಿಂದ ಜನನಾಯಕರಾಗಿ ಬೆಳೆದು ಬಂದ ಕಾ.ಉಚ್ಚಿಲರು 2004 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಿಂದ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿದ್ದಾರೆ. ಅವರು ಒಬ್ಬ ಸರಳ ಜೀವಿ. ನಿಷ್ಠಾವಂತ ಜನಸೇವಕ. ಒಳ್ಳೆಯ ಸಂಘಟಕ. ಇಂತಹ ಸ್ನೇಹಮಯಿ ಮುಖಂಡರೊಬ್ಬರನ್ನು ಕಳೆದುಕೊಂಡ ಜಿಲ್ಲೆಯ ಪಕ್ಷಕ್ಕೂ, ರೈತ ಸಂಘಟನೆಗೂ ಅಪಾರ ನಷ್ಟವಾಗಿದೆ. ಅವರು ಪತ್ನಿ, ಒಬ್ಬ ಮಗ ಮತ್ತು ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಅವರ ನಿಧನದ ವಾರ್ತೆ ಕೇಳಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ವಿವಿಧ ಪಕ್ಷಗಳ ಮುಖಂಡರು, ಅಪಾರ ಸಂಖ್ಯೆಯಲ್ಲಿ ಬಂಧುಮಿತ್ರರು ಬಂದಿರುವುದನ್ನು ಕಂಡರೆ ನಿಜವಾಗಿಯೂ ಅವರು ಒಬ್ಬ ಜನನಾಯಕರು ಎಂಬುದನ್ನು ತೋರಿಸುತ್ತದೆ. □



ಪಡುಕೋಣೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಚುನಾವಣೆ

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ನಾಡ ಎಂಬಲ್ಲಿ 'ಪಡುಕೋಣೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್' ಅಂತ ಒಂದು ಇದೆ. ಜೂನ್ 13, 2009 ರಂದು ಈ ಸಹಕಾರ ಬ್ಯಾಂಕ್‌ಗೆ ಚುನಾವಣೆ ನಡೆಯಿತು. ಒಟ್ಟು ಇರುವುದು 8 ಸ್ಥಾನ. ಚುನಾವಣೆಯಲ್ಲಿ ಹೇಗಾದರೂ ಸರಿ ಗೆಲ್ಲಬೇಕೆಂಬುದು ಕಾಂಗ್ರೆಸ್‌ನ ಯತ್ನವಾಗಿತ್ತು. ಸರಿ ಪ್ರತಿಸ್ಪರ್ಧಿಗಳಾದ ಸಿಪಿಐ(ಎಂ) ಪಕ್ಷದ ಮೇಲೆ ಗೂಂಡಾಗಿರಿ, ದಾಳಿ, ದಬಾವಣೆ ನಡೆಸಲಾಯಿತು. ಇಲ್ಲಿ ಕಾಂಗ್ರೆಸ್ ಮಾತ್ರವಲ್ಲ ಬಿಜೆಪಿಯೂ ಇತ್ತು. ಸಿಪಿಐ(ಎಂ) ಅನ್ನು ಹಣಿಯಬೇಕೆನ್ನುವುದರಲ್ಲಿ ಬಿಜೆಪಿ-ಕಾಂಗ್ರೆಸ್ ಎರಡೂ ಕೈ ಜೋಡಿಸಿದ್ದವು.

ಚುನಾವಣಾ ಫಲಿತಾಂಶ ಬಂತು. ದೌರ್ಜನ್ಯಕಾರಿ ಧೋರಣೆ ತೋರುವಲ್ಲಿ ಮುಂಚೂಣಿಯಲ್ಲಿದ್ದ ಕಾಂಗ್ರೆಸ್‌ಗೆ ಒಂದೂ ಸ್ಥಾನ ಬರಲಿಲ್ಲ. ಬಿಜೆಪಿಗೆ ಅಲ್ಪಸ್ವಲ್ಪ ಮತಗಳ ಮುನ್ನಡೆಯೊಂದಿಗೆ 5 ಸ್ಥಾನ ಸಿಕ್ಕಿದೆ. ಸಿಪಿಐ(ಎಂ) ಪಕ್ಷಕ್ಕೆ ಮೂರು ಸ್ಥಾನಗಳು ಲಭಿಸಿವೆ. ನ್ಯಾಯುಯುತ ಚುನಾವಣೆ ನಡೆದಿದ್ದರೆ ಸಿಪಿಐ(ಎಂ)ಗೆ ಇನ್ನೂ ಹೆಚ್ಚಿನ ಸ್ಥಾನ ಸಿಗಬೇಕಿತ್ತು. ಇರಲಿ ಜನಪರ ಕೆಲಸ - ಹೋರಾಟ ಮುಂದುವರೆಯುತ್ತದೆ. ಗೆದ್ದವರ ವಿವರ -1. ರಾಜು ಪಡುಕೋಣೆ, 2. ಪರಮೇಶ್ವರ ಗಾಣಿಗ, 3. ರಾಜೀವ್ ಭಂಡಾರಿ ಗೆದ್ದ ಅಭ್ಯರ್ಥಿಗಳು. ಸಿಪಿಐ(ಎಂ) ಪಕ್ಷ ಇವರನ್ನು ಅಭಿನಂದಿಸಿದೆ. ಗೆದ್ದವರಲ್ಲಿ ರಾಜು ಪಡುಕೋಣೆಯವರು 'ನಾಡ' ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರೂ ಹಾಗೂ ಸಿಪಿಐ(ಎಂ) ಕುಂದಾಪುರ ತಾಲ್ಲೂಕು ಸಮಿತಿಯ ಸದಸ್ಯರೂ ಆಗಿದ್ದಾರೆ.

ಮಳೆ ಕೊರತೆಯ ನಿಜ ಆತಂಕಗಳು...

ಪುಟ 3 ರಿಂದ

ಕೃಷಿ ಉತ್ಪಾದನೆಯ ಕೊರತೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಕಡಿಮೆ ಅವಧಿಯ ತಳಿಗಳು, ಹೆಚ್ಚು ರಸಗೊಬ್ಬರದ, ಸಾಲದ ಲಭ್ಯತೆ, ನೈಸರ್ಗಿಕ ಗೊಬ್ಬರ, ಕೀಟನಾಶಕ ಪದ್ಧತಿಗಳ ಬಳಕೆಗೆ ಕೈಹಾಕಬೇಕು. ಮಣ್ಣು ಮತ್ತು ಜಲ ಸಂರಕ್ಷಣೆಯ ಕ್ರಮಗಳಿಗೆ ಜಲಾನಯನ ಯೋಜನೆಗೆ ಒತ್ತು ನೀಡಬೇಕು. ಜಲವಿದ್ಯುತ್ ಆಣೆಕಟ್ಟುಗಳಲ್ಲಿ ನೀರಿನ ಮಟ್ಟದ ಕೊರತೆಯನ್ನು ಅವಲಂಬಿಸಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಲ್ಲಿ ಅತಿ ಹೆಚ್ಚು ವಿದ್ಯುತ್ ಉತ್ಪಾದನೆಗೆ, ಇದಕ್ಕಾಗಿ ಕಲ್ಲಿದ್ದಲು, ಪೆಟ್ರೋಲಿಯಂ ಉತ್ಪನ್ನಗಳ ಕೊಳ್ಳುವಿಕೆಗೆ ಹಣ ನಿಗದಿ, ಸಾಗಾಣಿಕೆಗೆ ಆದ್ಯತೆ, ಉತ್ಪಾದನಾ ಸಾಮರ್ಥ್ಯದ ಗರಿಷ್ಠ ಮಿತಿಯ ಉತ್ಪಾದನೆ, ಉದ್ಯೋಗ ಲಭ್ಯತೆಗಾಗಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವ್ಯಾಪಕ ಜಾರಿ, ಹೆಚ್ಚು ಹಣದ ಸರಾಗ ಬಿಡುಗಡೆ, ಅದರ ಜಾರಿಗಾಗಿ ಪಂಚಾಯಿತ್ತಿ ಮಟ್ಟದಿಂದ ರಾಜ್ಯಮಟ್ಟದವರೆಗೆ ದಕ್ಷ ಆಡಳಿತ ವ್ಯವಸ್ಥೆ, ಕೂಲಿಕಾರ ಹಾಗೂ ರೈತರ ಸಂಘಟನೆಯನ್ನು ಒಳಗೊಳ್ಳುವುದು. ಇವುಗಳ ಜೊತೆಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 200 ದಿನಗಳಿಗೆ ವಿಸ್ತರಿಸುವುದು. ಉದ್ಯೋಗ ನೀಡುವ ಕಾಮಗಾರಿಗಳ ಲಭ್ಯತೆಯನ್ನು ವಿಸ್ತರಿಸುವುದು. ಗುರುತಿಸುವುದು ಹಾಗೂ ಯೋಜನೆಗಳನ್ನು ಸಿದ್ಧ ಮಾಡಿಟ್ಟುಕೊಳ್ಳುವುದು. ನಗರ ಉದ್ಯೋಗ ಖಾತರಿ ಯೋಜನೆಯನ್ನು ಶೀಘ್ರವಾಗಿ ಜಾರಿಗೆ ತರುವುದು ಇತ್ಯಾದಿ **ಬೆಲೆ ಏರಿಕೆಯ ನಿಯಂತ್ರಣಕ್ಕಾಗಿ** ಸಾರ್ವಜನಿಕ ಪಡಿತರ ಪದ್ಧತಿಯ ವಿಸ್ತರಣೆ ಸಾರ್ವತ್ರಿಕವಾಗಿ ಎಲ್ಲರಿಗೂ ಅವಶ್ಯ ಆಹಾರ ವಸ್ತುಗಳನ್ನು ಅಕ್ಕಿ ಗೋಧಿಯ ಜೊತೆಗೆ ರಾಗಿ, ಜೋಳ, ಬೇಳೆಕಾಳುಗಳು, ಎಣ್ಣೆ ಔಷಧಿಗಳು ಇತ್ಯಾದಿ ಒದಗಿಸುವ ಯೋಜನೆ. ಬಡತನ ರೇಖೆಯ ಕೆಳಗಿನ ಕುಟುಂಬಗಳಿಗೆ ಕನಿಷ್ಟ ಬೆಲೆ ಹಾಗೂ ನಿಗದಿತ ಪ್ರಮಾಣದ ದಾನ್ಯಗಳು.

ಸಗಟು ದಾಸ್ತಾನುದಾರರು, ಕಾಳಸಂತೆಕೋರರ ಮೇಲೆ ಬಿಗಿ ಕ್ರಮಗಳು ಹೊಟೆಲುಗಳಲ್ಲಿ ಬೆಲೆ ನಿಯಂತ್ರಣ ಇತ್ಯಾದಿ ಕ್ರಮಗಳು

ಕೇಂದ್ರ ಸರ್ಕಾರದ ಪಾತ್ರ

ಈ ಎಲ್ಲಾ ಕ್ರಮಗಳಲ್ಲಿ ಅತ್ಯಂತ ಹೆಚ್ಚು ಅಧಿಕಾರ ಹಾಗೂ ಹಣ ಕೇಂದ್ರೀಕೃತವಾಗಿರುವ ಕೇಂದ್ರ ಸರ್ಕಾರದ ಪಾತ್ರವೇ ಪ್ರಧಾನ. ವಿವಿಧ ಯೋಜನೆಗಳನ್ನು ರೂಪಿಸುವುದು, ಅವುಗಳ ನಿಯಮಗಳನ್ನು ಜನಸ್ನೇಹಿಯಾಗಿ ಮಾರ್ಪಡಿಸುವುದು. ಹೆಚ್ಚು ಹಣ ನಿಗದಿ ಮಾಡುವುದು ಇತ್ಯಾದಿ ಕ್ರಮಗಳಲ್ಲೆಲ್ಲಾ ಕೇಂದ್ರ ಸರ್ಕಾರ ಮುತುವರ್ಜಿ ವಹಿಸಬೇಕು. ಅಥವಾ ರಾಜ್ಯ ಸರ್ಕಾರಗಳಿಗೆ ಹೆಚ್ಚು ಹಣ ನೀಡಿ ಆಯಾ ಪ್ರದೇಶಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿಕೊಳ್ಳಲು ಅವಕಾಶ ನೀಡಬೇಕು. ಹಾಗೂ ನಿರಂತರ ಗಮನ ನೀಡಬೇಕು. ರಾಜ್ಯಗಳಿಗೆ ಹೆಚ್ಚು ಅಧಿಕಾರ ಹಣ ಸಂಗ್ರಹದ ಅವಕಾಶಗಳನ್ನು ವಿಕೇಂದ್ರಿಸುವವರೆಗೆ ಕೇಂದ್ರ ಸರ್ಕಾರವೇ ಪ್ರಧಾನ ಹೊಣೆಯನ್ನು ಹೊರಬೇಕಾಗಿದೆ, ○

'ಐಲಾ' ಎಂಬ ಚಂಡಮಾರುತ ಮತ್ತು 'ಎಲ್ ನಿನೊ' ಎಂಬ ವೈಪರೀತ್ಯ

ಪ್ರಪಂಚದಾದ್ಯಂತ ಸಾಗರಗಳಲ್ಲಿ ವಾತಾವರಣ ಬಿಸಿಯಾಗಿ ಗಾಳಿಯ ಒತ್ತಡ ತೀವ್ರ ರೀತಿಯಲ್ಲಿ ಕಡಿಮೆಯಾಗಿ ಎಲ್ಲ ಕಡೆಗಳಿಂದ ಗಾಳಿ ನುಗ್ಗುವ ಪ್ರಮಾಣ, ಒತ್ತಡಗಳಿಂದ ಚಂಡಮಾರುತ ಉಂಟಾಗುತ್ತವೆ. ಈ ಚಂಡಮಾರುತಗಳು ನಿರ್ದಿಷ್ಟ ಪ್ರದೇಶ - ಸಮಯದಲ್ಲಿ ಹುಟ್ಟಿ ನಿರ್ದಿಷ್ಟ ಲಕ್ಷಣಗಳನ್ನು ಹೊಂದಿರುವುದರಿಂದ ಅವುಗಳನ್ನು ಗುರುತಿಸಲು ನಾಮಕರಣಗಳನ್ನು ಮಾಡಲಾಗುತ್ತದೆ.


'ಐಲಾ' ಎಂಬುದು ಬಂಗಾಳ ಕೊಲ್ಲಿಯಲ್ಲಿ ಹುಟ್ಟಿ ವೇಗವಾಗಿ ಸಂಚರಿಸುವ ಒಂದು ಚಂಡಮಾರುತ. ಈ ಬಾರಿ ಅದು 30 ವರ್ಷಗಳಿಂದಲೂ ತುಳಿಯುವ ಪಥವನ್ನು ಬಿಟ್ಟು ಕಲ್ಕತ್ತಾ, ಹೌರಾ, 24 ಪರಗಣ ಮೊದಲಾದ ಪ್ರದೇಶಗಳ ಮೇಲೆ 120 ಕಿ.ಮೀ. ವೇಗದಲ್ಲಿ ಅಪ್ಪಳಿಸಿ ಚಲಿಸಿತು. ಈ ಚಂಡಮಾರುತ ಕೇಂದ್ರ ಭಾರತ ಪ್ರದೇಶ ಮತ್ತು ಮುಂದಕ್ಕೆ ಉತ್ತರ ಭಾರತದ ಕಡೆಗೆ ಸಾಗಬೇಕಾಗಿದ್ದ ಮಳೆ ಮಾರುತಗಳನ್ನು ಸೆಳೆದು ಬಂಗಾಳ, ಬಾಂಗ್ಲಾದೇಶ ಅದಕ್ಕಿಂತ ಹೆಚ್ಚಾಗಿ ಬರ್ಮಾಗಳ ಕಡೆಗೆ ದಿಕ್ಕು ಬದಲಿಸುವಂತೆ ಮಾಡಿದೆ ಎಂದು ವಿಜ್ಞಾನಿಗಳು ತೀರ್ಮಾನಕ್ಕೆ ಬಂದಿದ್ದಾರೆ.

'ಎಲ್ ನಿನೊ' ಎಂಬ ಫೆಸಿಫಿಕ್ ಸಾಗರದ ವೈಪರೀತ್ಯ

ವಿಶ್ವದ ಹಾಗೂ ಭಾರತದ ಮಳೆಗಾಲದ ಮೇಲೆ ದೂರದ ಫೆಸಿಫಿಕ್ ಸಾಗರ ಬೀರುವ ಪ್ರಭಾವದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಅರಿವು ಮೂಡುತ್ತಿದೆ. ದಕ್ಷಿಣ ಅಮೆರಿಕದ ತೀರದಿಂದ ಭೂಮಧ್ಯ ರೇಖೆಯ ನಡುವಣ ಪ್ರದೇಶದಲ್ಲಿ ಸಾಗರದ ಮೇಲ್ಮೈಯ ತಾಪಮಾನ ಏರಿಕೆಯಾಗುವುದೇ ಈ ವೈಪರೀತ್ಯದ ಮುಖ್ಯ ಲಕ್ಷಣ. ಈ ತಾಪಮಾನದ ಏರಿಕೆ ಆ ಸಾಗರ ಪ್ರದೇಶದ ಮೇಲಿನ ಗಾಳಿಯಲ್ಲಿ ಕಡಿಮೆ ಒತ್ತಡವನ್ನು ಸೃಷ್ಟಿಸುತ್ತದೆ. ಆದರಿಂದಾಗಿ ಚೀನಾ ತೀರ, ಹಿಂದೂ ಮಹಾಸಾಗರದಿಂದ ಮಳೆಯ ಮಾರುತಗಳನ್ನು ಸೆಳೆಯುತ್ತವೆ. ಈ ಪ್ರದೇಶಗಳಲ್ಲಿ ಬರಗಾಲಕ್ಕೆ ಕಾರಣವಾಗುತ್ತದೆ. ಇದು ಸಾಮಾನ್ಯವಾಗಿ 4-5 ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುವ ವೈಪರೀತ್ಯ. ಭಾರತ, ಚೀನಾ, ಈಶಾನ್ಯ ಏಷ್ಯಾಗಳಲ್ಲಿ 2004ರಲ್ಲಿ ಉಂಟಾಗಿದ್ದ ತೀವ್ರ ಬರಗಾಲಕ್ಕೆ 'ಎನ್ ನಿನೊ' ಕಾರಣವಾಗಿತ್ತು. ಈ ವರ್ಷ ಜೂನ್ ತಿಂಗಳಿನಲ್ಲಿ ಕಾಣಿಸಿಕೊಂಡಿರುವುದರಿಂದ ಈ ವಾರಗಳಲ್ಲಿ ಮಳೆ ಕಡಿಮೆಯಾಗಿದೆ. ಮುಂದಿನ ತಿಂಗಳುಗಳಲ್ಲಿ 'ಎಲ್ ನಿನೊ' ವೈಪರೀತ್ಯ ಹೇಗೆ ವರ್ತಿಸುತ್ತದೆ ಎಂಬುದರ ಮೇಲೆ ಭಾರತದ ಮಳೆಯ ಪ್ರಮಾಣ ಅವಲಂಬಿಸಿದೆ. ○

ಶ್ರದ್ಧಾಂಜಲಿ

ಕಾಂ. ರಾಡ್ರಿಗಸ್



ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘ (ಸಿ.ಐ.ಟಿ.ಯು)ದ ಉಪಾಧ್ಯಕ್ಷರೂ, ಎಂ.ಎ.ಸಿ.ಒ ಸೊಸೈಟಿ (ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರ ಸಹಕಾರ ಸಂಘ)ಯ ಉಪಾಧ್ಯಕ್ಷರೂ ದಕ್ಷಿಣ ಕನ್ನಡ ಜಿಲ್ಲಾ ಆಟೋ ರಿಕ್ಷಾ ಚಾಲಕರ ಸಂಘಟನೆಗಳ ಸಮನ್ವಯ ಸಮಿತಿಯ ಅಧ್ಯಕ್ಷ ಆಗಿ ಸೇವೆ ಸಲ್ಲಿಸುತ್ತಿದ್ದ ಕಾಂ.ಎ.ಎ. ರಾಡ್ರಿಗ (ಎ.ಅಲ್ಬನ್ ರಾಡ್ರಿಗಸ್) 31.5.2009 ರಂದು ಬೆಳಿಗ್ಗೆ ತಮ್ಮ ಮನೆಯಲ್ಲಿ ಹೃದಯಾಘಾತಕ್ಕೆ ಒಳಗಾಗಿ ಮೃತರಾಗಿದ್ದಾರೆ.

ಕಳೆದ ವರ್ಷ ಎಂ.ಎ.ಸಿ.ಒ ಸೊಸೈಟಿಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಾಗ ಸುಮಾರು 25 ಲಕ್ಷದಷ್ಟು ನಷ್ಟದಲ್ಲಿದ್ದ ಸಂಸ್ಥೆಯನ್ನು 20 ಲಕ್ಷದಷ್ಟು ಲಾಭದಲ್ಲಿ ತಂದು ನಿಲ್ಲಿಸಿದ್ದೇ ಅಲ್ಲದೆ ಅಲ್ಲಿನ ಅಕ್ರಮಗಳನ್ನು ಸರಿಪಡಿಸಲು ಸಂಪೂರ್ಣ ಕಾಳಜಿ ವಹಿಸಿ, ಹಗಲು ರಾತ್ರಿ ದುಡಿದವರು ಕಾಂ.ಎ.ಎ.ರಾಡ್ರಿಗಸ್.

ಸಾರಿಗೆ ಪ್ರಾಧಿಕಾರದೆದುರು, ನಗರ ಮತ್ತು ಗ್ರಾಮಾಂತರಗಳ ವಲಯವಿಂಗಡನೆ, ರಿಕ್ಷಾಗಳ ದರ ಪರಿಷ್ಕರಣೆ ಮುಂತಾದ ವಿಷಯಗಳಲ್ಲಿ ಚಾಲಕರ ಪರವಾಗಿ ಸಮರ್ಥವಾಗಿ ಅಭಿಪ್ರಾಯ ಮಂಡಿಸುವಲ್ಲಿ ರಾಡ್ರಿಗಸ್‌ರವರು ನಿರ್ಣಾಯಕ ಪಾತ್ರ ವಹಿಸಿದ್ದರು. ಜಿಲ್ಲೆಯಾದ್ಯಂತ ರಿಕ್ಷಾ ಚಾಲಕರಿಗೆ ಪೆನ್ಷನ್ ಮುಂತಾದ ಸವಲತ್ತುಗಳು ದೊರೆಯುವಂತೆ ಮಾಡಲು ನಡೆದ ಜಿಲ್ಲಾ ಸಮಾವೇಶದಲ್ಲಿ ಅವರು ಬಹಳಷ್ಟು ಶ್ರಮಪಟ್ಟು ದುಡಿದವರಾಗಿದ್ದಾರೆ. ಮೃತ ಸಂಗಾತಿಗೆ ಸಿಐಟಿಯು ಶ್ರದ್ಧಾಂಜಲಿ ಸಲ್ಲಿಸಿದೆ.

ಚಂದಾದಾರರಿಗೆ ಮನವಿ

ದಯಮಾಡಿ ಪತ್ರಿಕೆಯ ಚಂದಾ ಅವಧಿ ಮುಗಿಯುವ ಮೊದಲೇ ನವೀಕರಣ ಮಾಡಿ. ತಮಗೆ ತಲುಪುವ ಪತ್ರಿಕೆಯಲ್ಲಿ ವಿಳಾಸದ ಮೇಲೆ ಪತ್ರಿಕೆ ಕಳಿಸಲಾರಂಭಿಸಿದ ದಿನಾಂಕ - ಮುಗಿಯುವ ದಿನಾಂಕ ಎರಡನ್ನೂ ನಮೂದಿಸಲಾಗಿರುತ್ತದೆ ಗಮನಿಸಿ. ಮುಂಚಿತವಾಗಿ ನವೀಕರಿಸಿ.

ಚಂದಾ ದರ ವಿವರ

ವಾರ್ಷಿಕ	:	250.00 ರೂ.
ದ್ವೈ ವಾರ್ಷಿಕ	:	500.00 ರೂ.
ಪಂಚವಾರ್ಷಿಕ	:	1250.00 ರೂ.

ಈ ವಿಚಾರವಾಗಿ ನೀವು ಸಂಪರ್ಕಿಸಬೇಕಾದವರು

ವೀರಣ್ಣ ಕಲ್ಮನಿ : 9379268990

(ಗಮನಿಸಿ: ದೂರವಾಣಿ ಸಂಖ್ಯೆ ಬದಲಾಗಿದೆ)

- ಸಂ

ಪಶ್ಚಿಮ ಬಂಗಾಳದ ಲಾಲ್‌ಗಡ್ ಪ್ರದೇಶದಲ್ಲಿ ಪರಿಸ್ಥಿತಿ ಸಾಮಾನ್ಯಗೊಳ್ಳುತ್ತಿದೆ. ಆದರೆ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರ ಮಾವೋವಾದಿಗಳನ್ನು ಭಯೋತ್ಪಾದಕ ಸಂಘಟನೆಗಳ ಪಟ್ಟಿಯಲ್ಲಿ ಸೇರಿಸಿರುವುದು ತೃಣಮೂಲ ಕಾಂಗ್ರೆಸಿಗೆ ಇಕ್ಕಟ್ಟು ತಂದಿಟ್ಟಿದೆ. ಇಡೀ ನಾಗರಿಕ ಸಮಾಜಕ್ಕೇ ಗಂಡಾಂತರಕಾರಿಯಾದ ಇಂತಹ ಅಪಾಯಕಾರಿ ರಾಜಕೀಯವನ್ನು ಸೋಲಿಸಬೇಕಾಗಿದೆ.



ತೃಣಮೂಲ - ಮಾವೋವಾದಿ ಮೈತ್ರಿಯೂ ಅರಾಜಕ ಹಿಂಸಾಚಾರವೂ

ಪಶ್ಚಿಮ ಬಂಗಾಳದ ಲಾಲ್‌ಗಡದಲ್ಲಿ ಮಾವೋವಾದಿಗಳ ಮುತ್ತಿಗೆಯನ್ನು ತೆರವುಗೊಳಿಸಲು ಕೇಂದ್ರೀಯ ಮತ್ತು ರಾಜ್ಯ ಭದ್ರತಾ ಪಡೆಗಳು ಆರಂಭಿಸಿರುವ ಜಂಟಿ ಕಾರ್ಯಾಚರಣೆ ಮುಂದುವರೆಯುತ್ತಿದೆ. ಇದರಿಂದಾಗಿ ಅಲ್ಲಿ ಪರಿಸ್ಥಿತಿ ಸಾಮಾನ್ಯಗೊಳ್ಳುತ್ತಿದೆ. ಈ ಹಿಂದೆ ನಂದಿಗ್ರಾಮದಲ್ಲಿ ಭದ್ರತಾ ಪಡೆಗಳನ್ನು ಎದುರಿಸಲು ಮುಗ್ಧ ಬುಡಕಟ್ಟು ಜನಗಳನ್ನು, ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ಬೆದರಿಸಿ ಅವರನ್ನು ಮುಂದಿಟ್ಟುಕೊಂಡು ರಕ್ಷಣಾ ಕವಚಗಳನ್ನಾಗಿ ಬಳಸಿಕೊಳ್ಳುವ ತಂತ್ರ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿತ್ತು. ಲಾಲ್‌ಗಡದಲ್ಲೂ ಅದೇ ತಂತ್ರವನ್ನು ಬಳಸಲು ಅವರು ಪ್ರಯತ್ನಿಸಿದರೂ ಅದರಲ್ಲಿ ಈ ಬಾರಿ ಅವರಿಗೆ ಭಾಗಶಃ ಯಶಸ್ಸು ಕೂಡಾ ಸಿಕ್ಕಿದಂತಿಲ್ಲ.

ಜೂನ್ 7ರಂದು ಏಳು ಸಿಪಿಐ(ಎಂ) ಮುಖಂಡರನ್ನು ಅಪಹರಿಸುವುದರೊಂದಿಗೆ ಆರಂಭವಾದ ಮಾವೋವಾದಿಗಳ ದುಷ್ಕೃತ್ಯದಿಂದಾಗಿ ಬುಡಕಟ್ಟು ಜನಗಳು ದೊಡ್ಡ ಸಂಖ್ಯೆಯಲ್ಲಿ ಊರು ಬಿಟ್ಟು ಹೋಗಲಾರಂಭಿಸಿದರು. ಸುಮಾರು 30000 ಮಂದಿ ಹೀಗೆ ಹೋಗಿರಬೇಕೆಂದು ಕೆಲವರ ಅಂದಾಜು. 'ಅವರು ಹೆಂಗಸರು, ಮಕ್ಕಳನ್ನು ರಕ್ಷಣಾ ಕವಚಗಳಾಗಿ ಮಾಡಿಕೊಳ್ಳುತ್ತಿದ್ದರು', 'ಅವರು ಬಯಸುವಂತೆ ನಾವು ಪೋಲೀಸ್ ಗುಂಡುಗಳನ್ನು ಏಕೆ ಎದುರಿಸಬೇಕು' ಎಂದೆಲ್ಲಾ ಅವರು ಹೇಳುತ್ತಿದ್ದುದಾಗಿ ಮಾಧ್ಯಮಗಳು ವರದಿ ಮಾಡಿವೆ. ಭಯೋತ್ಪಾದನೆಗೆ ಗುರಿಯಾದ ಬುಡಕಟ್ಟು ಜನಗಳಿಗೆ ಎಡರಂಗ ಸರಕಾರ ದೊಡ್ಡ ಪ್ರಮಾಣದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡಿದೆ. ಅವರಿಗೆ ಪರಿಹಾರ ಶಿಬಿರಗಳಲ್ಲಿ ಪುಕ್ಕಟೆಯಾಗಿ ಅಕ್ಕಿ, ತರಕಾರಿಗಳು ಮತ್ತು ಬೇಯಿಸಿದ ಆಹಾರಗಳನ್ನು ಒದಗಿಸಲಾಗಿದೆ. ಲಾಲ್‌ಗಡ್ ಸರಕಾರೀ ಅಸ್ಪತ್ರೆಗೆ ಹೆಚ್ಚಿನ ಸಿಬ್ಬಂದಿಯನ್ನೂ ಕಳಿಸಲಾಯಿತು.

ಲಾಲ್‌ಗಡದ ಸಮಸ್ಯೆ

ಲಾಲ್‌ಗಡದಲ್ಲಿನ ಕ್ಷೋಭೆಗೆ ಎಡರಂಗ ಸರಕಾರ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದು ಮುಖ್ಯ ಕಾರಣ, ಮಾವೋವಾದಿಗಳು ಈ ಪ್ರದೇಶದ ಬಡ ಜನಗಳ ಗೋಳಿಗೆ ದನಿ ನೀಡುತ್ತಿದ್ದಾರೆ ಎಂದೆಲ್ಲಾ ಹೇಳಲಾಗುತ್ತಿದೆ. ರಾಹುಲ್ ಗಾಂಧಿ ಚುನಾವಣಾ ಪ್ರಚಾರದ ವೇಳೆಯಲ್ಲಿ ಬಂಗಾಳದ ಹಲವು ಬುಡಕಟ್ಟು ಪ್ರದೇಶಗಳು ಒರಿಸ್ಸಾದ ಅತ್ಯಂತ ಹಿಂದುಳಿದ ಪ್ರದೇಶಗಳಿಗಿಂತಲೂ ಹಿಂದುಳಿದಿವೆ ಎಂದು ಉದ್ಗರಿಸಿದ್ದರು. ಆದರೆ ಸಾಮಾಜಿಕ-ಆರ್ಥಿಕ ಸೂಚ್ಯಂಕಗಳನ್ನು ಗಮನಿಸಿದರೆ ಬಾಂಕುರ ಮತ್ತು ಪುರುಲಿಯಾ ಪರಿಸ್ಥಿತಿ ಕಾಂಗ್ರೆಸಿನ ವಿಐಪಿ ಕ್ಷೇತ್ರಗಳಾದ ಅಮೇಥಿ ಮತ್ತು ರಾಯಬರೇಲಿಗಿಂತ ಮುಂದಿವೆ ಎಂದು ತೋರಿಸಿದಾಗ ಸುಮ್ಮನಾಗಬೇಕಾಯಿತು. ಅಷ್ಟೇ ಅಲ್ಲ, ಎಡರಂಗ ಭಾರೀ ಹಿನ್ನಡೆ ಅನುಭವಿಸಿದ ಈ ಚುನಾವಣೆಗಳಲ್ಲೂ ರಾಜ್ಯದ ಎರಡೂ ಬುಡಕಟ್ಟು ಮೀಸಲು ಕ್ಷೇತ್ರಗಳನ್ನು ಎಡರಂಗವೇ ಗೆದ್ದುಕೊಂಡಿದೆ ಎಂಬುದನ್ನೂ ಗಮನಿಸಬಹುದು.

ಬುಡಕಟ್ಟು ಜನಗಳ ಜೀವನ ಮಟ್ಟವನ್ನು ಎತ್ತರಿಸಲು ಬಹಳ ಕೆಲಸವಾಗಬೇಕಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಎಡರಂಗ ಸರಕಾರ ಈ ನಿಟ್ಟಿನಲ್ಲಿ ಹಲವು ಹೊಸ ಕರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದೆ. ಆದರೆ ಇಲ್ಲಿ ಈ ಪ್ರದೇಶದಲ್ಲಿ ಒಂದು ನಿರ್ದಿಷ್ಟ ಸಮಸ್ಯೆಯಿದೆ. ಲಾಲ್‌ಗಡ್ ಸೇರಿರುವ ಪಶ್ಚಿಮ ಮಿದ್ನಾಪುರದ ಬುಡಕಟ್ಟು ಜನಗಳಿಗೆ ಅಭಿವೃದ್ಧಿ ಚಟುವಟಿಕೆಗಳು ತಲುಪದಂತೆ ತಡೆದಿರುವ ಅಂಶವಿದು.

ಪಶ್ಚಿಮ ಬಂಗಾಳದಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಚಟುವಟಿಕೆಗಳೆಲ್ಲಾ ನಡೆಯುವುದು



ಚುನಾಯಿತ ಪಂಚಾಯತುಗಳ ಮೂಲಕ ಮಾತ್ರವೇ. ಲಾಲ್‌ಗಡ್ ಪ್ರದೇಶದಲ್ಲಿ ಬಹಳಷ್ಟು ಪಂಚಾಯತುಗಳು ಝಾರ್ಖಂಡ್ ಪಕ್ಷದ ನೇತೃತ್ವದಲ್ಲಿವೆ. ಬಿನ್ಪುರ್ ಬುಡಕಟ್ಟು ಮೀಸಲು ಕ್ಷೇತ್ರದಲ್ಲಿ ಲಾಲ್‌ಗಡ್ ಬರುತ್ತದೆ. ಇಲ್ಲಿಯ ಶಾಸಕರು ಕೂಡಾ ಝಾರ್ಖಂಡ್ ಪಕ್ಷದವರು. ಇದರಿಂದಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಇಲ್ಲಿ ಜಾರಿಯಾಗಿರುವುದೇ ಕಡಿಮೆ. ಈ ರೀತಿ ಈ ಪಕ್ಷ ಈ ಪ್ರದೇಶದಲ್ಲಿ ಮಾವೋವಾದಿಗಳ ಪ್ರವೇಶಕ್ಕೆ ಅನುಕೂಲ ಕಲ್ಪಿಸಿ ಕೊಟ್ಟಿದೆ. ಬುಡಕಟ್ಟು ಜನಗಳ ಹಿಂದುಳಿಕೆ ಹಾಗೆಯೇ ಉಳಿದಷ್ಟು ಇವರಿಗೆ ರಾಜಕೀಯವಾಗಿ ಲಾಭಕರ. ಇದರಿಂದಾಗಿ ಈ ಅದೃಷ್ಟಹೀನ ಬುಡಕಟ್ಟು ಜನಗಳು ಮಾವೋವಾದಿ ಚಟುವಟಿಕೆಗಳಿಗೆ ಆಹಾರವಾಗುತ್ತಿದ್ದಾರೆ ಎಂಬುದು ಸ್ಪಷ್ಟ. ಈಗ ಮಾವೋವಾದಿಗಳ 'ವಿಮೋಚಿತ ವಲಯ' ತೆರವಾಗುತ್ತಿರುವುದರಿಂದ ಇನ್ನು ಮುಂದಾದರೂ ಬಹಳ ವಿಳಂಬದ ನಂತರವಾದರೂ ಅಭಿವೃದ್ಧಿ ಚಟುವಟಿಕೆಗಳ ಫಲ ಬಡ ಬುಡಕಟ್ಟು ಜನಗಳಿಗೆ ತಲುಪಬಹುದು.

ನಿಷೇಧವೇ ಪರಿಹಾರವಲ್ಲ

ಮಾವೋವಾದಿಗಳ ಮೇಲೆ ನಿಷೇಧ ಹಾಕುವ ಬಗ್ಗೆ ಸಿಪಿಐ(ಎಂ) ಮತ್ತು ಎಡರಂಗದ್ದು ಎಡಬಿಡಂಗಿ ನೀತಿ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ಸಿಪಿಐ(ಎಂ) ಮುಖಂಡತ್ವ ಮತ್ತು ಪಶ್ಚಿಮ ಬಂಗಾಳ ಸರಕಾರದ ನಡುವೆ ಭಿನ್ನಾಭಿಪ್ರಾಯವಿದೆ ಎಂದು ಚಿತ್ರಿಸುವ ಪ್ರಯತ್ನಗಳನ್ನೂ ನಡೆಸಲಾಗುತ್ತಿದೆ. ಮಾವೋವಾದಿ ಹಿಂಸಾಚಾರವನ್ನು ಎದುರಿಸಲು ಒಂದು ದ್ವಿಮುಖ ಕಾರ್ಯತಂತ್ರವನ್ನು ಅನುಸರಿಸಬೇಕು ಎಂಬುದು ಸದಾ ಸಿಪಿಐ(ಎಂ) ನಿಲುವು. ಅದು ಈಗಲೂ ಬದಲಾಗಿಲ್ಲ.

ಜನಗಳ, ಇಲ್ಲಿ ನಿರ್ದಿಷ್ಟವಾಗಿ ಬುಡಕಟ್ಟು ಜನಗಳ ಜೀವನಮಟ್ಟವನ್ನು ಉತ್ತಮಗೊಳಿಸುವುದು ಹೇಗೆ ಎಂಬುದು ನಿಜವಾದ ಪ್ರಶ್ನೆ. ಒಂದೆಡೆ ಇದನ್ನು ಕೈಗೆತ್ತಿಕೊಂಡು ಮಾವೋವಾದಿಗಳನ್ನು ರಾಜಕೀಯವಾಗಿ ಮೂಲೆಗೊತ್ತಬೇಕು. ಒಂದು ರಾಜಕೀಯ ಪರಿಹಾರವೇ ಶಾಶ್ವತ ಪರಿಹಾರ. ಅದೇ ವೇಳೆಗೆ, ಕಾನೂನು ವ್ಯವಸ್ಥೆ ಮುರಿದು ಬೀಳುವಂತಾದರೆ, ಅಥವಾ ಮಾವೋವಾದಿಗಳು ಆಡಳಿತವನ್ನು ಅಸ್ತವ್ಯಸ್ತಗೊಳಿಸಲು ದಾಳಿ ಮಾಡಿದರೆ ಅದನ್ನು ದೃಢವಾಗಿ ಎದುರಿಸಿ ಸಾಮಾನ್ಯ ಸ್ಥಿತಿ ಮರಳುವಂತೆ, ನಾಗರಿಕ ಆಡಳಿತದ ಶಾಸನವಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಈಗಿನ ನಿರ್ದಿಷ್ಟ ಸಂದರ್ಭದಲ್ಲಿ, ಕೇಂದ್ರ ಸರಕಾರ ಈಗ ಕಾನೂನು ಬಾಹಿರ ಚಟುವಟಿಕೆಗಳು(ತಡೆ) ಶಾಸನದ ಪಟ್ಟಿಯಲ್ಲಿ ಸಿಪಿಐ(ಮಾವೋವಾದಿ)ಯ ಹೆಸರನ್ನು ಸೇರಿಸಿದೆ. ಪೀಪಲ್ಸ್ ವಾರ್ ಗ್ರೂಪ್(ಪಿಡಬ್ಲ್ಯುಜಿ) ಮತ್ತು ಮಾರ್ಕ್ಸಿಸ್ಟ್ ಕೋಆರ್ಡಿನೇಷನ್ ಸೆಂಟರ್(ಎಂಸಿಸಿ) ಈಗಾಗಲೇ ಈ ಪಟ್ಟಿಯಲ್ಲಿವೆ. ಸಿಪಿಐ(ಮಾವೋವಾದಿ) ರಚನೆಯಾಗಿರುವುದು ಇವರೆಡರ ವಿಲೀನದಿಂದ. ಆದ್ದರಿಂದ ಇದನ್ನೂ ಈ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂಬುದು ಇದಕ್ಕೆ ಕೇಂದ್ರ ಸರಕಾರ ಕೊಟ್ಟಿರುವ ವಿವರಣೆ. 'ಇದು ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಆದ್ದರಿಂದ ಪಶ್ಚಿಮ ಬಂಗಾಲಕ್ಕೂ ಅನ್ವಯವಾಗುತ್ತದೆ. ಇದು ಕೇಂದ್ರೀಯ ಶಾಸನ. ನಾವು ಅದನ್ನು ಸ್ವೀಕರಿಸಲೇ ಬೇಕು. ಆದರೆ ಇದನ್ನು ಎಲ್ಲಿ ಅನ್ವಯಿಸಬೇಕು, ಯಾರಿಗೆ ಅನ್ವಯಿಸಬೇಕು ಎಂಬುದನ್ನು ನಾವೇ ನಿರ್ಧರಿಸುತ್ತೇವೆ' ಎಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳು ಹೇಳಿರುವುದು ಈ ಹಿನ್ನೆಲೆಯಲ್ಲಿ ಎಂಬುದು ಯಾರಿಗಾದರೂ ಅರ್ಥವಾಗಬೇಕು.

ತೃಣಮೂಲಿಗಳ ಇಕ್ಕಟ್ಟು

ಕೇಂದ್ರ ಸರಕಾರದ ಈ ನಿಷೇಧ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಏಕೆಂದರೆ ಇದೀಗ ಈ ಪಕ್ಷ ಅದೇ ಕೇಂದ್ರ ಸರಕಾರದ ಭಾಗ ತಾನೇ. ಮಾವೋವಾದಿಗಳು ತೃಣಮೂಲಿಗಳಿಗೆ ಬೆಂಬಲ ನೀಡಿದ್ದಾರೆ, ತೃಣಮೂಲಿಗಳು ಮಾವೋವಾದಿಗಳಿಗೆ ಬೆಂಬಲ ನೀಡಿದ್ದಾರೆ ಎಂಬುದಕ್ಕೆ ಹೆಚ್ಚೆಚ್ಚು ಪುರಾವೆಗಳು ಸಿಗುತ್ತಿವೆ. ಸ್ವತಃ ಮಾವೋವಾದಿ ಮುಖಂಡರ ಸಾರ್ವಜನಿಕ ಹೇಳಿಕೆಗಳು ಮತ್ತು ಮಾಧ್ಯಮ ಸಂದರ್ಶನಗಳು ಕೂಡಾ ಈ ಬಗ್ಗೆ ಬಹಳಷ್ಟು ಪುರಾವೆ ಒದಗಿಸಿವೆ. ಇದರಿಂದಾಗಿ ತೃಣಮೂಲ ಕಾಂಗ್ರೆಸಿಗೆ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲಾಗದ ಸ್ಥಿತಿ ಏರ್ಪಟ್ಟಿದೆ. ಮಾವೋವಾದಿಗಳನ್ನು ಸಮರ್ಥಿಸಿಕೊಳ್ಳಲೂ ಸಾಧ್ಯವಿಲ್ಲ, ಅವರೊಡನೆ ಕೈಜೋಡಿಸಿಲ್ಲ ಎಂದು ಹೇಳಲೂ ಸಾಧ್ಯವಿಲ್ಲದಂತಹ ಸ್ಥಿತಿ. ತನ್ನ ಚುನಾವಣಾ ಲಾಭಕ್ಕೆ ಮಾವೋವಾದಿ ಭಯೋತ್ಪಾದನೆಯನ್ನು ಅದು ಬಳಸಿಕೊಂಡಿದೆ ಎಂಬುದಂತೂ ವಾಸ್ತವ ಸಂಗತಿ. ಆದ್ದರಿಂದ ಅದೀಗ ತನ್ನ ಮುಖ ಮುಚ್ಚಿಕೊಳ್ಳಲು ಸಿಪಿಐ(ಎಂ)ದ್ದು ಎಡಬಿಡಂಗಿ ನೀತಿ ಎಂದು ಕಿರುಚಾಡುತ್ತಿದೆ.

ಇತ್ತೀಚಿನ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಎಲ್ಲ ಪ್ರತಿಗಾಮಿ ಶಕ್ತಿಗಳ ಮಹಾಕೂಟವನ್ನು ಬೆಸೆದಿತ್ತು ಮತ್ತು ಈ ಮಾವೋವಾದಿಗಳು ಕೂಡಾ ಅದರ ಭಾಗವಾಗಿದ್ದರು ಎಂಬುದೀಗ

ಪುಟ 14 ಕ್ಕೆ

ಸಂದರ್ಶನ

ದೇಶದ ರಕ್ಷಣೆಯಂತಹ ಒಂದು ಮಹತ್ವದ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಸಂಶೋಧನೆ, ಸಾಧನ, ಸಲಕರಣೆಗಳ ಪೂರೈಕೆಯ ಮೂಲಕ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆಗಳು ಬೆಂಗಳೂರಿನಲ್ಲಿ ನೆಲೆ ಹೊಂದಿವೆ. ಇಂತಹ ಆಯಕಟ್ಟಿನ ಉದ್ದಿಮೆಗಳನ್ನೂ ಸಹ ಖಾಸಗೀಕರಿಸುವ ಚಾಳಿ ತೋರುತ್ತಿದೆ ಕೇಂದ್ರ ಯುಪಿಎ ಸರ್ಕಾರ. ಈ ದೇಶದ ಸ್ವಾವಲಂಬನೆಗೆ ಈ ನೀತಿ ಹೇಗೆ ಮಾರಕ ಎಂಬುದನ್ನು - ಹಾಗೆ ಈ ಉದ್ದಿಮೆಗಳಲ್ಲಿ ಕಾರ್ಮಿಕ ವರ್ಗಕ್ಕೆ ಆಗುತ್ತಿರುವ ಅನ್ಯಾಯವನ್ನು ವಿವರಿಸಿದ್ದಾರೆ. ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನಕುಮಾರ್.



ಖಾಸಗಿ ಮೊಸಳೆಗಳ ಬಾಯಿಗೆ ರಕ್ಷಣಾವಲಯದ ಉದ್ದಿಮೆ

ಎಸ್.ಪ್ರಸನ್ನಕುಮಾರ್

ಸಂದರ್ಶನ ನಡೆಸಿದವರು: ಆರ್.ರಾಮಕೃಷ್ಣ

ಜನಶಕ್ತಿ : ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗಳ ಮಹತ್ವ ಏನು? ಅವುಗಳಿಗೆ ಒದಗಿ ಬರುತ್ತಿರುವ ಅಪಾಯಗಳೇನು?

ಪ್ರಸನ್ನಕುಮಾರ್ : ದೇಶದಲ್ಲಿ ಒಟ್ಟು 7 ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗಳಿವೆ. ಅವುಗಳಲ್ಲಿ ಬಿ.ಇ.ಎಲ್, ಹೆಚ್.ಎ.ಎಲ್, ಬಿ.ಇ.ಎಂ.ಎಲ್ ಕಾರ್ಖಾನೆಗಳು ಬೆಂಗಳೂರಿನಲ್ಲಿ ನೆಲೆಗೊಂಡಿವೆ. ಸರ್ಕಾರವು ಈ ಸಾರ್ವಜನಿಕ ಉದ್ದಿಮೆ (ಪಿಎಸ್‌ಯು)ಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಾ ಇಲ್ಲ ಎಂದು ಸಿ.ಎ.ಜಿ.(ಲೆಕ್ಕ ಮಹಾಪರಿಶೋಧಕರು)ಯು ತನ್ನ ವರದಿಯಲ್ಲಿ ತಿಳಿಸಿದ್ದು, ಸಾಮರ್ಥ್ಯದ ಪೂರ್ಣ ಬಳಕೆಗೆ ನಿರ್ದೇಶನ ಕೊಟ್ಟಿದೆ.

ಮಿಲಿಟರಿ ಕಮ್ಯೂನಿಕೇಷನ್ (ಸೇನೆಯ ಸಂಪರ್ಕ- ಸಂವಹನ)ಗೆ ಸಂಬಂಧಪಟ್ಟಂತಹ ರಾಡಾರ್‌ಗಳು, ಸೋನಾರ್‌ಗಳು, ಕಮ್ಯುನಿಕೇಷನ್ ಜಾಮರ್ಸ್ (ಸಂವಹನ, ಸಂಕೇತಗಳನ್ನು ಸ್ಥಗಿತಗೊಳಿಸುವ ಸಾಧನ) ಮುಂತಾದವುಗಳನ್ನು ಬಿ.ಇ.ಎಲ್. ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿದೆ.

ಹೆಚ್.ಎ.ಎಲ್.ನಲ್ಲಿ ಯುದ್ಧ ವಿಮಾನಗಳು, ಯುದ್ಧ ಹೆಲಿಕಾಪ್ಟರ್‌ಗಳು ಮುಂತಾದವನ್ನು ತಯಾರಿಸಲಾಗುತ್ತಿದೆ. ಬಿ.ಇ.ಎಂ.ಎಲ್. ಎಂದರೆ ಮಿಲಿಟರಿ ವಾಹನಗಳನ್ನು ಸರಬರಾಜು ಮಾಡುವಂತಹದ್ದು ಪ್ರಧಾನ. ಇವು ಕ್ಯಾಪ್ಟಿವ್ ಡಿಫೆನ್ಸ್ ಇಂಡಸ್ಟ್ರೀ ಅಂದರೆ ರಕ್ಷಣಾ ಅವಶ್ಯಕತೆಗಳಿಗಾಗಿ ಸ್ಥಾಪಿತವಾದವುಗಳು.

ಪ್ರಸ್ತುತ ಸರ್ಕಾರ ರಕ್ಷಣಾ ಉತ್ಪಾದನಾ ವಿಧಾನವನ್ನು ಬದಲಾಯಿಸುವ ಬಗೆಗೆ ಕೇಲ್ಕರ್ ಸಮಿತಿಯನ್ನು ನೇಮಿಸಿತ್ತು. ಕೇಲ್ಕರ್ ಸಮಿತಿ ವರದಿಯು ಮುಖ್ಯವಾಗಿ ದೇಶೀಯ ಮತ್ತು ವಿದೇಶೀಯ ಕಂಪನಿಗಳಿಗೆ ರಕ್ಷಣಾ ಉತ್ಪಾದನೆಯನ್ನು ವಹಿಸಿಕೊಡುವ ಸಲಹೆ ಕೊಟ್ಟಿದೆ. ಅಗತ್ಯವಿರುವಂತಹ



ತಂತ್ರಜ್ಞಾನ ಮತ್ತು ಸಾಮರ್ಥ್ಯ ಇಲ್ಲದಿರುವ ಖಾಸಗಿ ಬಂಡವಾಳಗಾರರಿಗೆ 'ಕೈಹಿಡಿದು ಮೇಲೆತ್ತು'- ಹ್ಯಾಂಡ್ ಲಿಫ್ಟ್ ಎಂಬ ನೀತಿಯನ್ನು ಪ್ರತಿಪಾದಿಸಲಾಗಿದೆ. ಅದೂ ಕೂಡ ಸಾರ್ವಜನಿಕ ಉದ್ದಿಮೆಗಳನ್ನು ಬಲಿಕೊಟ್ಟು ಹೀಗೆ ಮಾಡಲು ಸೂಚಿಸಲಾಗಿದೆ.

ಜನಶಕ್ತಿ: ಈ ಬಗ್ಗೆ ಇನ್ನಷ್ಟು ವಿವರ ನೀಡಿ

ಪ್ರಸನ್ನಕುಮಾರ್ : 'ಕೈ ಹಿಡಿದು ಮೇಲೆತ್ತು' ಎಂಬುದು ಎಲ್ಲಿಯವರೆಗೆ ತಲುಪಿದೆ ಎಂದರೆ ಡಿ.ಆರ್.ಡಿ.ಒ ಲ್ಯಾಬ್ (ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ) - ಪ್ರಯೋಗಾಲಯಗಳ ಸೌಲಭ್ಯ ಖಾಸಗಿಯವರಿಗೆ ದೊರಕುವಂತೆ ಮಾಡಲಾಗಿ[ದೆ]. ಇದಕ್ಕೆ ತೊಡಗಿಸಿರುವ ಜ್ಞಾನ, ಬಂಡವಾಳ, ಶ್ರಮ ಎಲ್ಲವೂ ಸಾರ್ವಜನಿಕ ವಲಯದ್ದು, ಸರ್ಕಾರದ್ದು. ಆದರೆ ಫಲಿತಾಂಶ ವನ್ನು ಖಾಸಗಿಯವರಿಗೆ ಕೊಡುವುದೇ ಈ ನೀತಿ. ಇದಕ್ಕೆ ಬುದ್ಧಿವಂತಿಕೆಯಿಂದ ಪಾಲುದಾರಿಕೆ (ಶೇರಿಂಗ್) ಎನ್ನಲಾಗುತ್ತಿದೆ.

ಸರ್ಕಾರ 100 ಕೋಟಿ ಶೇರು ಬಂಡವಾಳ ಹೊಂದಿರುವ ಖಾಸಗಿಯವರಿಗೆ ರಕ್ಷಣಾ ಉತ್ಪಾದಕ ರತ್ನ (ಆರ್‌ಯುಆರ್) ಸ್ಥಾನಮಾನ ಕೊಡಲು ಹೊರಟಿದೆ. ಈಗಾಗಲೇ 13 ಖಾಸಗಿ ಕಂಪನಿಗಳನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ. ಅದರಲ್ಲಿ ಟಾ[ಟಾ], ಗೋದ್ರೇಜ್, ಎಲ್ ಅಂಡ್ ಟಿ, ರಿಲೆಯನ್ಸ್, ಇನ್ಫೋಸಿಸ್, ವಿಪ್ರೊ ಮುಂತಾದವರೆಲ್ಲರನ್ನು ಸೇರಿಸಲಾಗಿದೆ. ಈ ಕಂಪನಿಗಳಿಗೆ ಆರ್‌ಯುಆರ್ ಸ್ಥಾನ ಕೊಡುವ ಉದ್ದೇಶವೇನು? ಇದುವರೆಗೆ ಈ ಕಂಪನಿಗಳಿಗೆ ರಕ್ಷಣಾ ವಲಯಕ್ಕೆ ಪೂರಕ ಉತ್ಪಾದನೆಗೆ ಅವಕಾಶ ಇತ್ತು. 15,000 ಕ್ಕೂ ಹೆಚ್ಚು ಸಣ್ಣ ಉತ್ಪಾದಕರು ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗೆ ತಮ್ಮ ಪೂರಕ ಉತ್ಪನ್ನಗಳನ್ನು ಒದಗಿಸುತ್ತಿದ್ದಾರೆ. ಕೊನೆಗೆ ಖಾಸಗಿಯವರನ್ನೇ 'ನೋಡಲ್ ಏಜೆನ್ಸಿ' ಮಾಡಲು ಹೊರಟಿದ್ದಾರೆ. ಆರ್‌ಯುಆರ್ ಸ್ಥಾನ ಕೊಡುವುದರಿಂದ ಈ ನಿಟ್ಟಿನಲ್ಲಿ ಈಗಾಗಲೇ ಒಂದು ಪ್ರಯತ್ನ ಹೆಚ್.ಎ.ಎಲ್. ನಲ್ಲಿ ಆಗಿದೆ. ಅದರ ಪ್ರಕಾರ ಟಾಟಾ ಮತ್ತು ಒಂದು ಅಮೇರಿಕನ್ ಕಂಪನಿಗಳಿಗೆ 197 ಹೆಲಿಕಾಪ್ಟರ್ ಉತ್ಪಾದನೆಗೆ ಆದೇಶ ನೀಡಿದ್ದಾರೆ. ಸಾರ್ವಜನಿಕ ವಲಯಕ್ಕೆ ಕೊಡಬೇಕಾದ ಆರ್ಡರನ್ನು ಈ ಕಡೆಗೆ ತಿರುಗಿಸಲಾಗಿದೆ.

ಒಂದು ಹೆಲಿಕಾಪ್ಟರ್ ಅಂದರೆ ಸುಮಾರು 50 ಕೋಟಿ. ಒಟ್ಟಾರೆ ಇದು 10 ಸಾವಿರ ಕೋಟಿ ರೂ.ಗಳ ಯೋಜನೆ. 'ತೇಜಸ್' ಯುದ್ಧ ವಿಮಾನದಂತಹ ಎಂ.ಎಂ.ಆರ್.ಸಿ.ಎ (ಮೀಡಿಯಂ ಮಲ್ಟಿರೋಲ್ ಕಾಂಪ್ಯಾಕ್ಟ್, ಏರ್‌ಕ್ರಾಫ್ಟ್) ಬಹುಮುಖಿ ಧಾಳಿ ಮಾಡುವ ಸಾಮರ್ಥ್ಯದ ಯುದ್ಧ ವಿಮಾನದ ವಿಷಯದಲ್ಲಿಯೂ ಹೀಗೆಯೇ ಮಾಡಲಾಗುತ್ತಿದೆ. ಇದನ್ನು ಕೂಡ ಆರ್‌ಯುಆರ್‌ಗೆ ಕೊಡಲು ತೀರ್ಮಾನಿಸಲಾಗಿದೆ.

ಮೇಲೆ ಹೇಳಿದ ವಿಮಾನದ ಉತ್ಪಾದನೆಯಲ್ಲಿ ಮುಖ್ಯವಾಗಿ ಮೂರು ರೀತಿಯ ವಿಭಾಗಗಳಿವೆ. ಒಂದು ಹೊರಕವಚದ ಉತ್ಪಾದನೆ (ಏರ್‌ಫ್ರೇಮ್) ಇದು ತುಂಬಾ ಸಂಕೀರ್ಣ ತಂತ್ರಜ್ಞಾನ. ವಿಮಾನವು ಮೋಡಗಳ ನಡುವೆ ಹಾಗೂ ಪ್ರತಿಕೂಲ ಹವಾಮಾನದಲ್ಲಿ -200 ರಿಂದ 300 ಡಿಗ್ರಿ ಸೆಲ್ಸಿಯಸ್‌ಗಳಲ್ಲೂ ಅಪಾಯವಿಲ್ಲದೆ ಪಯಣಿಸ[ಲು] ಸಾಧ್ಯವಾಗಬೇಕಾದಂತಹ ರೀತಿಯಲ್ಲಿ ಹೊರಕವಚ ಇರಬೇಕಾಗುತ್ತದೆ. ಅಷ್ಟೇ ಮಹತ್ವದ ಮತ್ತೊಂದು ಉತ್ಪಾದನೆ ವಿಮಾನದ ಇಂಜಿನ್ನುಗಳು. ಇದೂ ಸಹ

ಬಿಇಎಲ್ ಕಾರ್ಮಿಕ ಸಂಘಕ್ಕೆ ಚುನಾವಣೆ : ಸಿಐಟಿಯು ಗೆ ಮಾನ್ಯತೆ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ.ಇ.ಎಲ್.) ಒಂದು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಸಾರ್ವಜನಿಕ ಉದ್ದಿಮೆ ಬಿ.ಇ.ಎಲ್.ನ ಬೆಂಗಳೂರು ಘಟಕದಲ್ಲಿ ಕಾರ್ಮಿಕ ಸಂಘದ ಮಾನ್ಯತೆಗಾಗಿ ಜೂನ್ 11, 2009 ರಂದು ಚುನಾವಣೆ ನಡೆಯಿತು.

ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಚುನಾವಣೆಯಲ್ಲಿ ಕಾರ್ಮಿಕರು ತಮ್ಮ ಆಯ್ಕೆಯ ಕಾರ್ಮಿಕ ಸಂಘಕ್ಕೆ ಗುಪ್ತ ಮತದಾನದ ಮೂಲಕ ಮತ ನೀಡುತ್ತಾರೆ. ಯಾವುದಾದರೂ ಸಂಘ ಶೇ.50 ಅಥವಾ ಅದಕ್ಕಿಂತ ಹೆಚ್ಚು ಮತ ಗಳಿಸಿದರೆ ಆ ಸಂಘಕ್ಕೆ ಮಾನ್ಯತೆ ದೊರೆಯುತ್ತದೆ. ಒಂದೊಮ್ಮೆ ಯಾವುದೇ ಸಂಘಕ್ಕೆ ಶೇ.50 ಮತ ದೊರೆಯದಿದ್ದಲ್ಲಿ ಆಗ ಮೊದಲ ಸ್ಥಾನ ಮತ್ತು 2ನೇ ಸ್ಥಾನಗಳಿಸಿದ ಎರಡು ಸಂಘಕ್ಕೆ ಮಾನ್ಯತೆ ದೊರೆಯುತ್ತದೆ. ಈಗ ಹಾಗೆಯೇ ಆಗಿದೆ. ಚುನಾವಣೆಯಲ್ಲಿ 1092 ಮತಗಳೊಂದಿಗೆ ಮೊದಲ ಸ್ಥಾನಗಳಿಸಿದ 'ಬಿ.ಇ.ಡಬ್ಲ್ಯು.ಯು.ಎಫ್.' ಎಂಬ ಸ್ವತಂತ್ರ ಸಂಘಟನೆಗೆ ಮಾನ್ಯತೆ ದೊರೆತಿದೆ. ಅದೇ ರೀತಿ 812 ಮತ ಪಡೆದು ಎರಡನೇ ಸ್ಥಾನ ಗಳಿಸಿದ, ಸಿಐಟಿಯು ಗೆ ಸೇರ್ಪಡೆ ಹೊಂದಿರುವ ಬಿ.ಇ.ಡಬ್ಲ್ಯು.ಯು. (ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್) ಸಹ ಮಾನ್ಯತೆ ಗಳಿಸಿದೆ.

ಚುನಾವಣೆಯಲ್ಲಿ ಸ್ಪರ್ಧಿಸಿದ - ಎಐಟಿಯುಸಿಗೆ ಸೇರ್ಪಡೆ ಹೊಂದಿರುವ ಬಿ.ಇ.ಇ.ಯು - 725 ಮತಗಳನ್ನು, ಬಿ.ಎಂ.ಎಸ್.ಗೆ ಸೇರ್ಪಡೆ ಹೊಂದಿರುವ ಬಿ.ಇ.ಎಂ.ಎಸ್. 378 ಮತಗಳನ್ನು ಗಳಿಸಿ ಕ್ರಮವಾಗಿ 3 ಮತ್ತು 4ನೇ ಸ್ಥಾನಗಳಿಸಿವೆ.

ಮಾನ್ಯತೆಗಳಿಸಿದ ನಂತರ ಆಯಾಯ ಸಂಘಟನೆಗಳೊಳಗೆ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯುತ್ತದೆ. ಈಗಿನ್ನೂ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯಬೇಕಿದೆ. ಹಿಂದೆ 2006 ರಲ್ಲಿ ನಡೆದ ಚುನಾವಣೆಯಲ್ಲಿಯೂ ಸಿಐಟಿಯು ಗೆ ಸೇರ್ಪಡೆ ಹೊಂದಿರುವ ಬಿ.ಇ.ಡಬ್ಲ್ಯು.ಯು. ಗೆ ಎರಡನೇ ಸ್ಥಾನ ದೊರಕಿತ್ತು ಮತ್ತು ನಂತರದ ಪದಾಧಿಕಾರಿಗಳ ಚುನಾವಣೆಯಲ್ಲಿ ಬಿಇಡಬ್ಲ್ಯುಯು ಗೆ ಅಧ್ಯಕ್ಷರಾಗಿ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಕಾರ್ಯಾಧ್ಯಕ್ಷರಾಗಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಆಯ್ಕೆಯಾಗಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕ್ಲಿಷ್ಟಕರ ತಂತ್ರಜ್ಞಾನದ ಉತ್ಪಾದನೆ. ಈ ಎರಡನ್ನೂ ಹೆಚ್.ಎ.ಎಲ್ ಉತ್ಪಾದನೆ ಮಾಡಬೇಕಾಗಿದೆ. ಎಂ.ಎಂ.ಆರ್.ಸಿ.ಎ ಯೋಜನೆ ಒಟ್ಟು 42,000 ಕೋಟಿ ರೂಗಳದ್ದಾದರೆ ಈ ಹೊರಕವಚ ಮತ್ತು ಇಂಜಿನ್‌ಗಳ ಉತ್ಪಾದನೆಗೆ ದೊರೆಯುವ ಮೊತ್ತ 10,000 ಕೋಟಿ ರೂಪಾಯಿಗಳು ಮಾತ್ರ. ಯೋಜನೆಯ ಮೊತ್ತದ ಶೇ.60 ರಿಂದ 70 ಪಾಲು ಹಣ ದೊರೆಯುವ ಏವಿಯೋನಿಕ್ಸ್ (ವಿಮಾನಯಾನ ತಂತ್ರಜ್ಞಾನ ಸಾಫ್ಟ್‌ವೇರ್) ಉತ್ಪಾದನೆಯನ್ನು ಆರ್‌ಯುಆರ್‌ಗೆ ಕೊಡಲು ನಿರ್ಧರಿಸಲಾಗಿದೆ. ಹಲಸಿನ ಹಣ್ಣು ಕೊಯ್ಯುವ ಕೆಲಸ ಸರ್ಕಾರಿ ಸ್ವಾಮ್ಯದ ಉದ್ದಿಮೆಗೆ, ಹಸಲಿನ ತೊಳೆ ಬಿಡಿಸಿಕೊಳ್ಳುವ ಕೆಲಸ ಖಾಸಗಿಯವರಿಗೆ...!!

ಈ ವಿಚಾರದಲ್ಲಿ ಆರ್‌ಎಫ್‌ಕ್ಯೂ ಮಾಡಲಾಗಿದೆ. ಅಂದರೆ ಆಗಲೇ ಉತ್ಪಾದಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಕಠಿಣ ಕೆಲಸ -ಕಡಿಮೆ ಆದಾಯ ಇರುವುದನ್ನು ಸಾರ್ವಜನಿಕ ಸಂಸ್ಥೆಗೂ, ಹೆಚ್ಚು ಲಾಭದ, ಸುಲಭ ಸಾಧ್ಯವಾದದ್ದನ್ನು ಖಾಸಗಿಯವರಿಗೂ ಕೊಡಲಾಗುತ್ತಿದೆ. ಟಾಟಾ ಸಂಸ್ಥೆ ತನ್ನ ಉತ್ಪನ್ನವನ್ನು ಒಂದು ವರ್ಷದಲ್ಲಿ ಕೊಡುತ್ತೇವೆ ಎಂದಿದೆ. ಆದರೆ ಟಾಟಾ ಸಂಸ್ಥೆ ಅದನ್ನು ಉತ್ಪಾದಿಸುತ್ತಿಲ್ಲ. ವಿದೇಶಿ ಕಂಪನಿ ಅಥವಾ ಇತರರಿಂದ ಖರೀದಿಸಿ ಕೊಡುತ್ತಾರೆ ಎಂಬುದು ಸ್ಪಷ್ಟವಾಗಿದೆ.

ಜನಶಕ್ತಿ : ಖಾಸಗೀಕರಣದ ತೀವ್ರತೆ ಈ ಮಟ್ಟ ತಲುಪಿದೆಯೇ?

ಪ್ರಸನ್ನಕುಮಾರ್: ಇಷ್ಟೇ ಅಲ್ಲ. ಟ್ಯಾಕ್ಟಿಕಲ್ ಕಮ್ಯುನಿಕೇಷನ್ ಸಿಸ್ಟಮ್ ಎಂಬುದು ಮಿಲಿಟರಿ ವಾಹನಗಳಿಗೆ ಅವು ಚಲನೆಯಲ್ಲಿರುವಾಗಲೂ ದೂರವಾಣಿ, ಅಂತರ್ಜಾಲ ಇತ್ಯಾದಿ ಮಹತ್ವದ ವಿವಿಧ ಸಂವಹನ ಸಂಪರ್ಕ ವ್ಯವಸ್ಥೆಯನ್ನು ಒದಗಿಸುವ ತಂತ್ರಜ್ಞಾನ. ಬಾಂಬ್ ದಾಳಿಗಳಂತಹ ಅಪಾಯವನ್ನೆದುರಿಸಿದರೂ ಸಂಪರ್ಕ ವ್ಯವಸ್ಥೆಯು ನಾಶವಾದಂತಹ ತಂತ್ರಜ್ಞಾನ ಇಲ್ಲಿ ಅಗತ್ಯವಾಗುತ್ತದೆ. ಇಂತಹ ತಂತ್ರಜ್ಞಾನ ಬೆಳವಣಿಗೆಗೆ ಈಗಾಗಲೇ 2000 ಕೋಟಿ ಮೊತ್ತವನ್ನು ಹಾಗೂ ಮಾನವ ಸಂಪನ್ಮೂಲವನ್ನು ಬಿ.ಇ.ಎಲ್. ಸಂಸ್ಥೆ ತೊಡಗಿಸಿದೆ. ಇದು 5000 ಕೋಟಿ ರೂ.ನಿಂದ 50,000 ಕೋಟಿ ರೂ.ಗಳ ಯೋಜನೆ. ಈ ಯೋಜನೆಯನ್ನು ಟಾಟಾಗೆ ವಹಿಸಿಕೊಡುವ ಸಿದ್ಧತೆ ನಡೆದಿದೆ. ಬಿ.ಇ.ಎಲ್. ಉತ್ಪನ್ನಗಳಲ್ಲಿ ಶೇ.80ರಷ್ಟು ಸ್ವಂತ ತಂತ್ರಜ್ಞಾನದಿಂದ ಆಗುವುದು. ಅಂದರೆ ತನ್ನದೇ ಸಂಶೋಧನೆ ಮತ್ತು ಅಭಿವೃದ್ಧಿಯ ಮೂಲಕ ರೂಪಿಸಲಾದ ತಂತ್ರಜ್ಞಾನದಿಂದ ಆಗುವುದು. ಇಂತಹ ಪ್ರಯತ್ನಗಳಿಗೆ ಬೆಂಬಲ ನೀಡದೆ ಖಾಸಗಿಯವರನ್ನು ಅವಲಂಬಿಸುವುದು, ಖಾಸಗಿಯವರು ವಿದೇಶಿಯರು ಹಾಗೂ ಇತರರ ಮೇಲೆ ಅವಲಂಬಿಸುವುದು ದೇಶದ ಸ್ವಾವಲಂಬನೆಗೆ ಅತ್ಯಂತ ಮಾರಕವಾದುದು.

ಇಲ್ಲೊಂದು ಆಸಕ್ತಿಕರವಾದ ವಿಚಾರವಿದೆ. ಈ ಉತ್ಪನ್ನವನ್ನು ಒದಗಿಸುವ ಸಾಮರ್ಥ್ಯ ಯಾರಿಗಿದೆ ಎಂಬುದನ್ನು 'ಮೌಲ್ಯಮಾಪನ' ಮಾಡಲು 'ಎವಾಲ್ಯುವೇಷನ್ ಸಮಿತಿ' ಅಂತ ಒಂದನ್ನು ಮಾಡಿದ್ದಾರೆ. ಇದು ಅಗತ್ಯವೇ ಇರಲಿಲ್ಲ. ಬಿ.ಇ.ಎಲ್.ಗೆ ಆ ಸಾಮರ್ಥ್ಯ ಇದೆ ಎನ್ನುವುದು ಈಗಾಗಲೇ ಸಿದ್ಧವಾಗಿದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಈ ಮೌಲ್ಯಮಾಪನ ಸಮಿತಿಗೆ ಇದೇ ಟಾಟಾ ಸಂಸ್ಥೆಯ ಪ್ರತಿನಿಧಿಯನ್ನು ಸದಸ್ಯರನ್ನಾಗಿ ಹಾಕಿಕೊಂಡಿದ್ದಾರೆ. ಅವರು ಭಾರತೀಯ ಕೈಗಾರಿಕಾ ಒಕ್ಕೂಟ(ಸಿಐಐ) ಪ್ರತಿನಿಧಿ ಎಂದು ಹೇಳಲಾಗಿದೆಯಾದರೂ ವಾಸ್ತವವಾಗಿ ಅವರು ಟಾಟಾ ಸಂಸ್ಥೆಗೆ ಸೇರಿದವರು.

ಜನಶಕ್ತಿ : ಎರಡನೇ ಅವಧಿಗೆ ಯುಪಿಎ ಸರ್ಕಾರ ಅಧಿಕಾರದಲ್ಲಿ ಮುಂದುವರೆದಿದೆ. ಈ ಹೊಸ ಸರ್ಕಾರದ ಧೋರಣೆ ಈ ವಿಷಯದಲ್ಲಿ ಏನಿದೆ?

ಪ್ರಸನ್ನಕುಮಾರ್: ಸಾರ್ವಜನಿಕ ಉದ್ದಿಮೆಗಳ ಶೇ.51 ರಷ್ಟು ಶೇರನ್ನು ಮಾತ್ರ ತನ್ನಲ್ಲಿ ಇರಿಸಿಕೊಂಡು ಉಳಿದಿದ್ದನ್ನು ಖಾಸಗೀಕರಣ ಮಾಡಲು ಸರ್ಕಾರ ಹೊರಟಿದೆ. ರಾಷ್ಟ್ರಪತಿಗಳ ಭಾಷಣದಲ್ಲಿ ಅದು ವ್ಯಕ್ತವಾಗಿದೆ. ಖಾಸಗೀಕರಣವನ್ನು ತೀವ್ರಗೊಳಿಸುವುದು ಸರ್ಕಾರದ ಉದ್ದೇಶ. ಸರ್ಕಾರ ಹಿಂದಿನ ಬಜೆಟ್‌ಗಳಲ್ಲಿ ಬಂಡವಾಳ ಹಿಂತೆಗೆತದಿಂದ 10,000 ದಿಂದ 12,000 ಕೋಟಿ ರೂ.ಗಳ ಸಂಗ್ರಹಣೆಗೆ ಗುರಿ ಹೊಂದಿರುತ್ತಿತ್ತು. ಅದು ಕಳೆದ ವರ್ಷದ ಬಜೆಟ್‌ನಲ್ಲಿ 12,000 ಕೋಟಿ ರೂ. ಇತ್ತು. ಹಿಂದೆಲ್ಲಾ ಎಡಪಕ್ಷಗಳ ಪ್ರತಿರೋಧ ಇದ್ದುದರಿಂದ ಶೇ.10 ರಷ್ಟು ಸರ್ಕಾರದ ಗುರಿ ಸಾಧನೆ ಆಗಿರಲಿಲ್ಲ. ಈಗ 1,14,000 ಕೋಟಿ ರೂ.ಗಳ ಬಂಡವಾಳ ಹಿಂತೆಗೆತದ ಗುರಿ ಘೋಷಿಸಲಾಗಿದೆ. ಇದಲ್ಲದೆ ಆರಂಭಿಕ ಸಾರ್ವಜನಿಕ ಹೂಡಿಕೆ ಆಹ್ವಾನ (ಐಪಿಒ) ಮೂಲಕವೂ ಖಾಸಗೀಕರಣಕ್ಕೆ ಯೋಜಿಸಲಾಗಿದೆ. ಅಂದರೆ ಇರುವ ಶೇರುಗಳನ್ನು ಮಾರುವುದಿಲ್ಲ. ಆದರೆ ಹೆಚ್ಚುವರಿ ಷೇರು ಬಿಡುಗಡೆ ಮಾಡಿ ಪರೋಕ್ಷವಾಗಿ ಖಾಸಗೀಕರಣ ಮಾಡಲು ಯೋಜಿಸಲಾಗಿದೆ. ಬಿ.ಎಸ್.ಎನ್.ಎಲ್. ನೌಕರರಿಗೆ ವೇತನ ಪರಿಷ್ಕರಣೆಗೆ ತಮ್ಮ ಸಂಸ್ಥೆ ಬಿಎಸ್‌ಎನ್‌ಎಲ್‌ನ ಷೇರು ಖರೀದಿಯ ಷರತ್ತು ವಿಧಿಸಲಾಗುತ್ತಿದೆ. ಹಿಂದೆ 500 ಷೇರು ಕೊಳ್ಳಬೇಕು ಎಂದಿದ್ದ ಷರತ್ತು ಈಗ 5000 ಷೇರು ಕೊಳ್ಳಬೇಕು ಎಂಬ ಮಟ್ಟಕ್ಕೆ ಬಂದಿದೆ.

ಜನಶಕ್ತಿ : ಸಾರ್ವಜನಿಕ ವಲಯದ ಕಾರ್ಮಿಕರ ಸಮಸ್ಯೆಗಳೇನು? ಮುಖ್ಯ ಪ್ರಶ್ನೆಗಳೇನಿವೆ?

ಪ್ರಸನ್ನಕುಮಾರ್: ಸಾರ್ವಜನಿಕ ವಲಯದ, ಕಾರ್ಮಿಕರ ವೇತನ ಪರಿಕಷ್ಕರಣೆಯು 5 ವರ್ಷಕ್ಕೆ ಆಗಬೇಕೆಂಬುದು ಈಗ ಪ್ರಧಾನವಾದ ವಿಷಯ. ಹಿಂದೆ ಸರ್ಕಾರವು 10 ವರ್ಷಕ್ಕೊಮ್ಮೆ ಆಗಲಿ ಎಂದಾಗ ತೀವ್ರವಾಗಿ ಪ್ರತಿಭಟಿಸಲಾಗಿತ್ತು. ಸಿ.ಪಿ.ಎಸ್.ಟಿ.ಯು (ಕೇಂದ್ರೀಯ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಗಳ ಒಕ್ಕೂಟ)ದ ಹೋರಾಟದ ಭಾಗವಾಗಿ ಮೇ 7, 2008 ಕ್ಕೆ ಅಖಿಲ ಭಾರತ ಮುಷ್ಕರ ತೀರ್ಮಾನವಾಗಿತ್ತು. ಈ ಹಿನ್ನೆಲೆಯಲ್ಲಿ ಮೇ 1 ಕ್ಕೆ 5 ವರ್ಷದ ಅವಧಿಯ ವೇತನ ಒಪ್ಪಂದಕ್ಕೆ ಒಪ್ಪಿ ಆದೇಶ ಹೊರಡಿಸಲಾಗಿತ್ತು. ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಕಲ್ಲಿದ್ದಲು ಕಾರ್ಮಿಕರು ದೃಢವಾದ ಹೋರಾಟ ನಡೆಸಿ 10 ವರ್ಷದ ಅವಧಿ ಇದ್ದುದನ್ನು 5 ವರ್ಷಕ್ಕೆ ಇಳಿಸಿ ಹೋರಾಟ ಯಶಸ್ವಿಯಾಗಿತ್ತು. ಕಲ್ಲಿದ್ದಲು ಕಾರ್ಮಿಕರು ಇದೀಗ ಜನವರಿ 2009 ಕ್ಕೆ ಮತ್ತೊಂದು 5 ವರ್ಷದ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಇದರಲ್ಲಿ ಸಿಐಟಿಯು ಪ್ರಧಾನ ಪಾತ್ರ ವಹಿಸಿದೆ. ಇತರ ಕಾರ್ಮಿಕ ಸಂಘಗಳು ಮುಷ್ಕರಕ್ಕೆ ತಯಾರಲಿಲ್ಲ. ಸಿಐಟಿಯು ತನ್ನ ಸ್ವಂತ ಶಕ್ತಿಯ ಆಧಾರದ ಮೇಲೆ ಡಿಸೆಂಬರ್ 17, 18 2008 ರಂದು ಮುಷ್ಕರ ನಡೆಸಲು ನಿರ್ಧರಿಸಿ ಸಿದ್ಧತೆ ನಡೆಸಿತ್ತು. ಅನಂತರ ಇತರರು ದಿನಾಂಕ ಮುಂದೂಡಿಕೆಗೆ ವಿನಂತಿಸಿ ಜೊತೆಗೂಡಿದರು. ಜನವರಿ 4, 2009 ರಂದು ಮುಷ್ಕರ ನಡೆಸಲು ಜಂಟಿ ತೀರ್ಮಾನವಾಗಿತ್ತು. ಕೊನೆಗೆ ಜೂನ್ 3 ರಂದು ಮಾತುಕತೆ ನಡೆದು ತಿಳುವಳಿಕೆಗೆ ಬರಲಾಯಿತು.

ಹೊಸ ಸರ್ಕಾರ ಬಂದಂತಹ ಸಂದರ್ಭದಲ್ಲಿ ಹಿಂದೆ 5 ವರ್ಷದ ವೇತನ ಪರಿಷ್ಕರಣ ನೀತಿಗೆ ಒಪ್ಪಿದ್ದೇವೆ ಎಂದಿದ್ದವರು ಈಗ ಅದನ್ನು ಜಾರಿ ಮಾಡಲು ಸಿದ್ಧರಿಲ್ಲ. ಹೆಚ್.ಎ.ಎಲ್.ನಲ್ಲಿ 10 ವರ್ಷದ ವೇತನ ಒಪ್ಪಂದ ಆಗಲಿ ಎಂದು ಹೇಳಲಾಗುತ್ತಿದೆ. ಬಿ.ಹೆಚ್.ಇ.ಎಲ್. ನಲ್ಲಿಯೂ ಹಾಗೇ. ಬಿ.ಇ.ಎಂ.ಎಲ್.ನಲ್ಲಿ ಸಹ 10 ವರ್ಷ ಎಂಬ 'ಬೇಡಿಕೆ' ಕೇಳಿಬರುತ್ತಿದೆ. ಬಿ.ಇ.ಎಲ್.ನಲ್ಲಿ ಸಹ 10 ವರ್ಷ ಎಂಬ ಬೇಡಿಕೆ ಕೇಳಿಬರುತ್ತಿದೆ. ಬಿ.ಇ.ಎಲ್.ನಲ್ಲಿ ಮಾತ್ರ 5 ವರ್ಷದದ ವೇತನ ಒಪ್ಪಂದಕ್ಕೆ ಆಡಳಿತ ಮಂಡಳಿ ಸಮ್ಮತಿಸಿದೆ. ಬಿ.ಇ.ಎಲ್.ನಲ್ಲಿ ಮೇ 28, 2009 ರಂದು ಕಾರ್ಮಿಕ ವಿರೋಧಿ ಧೋರಣೆ ಖಂಡಿಸಿ ದೇಶಾದ್ಯಂತ 9 ಘಟಕಗಳಲ್ಲಿಯೂ ಮುಷ್ಕರ ನಡೆಯಿತು. ಅಧಿಕಾರಿಗಳು ಸಹ ಒಳಗೆ ಹೋಗಲು ಬಿಡಲಿಲ್ಲ. ಬಿ.ಇ.ಎಲ್, ಸಿ.ಎಂ.ಡಿ. ಯವರು ಕೂಡ ಕಾರ್ಮಿಕರ ಅನುಮತಿ ಮೇರೆಗೆ ಒಳಗೆ ಹೋಗುವಂತಾಯಿತು. ಹೀಗಾಗಿ 5 ವರ್ಷದ ವೇತನ ಒಪ್ಪಂದ ಆಗಿದೆ. ಮುಂದೆ ನೋಡಬೇಕು.

ಜನಶಕ್ತಿ : ಅಧಿಕಾರಿಗಳಿಗೂ ಕಾರ್ಮಿಕರಿಗೂ ಧೋರಣೆಯಲ್ಲೇನಾದರೂ ವ್ಯತ್ಯಾಸವಿದೆಯೇ?

ಪ್ರಸನ್ನಕುಮಾರ್: ಖಂಡಿತ ಇದೆ. ಕಾರ್ಮಿಕರು ಅಧಿಕಾರಿಗಳ ನಡುವೆ ತಾರತಮ್ಯದ ಧೋರಣೆ ಅನುಸರಿಸಲಾಗುತ್ತಿದೆ. ಅಧಿಕಾರಿಗಳಿಗೆ ವೇತನ



ಪರಿಷ್ಕರಣೆ ಮಾಡಲಾಗಿದೆ. ಅದರ ಪ್ರಕಾರ ಶೇ.30 ವೇತನ ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ. ಅಲ್ಲದೆ ಶೇ.40 ರಿಂದ ಶೇ.200 ರಷ್ಟು ಸಾಧನೆ ಆಧಾರಿತ ವೇತನ ನೀಡಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಒಂದು ಸಮಿತಿ ರಚಿಸಲಾಗಿತ್ತು. ಜಸ್ಟಿಸ್ ಜನಾರ್ಧನರಾವ್ ಸಮಿತಿ. ಈ ಸಮಿತಿಯು ವೇತನ ಪರಿಷ್ಕರಣೆಗೆ ಕಾಲಾವಧಿಯನ್ನು ನಿರ್ದಿಷ್ಟವಾಗಿ ನಿಗದಿಪಡಿಸಿಲ್ಲ. ಕಂಪನಿಯ ಬೋರ್ಡ್‌ಗೆ ವೇತನ ಒಪ್ಪಂದ ಅವಧಿ ನಿಗದಿಗೆ ಅಧಿಕಾರ ನೀಡಲಾಗಿದೆ. ಜಂಟಿ ಕ್ರಿಯಾ ಸಮಿತಿ (ಜೆ.ಎ.ಎಫ್) ಬಿ.ಇ.ಎಲ್, ಹೆಚ್.ಎ.ಎಲ್, ಬಿ.ಹೆಚ್.ಇ.ಎಲ್, ಬಿ.ಇ.ಎಂ.ಎಲ್, ಐ.ಟಿ.ಐ ಮುಂತಾದ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಬೆಂಗಳೂರಿನಲ್ಲಿ ಜೂನ್ 21 ರಂದು ಸೇರಿ ಈ ಸಂಬಂಧ ನಿರ್ದಿಷ್ಟ ಚಳುವಳಿ ನಡೆಸಲು ತೀರ್ಮಾನಿಸಲಾಗಿದೆ. ಈ ಕುರಿತು ಸಿಪಿಎಸ್‌ಟಿಯು ಕೇರಳದ ಕೊಚ್ಚಿನ್‌ನಲ್ಲಿ ಜೂನ್ 27 ರಂದು ಸಭೆ ಸೇರಲಿದ್ದು ಅಲ್ಲಿ ಹೋರಾಟ ತೀರ್ಮಾನ ಮಾಡಲಾಗುತ್ತದೆ.

ಬಿ.ಇ.ಎಲ್, ಹೆಚ್.ಎ.ಎಲ್ ಗಳು ಉನ್ನತ ತಂತ್ರಜ್ಞಾನದ ಸಂಸ್ಥೆಗಳು. ಇವು ನವರತ್ನ ಕಂಪನಿಗಳಲ್ಲಿರುವಂಥವು 01.12.2006 ರಿಂದ 2 ರಿಂದ 8 ಹೆಚ್ಚುವರಿ ಬಡ್ತಿ ಮಂಜೂರು ಮಾಡಲಾಗಿತ್ತು. 01.01.2007 ರಿಂದ ವೇತನ ಒಪ್ಪಂದ ಆಗಬೇಕಿದೆ. ಆಡಳಿತ ವರ್ಗ 'ಹೆಚ್ಚುವರಿ ಬಡ್ತಿ ಕೊಡಲಾಗಿದೆ. ಅವುಗಳನ್ನು ವೇತನ ಪರಿಷ್ಕರಣೆಗೆ ಪರಿಗಣಿಸುವುದಿಲ್ಲ' ಎಂದು ತೀರ್ಮಾನಿಸಿದೆ. ಇದರಿಂದ ವೇತನ ಪರಿಷ್ಕರಣೆ ಎಂಬುದು ಇಲ್ಲಿ ವಾಸ್ತವಿಕವಾಗಿ ವೇತನ ಕಡಿತವಾಗಿ ಪರಿಣಮಿಸುತ್ತಿದೆ. ಈ ಬಗ್ಗೆ ಎಲ್ಲರೂ ಸೇರಿ ತೀವ್ರ ಚಳುವಳಿ ಹಮ್ಮಿಕೊಳ್ಳಬೇಕಾದ ಅಗತ್ಯ ಬಂದಿದೆ.

ದೇಶದಲ್ಲೆಲ್ಲಾ ಕಾರ್ಮಿಕರಿಗೆ ಹೆಚ್ಚುವರಿಯಾಗಿ ತುಟ್ಟಿಭತ್ಯೆ (ಡಿ.ಎ.) ಯ ಶೇ.50ರಷ್ಟನ್ನು ಮೂಲ ವೇತನಕ್ಕೆ ವಿಲೀನಗೊಳಿಸಿದ್ದಾರೆ. ಆದರೆ ಐ.ಟಿ.ಐ. ನಲ್ಲಿ ಮಾತ್ರ ಇಲ್ಲ. ಕಾರ್ಮಿಕರು ತೊಂದರೆಯಲ್ಲಿದ್ದಾರೆ. ಕಾಲಕಾಲಕ್ಕೆ ವೇತನ ಪಾವತಿ ಆಗುತ್ತಿಲ್ಲ. ಇವತ್ತು 93 ಮಿಲಿಯನ್ ಮೊಬೈಲ್ ಲೈನ್‌ಗಳು ಬಿಎಸ್‌ಎನ್‌ಎಲ್ ಒಂದೇ ಸಂಸ್ಥೆಗೆ ಬೇಕಾಗಿದೆ. ಅದಕ್ಕೆ ಸಂಬಂಧಿಸಿ ಸರ್ಕಾರದ್ದೇ ಸಂಸ್ಥೆಯಾದ ಐ.ಟಿ.ಐ.ಗೆ ಆರ್ಡರ್ (ಉತ್ಪಾದನೆಗೆ ಆದೇಶ) ನೀಡುತ್ತಿಲ್ಲ. ಎಲ್ಲ ಕಡೆ ನಿವೃತ್ತಿ ವಯಸ್ಸು 60 ಇದ್ದರೆ ಐಟಿಐನಲ್ಲಿ ಮಾತ್ರ ಅದು 58 ಇದೆ. ಇಂತಹ ನೀತಿಗಳ ವಿರುದ್ಧ ಎಲ್ಲರೂ ಕೂಡಿ ಹೋರಾಟ ನಡೆಸಲಾಗುವುದು. ○

ಚುನಾವಣಾ ಹಿನ್ನಡೆ : ಸಿಪಿಐ[ಎಂ] ಗಂಭೀರ ಸ್ವಯಂ ವಿಮರ್ಶೆ

ಡಿಸೆಂಬರ್ 20-21ರಂದು ನವದೆಹಲಿಯಲ್ಲಿ ಸಿಪಿಐಎಂ ಕೇಂದ್ರ ಸಮಿತಿ ಸಭೆ ಸೇರಿತು. ಈ ಸಭೆಯ ಬಳಿಕ ಕೇಂದ್ರ ಸಮಿತಿ ನೀಡಿದ ಹೇಳಿಕೆಯ ವಿವರ ಇಲ್ಲಿದೆ.

ಕಳೆದ ಲೋಕಸಭಾ ಚುನಾವಣೆಯ ಫಲಿತಾಂಶದ ಬಗ್ಗೆ ಕೇಂದ್ರ ಸಮಿತಿ ಸಮಗ್ರ ಪರಾಮರ್ಶೆ ನಡೆಸಿತು. ಈ ಚುನಾವಣೆಯಲ್ಲಿ ಪಕ್ಷದ ನಿರ್ವಹಣೆಯ ಬಗ್ಗೆಯೂ ಆಳವಾದ ಅಧ್ಯಯನವನ್ನೂ ನಡೆಸಲಾಯಿತು.

ಕಾಂಗ್ರೆಸ್ ನೇತೃತ್ವದ 'ಯುಪಿಎ'ಯ ಉತ್ತಮ ಪ್ರದರ್ಶನಕ್ಕೆ ಪ್ರಮುಖ ಕಾರಣಗಳೆಂದರೆ, ಕೇಂದ್ರದಲ್ಲಿ ಸುಭದ್ರವಾದ ಜಾತ್ಯತೀತ ಸರ್ಕಾರ ರಚನೆ ಆಗಬೇಕೆಂಬ ಜನರ ಭಾವನೆಯನ್ನು ಕಾಂಗ್ರೆಸ್ ಚುನಾವಣೆಯಲ್ಲಿ ಚೆನ್ನಾಗಿ ಬಳಸಿಕೊಂಡಿತು. ಇದರ ಜೊತೆಗೆ, ಬಿಜೆಪಿಯ ಕೋಮುವಾದಿ ರಾಜಕಾರಣ ಮತ್ತು ಹಿಂದುತ್ವವನ್ನು ಜನತೆ ಸಾರಾಸಗಟಾಗಿ ತಿರಸ್ಕರಿಸಿದ್ದೂ ಕಾಂಗ್ರೆಸ್‌ನ ಉತ್ತಮ ನಿರ್ವಹಣೆಗೆ ಪೂರಕವಾಯಿತು.

ನಾಲ್ಕು ವರ್ಷಗಳ ಕಾಲ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ನೀಡಿದ ಬೆಂಬಲ, ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಜನರಲ್ಲಿ ವಿಶ್ವಾಸಾರ್ಹತೆ ಮತ್ತು ಸಮ್ಮತಿಯ ಭಾವನೆ ಮೂಡಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿತು.

ಯುಪಿಎ ಸರ್ಕಾರ ನವ-ಉದಾರೀಕರಣ ನೀತಿಗಳನ್ನು ಅನುಸರಿಸಿತು. ಈ ನೀತಿಗಳು ಸಮಾಜದಲ್ಲಿ ಅಸಮತೋಲನ ಹೆಚ್ಚಿಸಿತು. ಅಲ್ಲದೆ, ಕೃಷಿ ಬಿಕ್ಕಟ್ಟು, ಬೆಲೆ ಏರಿಕೆ ಮತ್ತು ನಿರುದ್ಯೋಗ ಸಮಸ್ಯೆ ಪರಿಹರಿಸುವಲ್ಲೂ ಸರ್ಕಾರ ವಿಫಲವಾಯಿತು. ಆದರೂ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ರೈತರ ಸಾಲ ಮನ್ನಾ, ಆದಿವಾಸಿ ಹಕ್ಕುಗಳ ಕಾಯ್ದೆ ಜಾರಿ, ಆಹಾರ ಧಾನ್ಯ ಮತ್ತಿತರ ಬೆಳೆಗಳಿಗೆ ಬೆಂಬಲ ಬೆಲೆ ಘೋಷಣೆ ಮುಂತಾದ ಕ್ರಮಗಳು ಸರ್ಕಾರ ಈ ನೀತಿಗಳ ಪರಿಣಾಮವನ್ನು ಶಮನಗೊಳಿಸಲು ಸಹಾಯಕವಾದವು. ಮಾತ್ರವಲ್ಲ, ಸಕಾರಾತ್ಮಕ ಪರಿಣಾಮ ಬೀರಿದವು. ಈ ಕೆಲವು ಕಾರ್ಯಕ್ರಮಗಳು ಎಡಪಕ್ಷಗಳ ಒತ್ತಡದಿಂದಲೇ ಜಾರಿಯಾಗಿವೆ ಎಂಬುದು ಇಲ್ಲಿ ಗಮನಾರ್ಹ.

ಕಳೆದ ನವೆಂಬರ್ 2008ರ ಮುಂಬೈ ಭಯೋತ್ಪಾದಕ ದಾಳಿ, ಜನರಲ್ಲಿ ಐಕ್ಯತೆ ಬಗ್ಗೆ ಕಾಳಜಿಯನ್ನು ಮೂಡಿಸಿತು. ಇದೇ ವೇಳೆ, ಧರ್ಮದ ಆಧಾರದಲ್ಲಿ ಸಮಾಜವನ್ನು ಒಡೆಯುವ ಬಿಜೆಪಿಯ ಕೋಮುವಾದಿ ವೇದಿಕೆ ವಿರುದ್ಧ ಜನತೆ ನಿರ್ಣಾಯಕ ಮತ ಚಲಾಯಿಸಿದರು.

ಕಳೆದ ಐದು ವರ್ಷಗಳ ಯುಪಿಎ ಅಧಿಕಾರದ ಅವಧಿಯಲ್ಲಿ ಸಾಕಷ್ಟು ಲಾಭ ಮಾಡಿಕೊಂಡ ಉದ್ಯಮಿಗಳು ಮತ್ತು ಬೃಹತ್ ಕಂಪೆನಿಗಳು ನೀಡಿದ ಕ್ರೋಢೀಕೃತ ಬೆಂಬಲದ ಒಟ್ಟು ಲಾಭವನ್ನು ಕಾಂಗ್ರೆಸ್ ಪಡೆದುಕೊಂಡಿತು.

ಬಿಜೆಪಿಯ ಸೋಲು

ಈ ಬಾರಿಯ ಬಿಜೆಪಿ ಸೋಲು ಮಹತ್ವದ್ದು. ಏಕೆಂದರೆ, ಸತತ ಎರಡು ಲೋಕಸಭಾ ಚುನಾವಣೆಗಳಲ್ಲಿ ಜಯ ಗಳಿಸುವಲ್ಲಿ ಅದು ವಿಫಲವಾಯಿತು. ಜನರು ಕೋಮುವಾದಿ ಒಕ್ಕೂಟವನ್ನು ವಿರೋಧಿಸಿದ್ದೇ ಈ ಸೋಲಿಗೆ ಪ್ರಮುಖ ಕಾರಣ. ಅದರಲ್ಲೂ ವರುಣ್ ಗಾಂಧಿಯವರ ಉಗ್ರ, ದ್ವೇಷಪೂರಿತ ಭಾಷಣ ಮತ್ತು ಕೆಳಮಟ್ಟದ ನಾಯಕರು ನಡೆಸಿದ ಇಂತಹ ಭಾಷಣಗಳನ್ನು ಮತದಾರ ತಿರಸ್ಕರಿಸಿದ್ದು ಸಹ ಕಾರಣ. ನರೇಂದ್ರ ಮೋದಿ ಪಕ್ಷದ ಭವಿಷ್ಯದ ನಾಯಕ ಎಂದು ಬಿಂಬಿಸಲು ಹೊರಟಿದ್ದು ಬಿಜೆಪಿಯ ಉಗ್ರ ಹಿಂದುತ್ವವನ್ನು ಎತ್ತಿತೋರಿಸಿತು.

ಕಳೆದ ಅವಧಿಯಲ್ಲಿ ಸಂಸತ್ತಿನಲ್ಲಿ ಪ್ರಧಾನ ಪ್ರತಿಪಕ್ಷವಾಗಿದ್ದ ಬಿಜೆಪಿ ತನ್ನೆಲ್ಲ ಸಮಯವನ್ನು ಸದನದ ಕಲಾಪ ಹಾಳುಗೆಡವುದರಲ್ಲೇ ಕಳೆದದ್ದು, ಕೃಷಿ ಬಿಕ್ಕಟ್ಟು, ಬೆಲೆ ಏರಿಕೆ ಮತ್ತು ನಿರುದ್ಯೋಗದಂತಹ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳದೇ ಹೋದದ್ದು ಕೂಡ ಜನರ ವಿಶ್ವಾಸ ಕಳೆದುಕೊಳ್ಳಲು ಕಾರಣವಾಯಿತು.

ಎಡ ಪಕ್ಷಗಳನ್ನು ಒಳಗೊಂಡ ಬಿಜೆಪಿ ಮತ್ತು ಕಾಂಗ್ರೆಸ್ಸೇತರ ಮೂರನೇ ಪರ್ಯಾಯ ದೇಶದಲ್ಲಿ ಎದ್ದು ಬಂದದ್ದು ಬಿಜೆಪಿಯ ದಯನೀಯ ಸೋಲಿಗೆ ಮತ್ತೊಂದು ಕೊಡುಗೆ ನೀಡಿತು ಎಂಬುದನ್ನು ಕೇಂದ್ರ ಸಮಿತಿ ಗಮನಿಸಿತು. ಮೂರನೇ ಪರ್ಯಾಯದ ಕಾರಣದಿಂದಾಗಿಯೇ ಬಿಜೆಪಿಗೆ ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಒರಿಸ್ಸಾ ಮುಂತಾದ ರಾಜ್ಯಗಳಲ್ಲಿ ಹೇಳಿಕೊಳ್ಳುವಂತಹ ಮಿತ್ರ ಪಕ್ಷಗಳು ಸಿಗಲಿಲ್ಲ.

ಯುಪಿಎಗೆ ಬೆಂಬಲ ವಾಪಸ್

ಅಣು ಒಪ್ಪಂದದ ಕಾರಣಕ್ಕಾಗಿ 2008ರ ಜುಲೈನಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಿದ ಬೆಂಬಲ ವಾಪಸ್ ಪಡೆದ ಪಕ್ಷದ ನಿರ್ಧಾರ ಸರಿಯಾದದ್ದು ಎಂಬ ದೃಢ ಅಭಿಪ್ರಾಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿತು. ಅಮೆರಿಕ ಜೊತೆ ವ್ಯೂಹಾತ್ಮಕ ಮೈತ್ರಿ ಸಾಧಿಸುವ ಸರ್ಕಾರದ ನಿರ್ಧಾರದ ವಿರುದ್ಧದ ಎಡ ಪಕ್ಷಗಳ ಸ್ಥಿರ ಹಾಗೂ ದೃಢ ನಿಲುವು ಇದಾಗಿತ್ತು.

ಕಾಂಗ್ರೆಸ್ಸೇತರ-ಬಿಜೆಪಿಯೇತರ ಪರ್ಯಾಯ

ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎಗೆ ಪರ್ಯಾಯವಾಗಿ ಕಾಂಗ್ರೆಸ್ಸೇತರ -ಬಿಜೆಪಿಯೇತರ ಪರ್ಯಾಯವನ್ನು ರಚಿಸಲು ಸಿಪಿಐಎಂನ ಕೇಂದ್ರ ಸಮಿತಿ ಕರೆ ನೀಡಿತ್ತು. ಇದು ಸರಿಯಾದ ಚುನಾವಣಾ ತಂತ್ರವಾಗಿತ್ತು. ಇದರ ಫಲವಾಗಿ ಆಂಧ್ರ ಪ್ರದೇಶ, ತಮಿಳುನಾಡು, ಒರಿಸ್ಸಾ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಎಡಪಕ್ಷಗಳ ನಡುವೆ ಚುನಾವಣಾ ಹೊಂದಾಣಿಕೆ ಏರ್ಪಟ್ಟಿತು. ಆದರೆ, ಚುನಾವಣಾ ಹೊಂದಾಣಿಕೆಯನ್ನು ಎಡ ನೇತೃತ್ವದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಮತ್ತು ಈ ನಾಲ್ಕು ರಾಜ್ಯಗಳ ಹೊರಗೆ ವಿಸ್ತರಿಸುವುದು ಸಾಧ್ಯವಾಗಲಿಲ್ಲ. ಹಾಗಾಗಿ ರಾಷ್ಟ್ರೀಯ ಮಟ್ಟದಲ್ಲಿ ಇದೊಂದು ಬಲಿಷ್ಠ ಹಾಗೂ ವಿಶ್ವಾಸಾರ್ಹ ಪರ್ಯಾಯ ಎನಿಸಿಕೊಳ್ಳುವಲ್ಲಿ ಯಶಸ್ವಿಯಾಗಲಿಲ್ಲ.

ಈ ಪ್ರಯತ್ನಗಳನ್ನು ಕೇಂದ್ರ ಸಮಿತಿ ಕಟು ವಿಮರ್ಶೆಗೆ ಒಳಪಡಿಸಿತು. ಚುನಾವಣಾ ಹೊಂದಾಣಿಕೆಗೆ ಸೀಮಿತವಾಗಿದ್ದ ಕಾಂಗ್ರೆಸ್ಸೇತರ-ಬಿಜೆಪಿಯೇತರ ಪರ್ಯಾಯದ ಮೂಲಕ ಕೇಂದ್ರದಲ್ಲಿ ಪರ್ಯಾಯ ಸರ್ಕಾರ ರಚನೆ ಮಾಡುವ ಕರೆ ನೀಡಬಾರದಿತ್ತು. ರಾಷ್ಟ್ರವ್ಯಾಪಿ ಮೈತ್ರಿಯ ಅಸ್ತಿತ್ವ ಇಲ್ಲದೆ, ಯಾವುದೇ ನೀತಿ ಆದಾರಿತ ಸಾಮಾನ್ಯ ವೇದಿಕೆ ಇಲ್ಲದೆ ಪರ್ಯಾಯ ಸರ್ಕಾರಕ್ಕೆ ಕರೆ ನೀಡಿರುವುದು ಅವಾಸ್ತವಿಕ ಎಂಬ ಅಭಿಪ್ರಾಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿತು.

ಇದೇ ವೇಳೆ, ಮೂರನೇ ಪರ್ಯಾಯವನ್ನು ಕಟ್ಟುವತ್ತ ದೃಢ ಹೆಜ್ಜೆಗಳನ್ನು ಮುಂದುವರಿಸುವುದಾಗಿ ಕೇಂದ್ರ ಸಮಿತಿ ಪುನರುಚ್ಚರಿಸಿತು. ಅಲ್ಲಿವರೆಗೆ ಕಾಂಗ್ರೆಸ್ಸೇತರ ಸಮಾನ ಮನಸ್ಕ ಪಕ್ಷಗಳೊಂದಿಗೆ ಅಗತ್ಯವಿರುವ ಕಡೆಗಳಲ್ಲಿ ಚುನಾವಣಾ ಹೊಂದಾಣಿಕೆ ಮತ್ತು ಮೈತ್ರಿ ಮಾಡಿಕೊಳ್ಳಲು ನಿರ್ಧರಿಸಲಾಯಿತು.

ಸಿಪಿಐ(ಎಂ) ನಿರ್ವಹಣೆ

ಲೋಕಸಭಾ ಚುನಾವಣೆಗಳಲ್ಲಿ ಪಕ್ಷ ಗಂಭೀರ ಹಿನ್ನಡೆ ಅನುಭವಿಸಿದೆ. ಪಕ್ಷ ಕೇವಲ 16 ಸ್ಥಾನಗಳಲ್ಲಿ ಮಾತ್ರ ಜಯ ಗಳಿಸಿದೆ. ಪಶ್ಚಿಮ ಬಂಗಾಳದಲ್ಲಿ 9, ಕೇರಳದಲ್ಲಿ ನಾಲ್ಕು, ತ್ರಿಪುರದಲ್ಲಿ ಎರಡು ಮತ್ತು ತಮಿಳುನಾಡಿನಲ್ಲಿ ಒಂದು ಸ್ಥಾನ ಗಳಿಸಿದೆ. ಪಕ್ಷದ ಒಟ್ಟಾರೆ ಮತಗಳಿಕೆ ಶೇ. 5.33. 2004ರ ಮತಗಳಿಕೆ ಶೇ. 5.66ಕ್ಕೆ ಹೋಲಿಸಿದರೆ ಅತ್ಯಲ್ಪ ಹಿನ್ನಡೆ ಕಂಡಿದೆ. ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಪಕ್ಷದ ಜನಬೆಂಬಲ ಕಡಿಮೆಯಾಗಿರುವ ಬಗ್ಗೆ ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ. ಇದೇ ವೇಳೆ, ಪಶ್ಚಿಮ ಬಂಗಾಳದಲ್ಲಿ ಎಡರಂಗ 1.85 ಕೋಟಿ ಮತ ಗಳಿಸಿದೆ ಮತ್ತು ಕೇರಳದಲ್ಲಿ ಎಲ್‌ಡಿಎಫ್ 67.17 ಲಕ್ಷ ಮತ ಪಡೆದಿದೆ ಎಂಬುದನ್ನೂ ಕೇಂದ್ರ ಸಮಿತಿ ಗಮನಿಸಿದೆ. ಪಕ್ಷದ ಜನಬೆಂಬಲದಲ್ಲಿ ಅಲ್ಪ ಸವೆತ ಉಂಟಾಗಿದ್ದರೂ, ಪಕ್ಷದ ಪ್ರಮುಖ ಜನಬೆಂಬಲ ಈ ಎರಡೂ ರಾಜ್ಯಗಳಲ್ಲಿ ಬಹುತೇಕ ಅಬಾಧಿತವಾಗಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಕೇಂದ್ರ ಸಮಿತಿಯು ರಾಜ್ಯಗಳಿಂದ ಸ್ವೀಕರಿಸಲಾದ ವರದಿಗಳ ಆಧಾರದ ಮೇಲೆ ಪಕ್ಷದ ನಿರ್ವಹಣೆಯ ಕುರಿತು ಆಳವಾದ ವಿಮರ್ಶೆಯನ್ನು ನಡೆಸಿತು.

ಪಕ್ಷವು ಅಖಿಲ ಭಾರತ ಮಟ್ಟದ ಅಂಶಗಳಲ್ಲದೇ ಪಕ್ಷವು ಗಂಭೀರ ನಷ್ಟವನ್ನು ಅನುಭವಿಸಿರುವ ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿನ ನಿರ್ದಿಷ್ಟ ಪರಿಸ್ಥಿತಿಯ ಬಗೆಗೆ ಕೂಡ ಕೇಂದ್ರ ಸಮಿತಿಯು ವಿಮರ್ಶೆ ನಡೆಸಿತು.

ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ) ಮತ್ತು ಎಡರಂಗವು ಅನುಭವಿಸಿರುವ ಹಿನ್ನಡೆಗೆ ಕಾರಣವಾದ ರಾಜಕೀಯ; ಆಡಳಿತಾತ್ಮಕ ಮತ್ತು ಸಂಘಟನಾತ್ಮಕ ಅಂಶಗಳ ಕುರಿತು ವಿಮರ್ಶೆಯಲ್ಲಿ ಗುರುತಿಸಲಾಯಿತು. ಗ್ರಾಮೀಣ ಮತ್ತು ನಗರಗಳ ಬಡವರು ಮತ್ತು ಮಧ್ಯಮವರ್ಗದ ವಿಭಾಗಗಳಲ್ಲಿರುವ ಬೆಂಬಲದಲ್ಲಿ ಒಂದಷ್ಟು ಸವೆತ ಉಂಟಾಗಿದೆ ಎಂಬುದನ್ನು ವಿಮರ್ಶೆ ಗುರುತಿಸಿದೆ.

ಸರ್ಕಾರ, ಪಂಚಾಯತ್‌ಗಳು ಮತ್ತು ನಗರಸಭೆಗಳು ಸರಿಯಾದ ವರ್ಗ ದೃಷ್ಟಿಕೋನದಿಂದ ಕೆಲಸ ಮಾಡುವಲ್ಲಿ ಕೊರತೆಗಳಿವೆ. ಇದು ಜನರ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಹಲವು ಕ್ರಮಗಳನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿನ ಸರ್ಕಾರದ ವೈಫಲ್ಯದಿಂದಾಗಿ ಆಗಿದೆ. ಭೂಮಿ ಭೂಸ್ವಾಧೀನ ಕುರಿತ ಆತಂಕವು ರೈತ ಸಮುದಾಯದ ಕೆಲವು ವಿಭಾಗಗಳು ದೂರವಾಗಲು ಕಾರಣವಾಗಿದೆ.

ಸಂಘಟನೆಯ ಹಂತದಲ್ಲಿ ಕೆಲವು ತಪ್ಪು ಪ್ರವೃತ್ತಿಗಳು ಮತ್ತು ತಪ್ಪು ನಡವಳಿಕೆಗಳು ಜನ ಸಮೂಹಗಳೊಂದಿಗಿನ ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರಿವೆ.

ಸರ್ಕಾರದ ಮಟ್ಟದಲ್ಲಿ, ಸಂಘಟನೆಯ ಮ[illegible] ಈ ದೋಷವನ್ನು ಸರಿಪಡಿಸಲು ಪಕ್ಷದ ರಾಜ್ಯ ಸಮಿತಿಯು ಸೂಚಿಸಿರುವ ಕ್ರಮಗಳನ್ನು ಪಕ್ಷದ ಕೇಂದ್ರ ಸಮಿತಿಯು ಅಂಗೀಕರಿಸಿದೆ.

ಕೇರಳದಲ್ಲಿನ ಕಳಪೆ ನಿರ್ವಹಣೆಗೆ ಕಾರಣವಾದ ಅಂಶಗಳನ್ನು ಸಹ ವಿಮರ್ಶೆಗೆ ಗುರಿಪಡಿಸಲಾಯಿತು. ಎಡಪ್ರಜಾಸತ್ತಾತ್ಮಕ ರಂಗದೊಳಗಿನ ಅನೈಕ್ಯತೆ ಮತ್ತು ಪಕ್ಷದ ನಾಯಕತ್ವದಲ್ಲಿನ ಅನೈಕ್ಯತೆಯು ಜನಗಳ ಮೇಲೆ ಪರಿಣಾಮ ಬೀರಿದೆ. ಕ್ರಿಶ್ಚಿಯನ್ನರ ಮತಗಳು ಎಡರಂಗದ ವಿರುದ್ಧ ಬೀಳುವಂತೆ ಮಾಡಲು ಚರ್ಚುಗಳು ಸಕ್ರಿಯ ಪಾತ್ರ ವಹಿಸಿವೆ. ಪಿಡಿಪಿಯೊಂದಿಗೆ ಸಹಯೋಗ ಜನಗಳ ನಡುವೆ ಗೊಂದಲ ಉಂಟು ಮಾಡಿದೆ. ಎಸ್‌ಎನ್‌ಸಿ ಲವ್ಲೀನ್ ಪ್ರಕರಣ ಕುರಿತಂತೆ ಯುಡಿಎಫ್‌ನ ಮಾಧ್ಯಮ ಪ್ರಚಾರ ಕೂಡಾ ಪರಿಣಾಮ ಬೀರಿದೆ.

ಪಿನರಾಯ್ ವಿಜಯನ್ ಮೇಲೆ ಸಿಬಿಐ ಮೊಕದ್ದಮೆ: ರಾಜಕೀಯ ಪ್ರೇರಿತ ಕ್ರಮ

ಕೇರಳ ರಾಜ್ಯದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ, ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಸದಸ್ಯರೂ ಆದ ಪಿಣರಾಯಿ ವಿಜಯನ್‌ರವರ ಮೇಲೆ ಭ್ರಷ್ಟಾಚಾರದ ಆರೋಪದ ಹೊರಿಸಿ ಮೊಕದ್ದಮೆ ಹೂಡಿ ವಿಚಾರಣೆ ನಡೆಸಲು ಸಿಬಿಐಗೆ ಕೇರಳದ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಇದೊಂದು ರಾಜಕೀಯ ಪ್ರೇರಿತ ಕ್ರಮವಾಗಿದ್ದು, ರಾಜ್ಯಪಾಲರು ಸಿಬಿಐ ವಿಚಾರಣೆಗೆ ಅನುಮತಿ ನೀಡಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ವಿಷಾದಿಸಿದೆ. ಹಾಗೂ ಸಿಪಿಐ(ಎಂ) ಪಕ್ಷವು ಈ ಮೊಕದ್ದಮೆಯನ್ನು ಕಾನೂನು ಪ್ರಕಾರವಾಗಿ ಮತ್ತು ರಾಜಕೀಯವಾಗಿ ಎರಡೂ ರೀತಿಯಿಂದಲೂ ಎದುರಿಸಲಿದೆ ಎಂದು ಸ್ಪಷ್ಟಪಡಿಸಿದೆ.

ಪಕ್ಷದೊಳಗಿನ ಕೆಲವು ತಪ್ಪು ಪ್ರವೃತ್ತಿಗಳು ಕೂಡಾ ನಕಾರಾತ್ಮಕ ಪರಿಣಾಮ ಬೀರಿವೆ.

ಪೊಲಿಟ್‌ಬ್ಯೂರೋ ಕೇರಳದಲ್ಲಿನ ಸಂಘಟನಾತ್ಮಕ ವಿಷಯಗಳನ್ನು ನಿರ್ದಿಷ್ಟವಾಗಿ ಚರ್ಚಿಸಲು ಜುಲೈ 4 ಮತ್ತು 5, 2009ರಂದು ಪೊಲಿಟ್ ಬ್ಯೂರೋ ಸಭೆಯನ್ನು ನಡೆಸಲು ನಿರ್ಧರಿಸಿದೆ.

ಕೇಂದ್ರ ಸಮಿತಿ ದೇಶದ ಉಳಿದೆಡೆಗಳಲ್ಲಿ ಪಕ್ಷದ ಒಟ್ಟಾರೆ ನಿರ್ವಹಣೆಯ ಪರಾಮರ್ಶೆ ನಡೆಸಿತು. ಅದು ಪಕ್ಷದ ಸ್ವತಂತ್ರ ಕೆಲಸವನ್ನು ವಿಸ್ತರಿಸುವಲ್ಲಿ, ಸ್ಥಳೀಯ ಪ್ರಶ್ನೆಗಳ ಮೇಲೆ ಸತತ ಹೋರಾಟಗಳನ್ನು ನಡೆಸುವಲ್ಲಿ ಮತ್ತು ಸಾಮೂಹಿಕ ಸಂಘಟನೆಗಳನ್ನು ಕಟ್ಟುವಲ್ಲಿ ಇರುವ ಸಂಘಟನಾ ದೌರ್ಬಲ್ಯಗಳನ್ನು ಗಮನಿಸಿತು. ಈ ವಿಷಯಗಳ ಬಗ್ಗೆ ರಾಜ್ಯಗಳಲ್ಲಿ ನಡೆಸಿದ ಪರಾಮರ್ಶೆಗಳಲ್ಲಿ ಮೂಡಿ ಬಂದ ಕಾರ್ಯಭಾರಗಳನ್ನು ಜಾರಿಗೆ ತರಬೇಕು ಎಂದು ರಾಜ್ಯ ಘಟಕಗಳಿಗೆ ಅದು ನಿರ್ದೇಶನ ನೀಡಿದೆ.

ಕೇಂದ್ರ ಸಮಿತಿ ಈ ಚುನಾವಣಾ ಹಿನ್ನಡೆಯಿಂದ ಇಡೀ ಪಕ್ಷ ಪಾಠಗಳನ್ನು ಕಲಿಯುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿತು. ಪಕ್ಷದ ರಾಜಕೀಯ ನಿಲುವನ್ನು ಜಾರಿಗೆ ತರುವಲ್ಲಿ ನ್ಯೂನ್ಯತೆಗಳನ್ನು ಗುರುತಿಸಿ ಸಂಘಟನೆಯಲ್ಲಿನ ದೌರ್ಬಲ್ಯಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು. ಪಶ್ಚಿಮ ಬಂಗಾಳ ಮತ್ತು ಕೇರಳದಂತಹ ರಾಜ್ಯಗಳಲ್ಲಿ ವಿವಿಧ ಕಾರಣಗಳಿಂದಾಗಿ ಪಕ್ಷದಿಂದ ದೂರಸರಿದಿರುವ ಜನವಿಭಾಗಗಳೊಂದಿಗೆ ಮತ್ತೆ ಸಂಪರ್ಕಗಳನ್ನು ಬೆಸೆಯಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಲ್ಲಿ ರಾಜ್ಯ ಸರ್ಕಾರಗಳಿಂದ ಜನಗಳು ನಿರೀಕ್ಷಿಸುವ ಕ್ರಮಗಳನ್ನು ಜಾರಿಗೊಳಿಸಲು ತಕ್ಷಣ ಅಗತ್ಯ ಕ್ರಮಗಳನ್ನು ಆ ರಾಜ್ಯ ಸರ್ಕಾರಗಳು ಕೈಗೊಳ್ಳುತ್ತವೆ.

...ಗಳೊಡನೆ ಸಂಬಂಧಗಳು:

ಪಕ್ಷವು ಎಡ ಐಕ್ಯತೆಯನ್ನು ಬಲಗೊಳಿಸಲು ಮತ್ತು ಜನಗಳ ಪ್ರಶ್ನೆಗಳ ಮೇಲೆ, ಜನಪರ ಆರ್ಥಿಕ ನೀತಿಗಳಿಗಾಗಿ ಹಾಗೂ ಜಾತ್ಯಾತೀತತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಯ ರಕ್ಷಣೆಗಾಗಿ ಜಾತ್ಯಾತೀತ ಪ್ರತಿಪಕ್ಷಗಳೊಂದಿಗೆ ಸಹಕರಿಸಲು ಶ್ರಮಿಸುತ್ತದೆ.

ಯುಪಿಎ ಸರ್ಕಾರದ ಕುರಿತು :

ಎಡಪಕ್ಷಗಳು ತಾವು ಸಂಸತ್ತಿನಲ್ಲಿ ಎಡ ವಿರೋಧ ಪಕ್ಷದ ಪಾತ್ರವನ್ನು ವಹಿಸುತ್ತೇವೆ ಎಂದು ಈಗಾಗಲೇ ತಳೆದಿರುವ ನಿಲುವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿತು. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪ್ರತಿಕೂಲ ಪರಿಣಾಮದಿಂದಾಗಿ ಕೆಲಸ ಕಳೆದುಕೊಂಡ ಲಕ್ಷಾಂತರ ಜನಗಳಿಗೆ ಪರಿಹಾರ ಒದಗಿಸಲು ಕೇಂದ್ರ ಸರ್ಕಾರ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಿಕ್ಕಟ್ಟಿನಿಂದಾಗಿ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆಗಳು ಬೀಳದಂತೆ ಕ್ರಮಗಳನ್ನು ವಹಿಸಬೇಕು. ಹಣದುಬ್ಬರ ದರ ಋಣಾತ್ಮಕವಾಗಿದ್ದರೂ, ಜೀವನಾವಶ್ಯಕ ಸಾಮಗ್ರಿಗಳ ಏರು ಬೆಲೆಗಳು ಹಾಗೆಯೇ ಮುಂದುವರೆಯುತ್ತಿವೆ. ಸರ್ಕಾರ ಬೆಲೆಯೇರಿಕೆಯನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕು. ಆರ್ಥಿಕ ನಿಧಾನಗತಿಯ ಪರಿಣಾಮಗಳನ್ನು ಎದುರಿಸುವ ಹಾಗೂ ಅಭಿವೃದ್ಧಿ ಮತ್ತು ಕಲ್ಯಾಣ ಕ್ರಮಗಳನ್ನು ಅನುಸರಿಸುವ

ಪುಟ 12ಕ್ಕೆ

ಪಶ್ಚಿಮ ಬಂಗಾಳ : ಚುನಾವಣಾ ಫಲಿತಾಂಶ

ಆಳುವ ವರ್ಗದ ಕುತಂತ್ರದ ದಾಳಿಯ ಫಲ ಆಂತರಿಕ ಕೊರತೆ ನೀಗಬೇಕಾದದ್ದು ಅಗತ್ಯ

ಜೂನ್ 11 ಮತ್ತು 12 ರಂದು ಕೋಲ್ಕೊತ್ತಾ ನಗರದಲ್ಲಿ ಸಭೆ ಸೇರಿದ್ದ ಸಿಪಿಐ(ಎಂ)ನ ಪಶ್ಚಿಮ ಬಂಗಾಳದ ರಾಜ್ಯ ಸಮಿತಿಯ ಪ್ರಮುಖ ಅಜೆಂಡಾ 15ನೇ ಲೋಕಸಭಾ ಚುನಾವಣೆಯ ಫಲಿತಾಂಶದ ಬಗ್ಗೆ ಚರ್ಚೆ ನಡೆಸುವುದಾಗಿತ್ತು. ಅಲ್ಲದೆ ಚುನಾವಣೋತ್ತರ ಅವಧಿಯಲ್ಲಿ ಕೈಗೊಳ್ಳಬೇಕಾದ ಭವಿಷ್ಯದ ಜವಾಬ್ದಾರಿಗಳನ್ನು ಸಹ ಗುರುತಿಸುವುದು ಮತ್ತೊಂದು ಅಂಶವಾಗಿತ್ತು. ಈ ಮಹತ್ವದ ಸಭೆಗೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ:ಪ್ರಕಾಶ್‌ಕಾರಟ್, ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ: ಎಸ್.ರಾಮಚಂದ್ರಪಿಳ್ಳೈ, ಕಾಂ: ಸೀತಾರಾಂ ಯೆಚೂರಿ, ಹಾಜರಿದ್ದರು. ಕಾಂ: ಬಿನೋಯ್ ಕೋನಾರ್ ಅಧ್ಯಕ್ಷತೆ ವಹಿಸಿದ್ದರು.

ಚುನಾವಣೆಯಲ್ಲಿ ಜನತೆ ನೀಡಿದ ತೀರ್ಪನ್ನು ಗೌರವಿಸಿದ್ದ ರಾಜ್ಯ ಸಮಿತಿಯು ರಾಜಕೀಯ, ಸಂಘಟನಾತ್ಮಕ ಅಲ್ಲದೇ ಆಡಳಿತಾತ್ಮಕ ಕಾರಣಗಳನ್ನು ಆಳವಾಗಿ ವಿಶ್ಲೇಷಿಸಿತು. ಚುನಾವಣಾ ಫಲಿತಾಂಶದಿಂದ ಕಲಿಯಬೇಕಾದ ಪಾಠಗಳನ್ನು ಗುರುತಿಸಿ ಸ್ವೀಕರಿಸಿತು. ಎಲ್ಲಾ ರಂಗಗಳಲ್ಲಿಯೂ ವ್ಯಾಪಕ/ಸಮಗ್ರವಾದ ತಿದ್ದುಪಡಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಜ್ಯಸಮಿತಿಯು ನಿರ್ಧರಿಸಿದೆ.

ಬಿಜೆಪಿಯೇತರ, ಕಾಂಗ್ರೆಸ್ಸೇತರ ಪಕ್ಷಗಳನ್ನು ಹೊರತುಪಡಿಸಿದ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆ ರೂಪಿಸಲು ಎಡಪಕ್ಷಗಳು ಈ ಚುನಾವಣೆಯಲ್ಲಿ ಮುತುವರ್ಜಿ ಕ್ರಮಗಳನ್ನು ಕೈಗೊಂಡವು. ಆದರೆ ಮೂರನೇ ರಂಗವು ಜನರ ವಿಶ್ವಾಸವನ್ನು ಗಳಿಸಲಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ಸೈದ್ಧಾಂತಿಕ ರಾಜಕೀಯ ನಿಲುವುಗಳ ಆಧಾರದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ದೇಶ ಪ್ರೇಮಿ ಶಕ್ತಿಗಳನ್ನು ಅಣಿನೆರೆಸಿ ಚುನಾವಣಾ ಸವಾಲುಗಳನ್ನು ಎದುರಿಸಲು ಅಷ್ಟು ಯಶಸ್ವಿಯಾಗಲಿಲ್ಲ. ಕೋಮುವಾದ ಮತ್ತು ಭಯೋತ್ಪಾದನೆಯ ಸವಾಲುಗಳನ್ನು ಎದುರಿಸುವ ವಿಶ್ವಾಸಾರ್ಹ ಪರ್ಯಾಯ ಶಕ್ತಿಗಳಿಲ್ಲದಿರುವುದರಿಂದಾಗಿ ಸ್ಥಿರ ಸರ್ಕಾರಕ್ಕಾಗಿ ಜನತೆಯು ಕಾಂಗ್ರೆಸ್‌ಗೆ ಮತ ನೀಡಿದ್ದಾರೆ. ಎಡಪಕ್ಷಗಳು ಯುಪಿಎ ಸರ್ಕಾರದ ಮೇಲೆ ಹಾಕಿದ ಒತ್ತಡ ಹಾಗೂ ಮುತುವರ್ಜಿಯಿಂದಾಗಿ ಕೈಗೊಂಡ ಕೆಲವು ಕ್ರಮಗಳೂ ಸಹ ಕಾಂಗ್ರೆಸ್‌ಗೆ ಸಹಾಯಕವಾದವು. ಈ ಎಲ್ಲಾ ಅಂಶಗಳೂ ಬೇರೆ ರಾಜ್ಯಗಳಲ್ಲೂ, ಪಶ್ಚಿಮಬಂಗಾಳ ದಲ್ಲಿಯೂ ಪರಿಣಾಮ ಬೀರಿದವು.

ಪಶ್ಚಿಮ ಬಂಗಾಳ ರಾಜ್ಯದಲ್ಲಿ, ಸಿಂಗೂರ್ ಮತ್ತು ನಂದಿಗ್ರಾಮದ ವಿಷಯದ ಸುತ್ತ ತೃಣಮೂಲ ಕಾಂಗ್ರೆಸ್ ನೇತೃತ್ವದಲ್ಲಿ ಎಲ್ಲಾ ವಿಧದ ವಿಭಜಕಕಾರಿ, ಅರಾಜಕತಾವಾದಿ ಶಕ್ತಿಗಳು, ಉಗ್ರ ಎಡ ಮತ್ತು ಉಗ್ರ, ಬಲ ಪ್ರತಿಗಾಮಿ ಶಕ್ತಿಗಳೊಂದಿಗೆ ಮೈತ್ರಿ ಏರ್ಪಟ್ಟಿತ್ತು. ಇದಕ್ಕೆ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಚುನಾವಣಾ ಹೊಂದಾಣಿಕೆಯು ಇನ್ನಷ್ಟು ಇಂಬು ನೀಡಿತು.

ಸಂಘಟನಾ ದೌರ್ಬಲ್ಯಗಳು

ಪಕ್ಷದ ಸಂಘಟನಾ ದೌರ್ಬಲ್ಯಗಳು ಚುನಾವಣಾ ಫಲಿತಾಂಶಗಳ ಮೇಲೆ ಪರಿಣಾಮ ಬೀರಿದ್ದಾವೆಂದು ಸಿಪಿಐ(ಎಂ) ರಾಜ್ಯ ಸಮಿತಿಯು ಅಭಿಪ್ರಾಯಪಟ್ಟಿದೆ. ಜನತೆಯ ನಡುವೆ ಪಕ್ಷದ ಬೆಂಬಲವು ಸವಕಲಾಗಲು ತತ್ವಹೀನ ನಡವಳಿಕೆಗಳು. ನಿರಂತರತೆ ಕಾಯ್ದುಕೊಂಡುಂತಹ ಜನ ಚಳುವಳಿಗಳನ್ನು ಕಟ್ಟುವಲ್ಲಿನ ದೌರ್ಬಲ್ಯ ಮತ್ತು ಜನ ಸಮೂಹಗಳೊಂದಿನ ಸಂಬಂಧದ ಕೊರತೆ, ಇವೆಲ್ಲವೂ ಅವುಗಳದ್ದೇ ಒಂದು ಪಾತ್ರ ವಹಿಸಿದವು. ಪಕ್ಷದ ಬಗೆಗಿನ ಗೌರವ, ಪ್ರಭಾವವನ್ನು ಇವು ಹಾಳುಗೆಡಹಿದವು. ಈ ತಪ್ಪು ಪ್ರವೃತ್ತಿಗಳನ್ನು ತಿದ್ದುಕೊಳ್ಳಲು ಅತ್ಯಂತ ಗಂಭೀರವಾದ ಮುತುವರ್ಜಿ ಕ್ರಮ ವಹಿಸಲು ರಾಜ್ಯ ಸಮಿತಿಯು ಕರೆ ನೀಡಿದೆ. ಪಕ್ಷದ ಮೇಲೆ ನಡೆದ ಭಾರೀ ಆಕ್ರಮಣಗಳ ಹೊರತಾಗಿಯೂ ಸಿಪಿಐ(ಎಂ) ರಾಜ್ಯದಲ್ಲಿ 1 ಕೋಟಿ 85 ಲಕ್ಷ ಜನತೆಯ ಬೆಂಬಲ ಕಾಯ್ದುಕೊಳ್ಳುವಲ್ಲಿ ಯಶಸ್ಸು ಪಡೆದಿದೆ. ಚುನಾವಣೆಗಳು ಘೋಷಿತಗೊಂಡ ನಂತರದ ಪ್ರಕ್ರಿಯೆಯ ಅವಧಿಯಲ್ಲಿ 42 ಸಂಗಾತಿಗಳು ಪ್ರಾಣಾರ್ಪಣೆ ಗೈದು ಹುತಾತ್ಮರಾಗಿದ್ದಾರೆ. ಈ ದಾಳಿಗಳು ಫಲಿತಾಂಶ ಪ್ರಕಟಗೊಂಡ ನಂತರವಂತೂ ಹಲವು ಪಟ್ಟು ಹೆಚ್ಚಿವೆ. ಸ್ವಯಂ ಅಂತರ್ ಅವಲೋಕನ ಪ್ರಕ್ರಿಯೆಯಲ್ಲಿ ಇರುವಾಗಲೇ ಪಕ್ಷವನ್ನು ಬಲವರ್ಧನೆಗೊಳಿಸುವುದು ಮತ್ತು ಆಕ್ರಮಣಗಳಿಗೆ ಪ್ರತ್ಯುತ್ತರ ನೀಡಬೇಕಿದೆ.

ಜನತೆಗೆ ನೇರವಾಗಿ ಸಂಬಂಧಿಸಿದ ಕೆಲಸಗಳನ್ನು ಮಾಡುವಲ್ಲಿ ಒಂದಿಷ್ಟು ನಿರ್ಲಕ್ಷ ಮತ್ತು ಜಡತ್ವ - ಸೋಮಾರಿತನಗಳು ನುಸುಳಿರುವುದು ಸಹ ಪಕ್ಷವನ್ನು ಬಾಧಿಸುತ್ತಿವೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ಅಭಿಪ್ರಾಯಪಟ್ಟಿದೆ. ನಿರ್ದಿಷ್ಟವಾಗಿ ಬಡ ಹಾಗೂ ದುಡಿವ ಜನಸಮುದಾಯಗಳ ಹಿತಾಸಕ್ತಿಗಳ ವಿಷಯದಲ್ಲಿ ಸರಿಯಾದ ವರ್ಗ ದೃಷ್ಟಿಕೋನವನ್ನು ಇರಿಸಿಕೊಂಡು ಸರ್ಕಾರ, ಪಂಚಾಯತ್‌ಗಳು ಮತ್ತು ಮುನ್ಸಿಪಾಲಿಟಿಗಳ ಕಾರ್ಯನಿರ್ವಹಿಸುವಲ್ಲಿ ಹಲವು ತಪ್ಪುಗಳು ಇವೆ. ಕಳೆದೆರಡು ವರ್ಷಗಳಲ್ಲಿ ಸರ್ಕಾರದ ಪ್ರತಿಯೊಂದು ಕಾರ್ಯಕ್ರಮಗಳ ಜಾರಿಗೆ ಅಡ್ಡಿಯುಂಟು ಮಾಡುತ್ತಿರುವುದು ಸಹ ಕಂಡಿದೆ. ಇದರ ಪರಿಣಾಮವಾಗಿ ಜನಪರವಾದ ಕಾರ್ಯಕ್ರಮಗಳ ಜಾರಿಯಲ್ಲಿ ಅಡ್ಡ ಪರಿಣಾಮಗಳುಂಟಾಗಿವೆ.

ವಿಛಿದ್ರಕಾರಿ ಶಕ್ತಿಗಳಿಗೆ ಒಳಗಿನ - ಹೊರಗಿನ ಬೆಂಬಲ

ವಿಛಿದ್ರಕಾರಿ ಶಕ್ತಿಗಳು ದೇಶದೊಳಗಿನ ಮತ್ತು ಹೊರಗಿನ ಪ್ರತಿಗಾಮಿಗಳಿಂದ ಬೆಂಬಲ ಪಡೆಯುತ್ತಿವೆ ಎಂದು ರಾಜ್ಯ ಸಮಿತಿಯು ಹೇಳಿದೆ. ವಿಭಜನಕಾರಿ ಪ್ರಶ್ನೆಗಳನ್ನೆತ್ತಿ ಬಡ ಜನರ ನಡುವೆ ವಿಭಜನೆ ತರುವ ಪ್ರಯತ್ನಗಳು ನಡೆದಿವೆ. ಒಂದು ಸರಿಯಾದ ವರ್ಗ ದೃಷ್ಟಿಕೋನದಿಂದ ಈ ವಿಭಜಕ ಕಾರ್ಯಸೂಚಿಯನ್ನು ಪ್ರತಿರೋಧಿಸಬೇಕಿದೆ.

ಚುನಾವಣಾ ನಂತರದ ಪರಿಸ್ಥಿತಿಗೆ ಸಂಬಂಧಿಸಿದಂತೆ ತುರ್ತು ಕರ್ತವ್ಯಗಳಿವೆ. ಪಕ್ಷದ ಮೇಲೆ ದೊಡ್ಡ ಪ್ರಮಾಣದಲ್ಲಿ ದಾಳಿಗಳನ್ನು ನಡೆಸಲು ಪ್ರಯತ್ನಗಳು ನಡೆದಿವೆ ಎಂದು ರಾಜ್ಯ ಸಮಿತಿಯು ಹೇಳಿದೆ. ಎಡರಂಗ ಸರ್ಕಾರ ಮತ್ತು ಜನತೆಯ ವಿರುದ್ಧ ಅರಾಜಕತೆ ಹಾಗೂ ಭಯದ ವಾತಾವರಣ ಹುಟ್ಟು ಹಾಕಲು ರಾಜ್ಯದಲ್ಲಿ ಯತ್ನಿಸಲಾಗುತ್ತಿದೆ. ರಾಜಕೀಯ ಹಾಗೆಯೇ ಸಂಘಟನಾತ್ಮಕವಾದ ಪ್ರಬಲ ಐಕ್ಯತೆಯಿಂದ ಈ ಅಕ್ರಮಗಳನ್ನು ಪಕ್ಷವು ಪ್ರತಿರೋಧಿಸಬೇಕು.

ದುಡಿಯುವ ವರ್ಗದ ವಿಭಜನೆಯ ಯತ್ನ

ಪ್ರಜಾಸತ್ತಾತ್ಮಕ ಮತ್ತು ದುಡಿಯುವ ಜನರ ನಡುವೆಯೇ ವಿಜಭನೆ ಸೃಷ್ಟಿಸುವುದು ವಿರೋಧಿಗಳ ಗುರಿಯಾಗಿದೆ. ಜನತೆಯು ನಿಜವಾದ ಸ್ನೇಹಿತನಾಗಿರುವ ಪಕ್ಷವು ಅವರನ್ನು ತಲುಪಬೇಕು. ಬಡಜನತೆ ಮತ್ತು ದುಡಿಯುವ ಜನ ಸಮೂಹಗಳಿಗೆ ಶ್ರಮಿಸುವುದನ್ನೇ ಮುಖ್ಯ ಆದ್ಯತೆಯ ಕರ್ತವ್ಯವಾಗಿ ಪಕ್ಷ, ಸಾಮೂಹಿಕ ಸಂಘಟನೆಗಳು ಮತ್ತು ಆಡಳಿತವು ತೆಗೆದುಕೊಳ್ಳಬೇಕು. ಕಮ್ಯುನಿಸ್ಟ್ ಅಲ್ಲದ ಕಮ್ಯುನಿಸ್ಟೇತರ ನಡವಳಿಕೆಗಳು ಮತ್ತು ವರ್ತನೆಗಳನ್ನು ಎಲ್ಲಾ ಹಂತಗಳಲ್ಲಿಯೂ ತಡೆಯಲು ಪಕ್ಷವು ತತ್‌ಕ್ಷಣದ ಹಾಗೂ ನಿಷ್ಠುರ ಕ್ರಮ ಕೈಗೊಳ್ಳಬೇಕು ಎಂದು ನಿರ್ಧರಿಸಲಾಗಿದೆ.

ಈ ರಾಜ್ಯ ಸಮಿತಿಯ ಚರ್ಚೆಯಲ್ಲಿ 53 ಸಂಗಾತಿಗಳು ಭಾಗವಹಿಸಿದ್ದರು. ಇದನ್ನು ಸಮಾರೋಪಿಸಿದ ರಾಜ್ಯ ಕಾರ್ಯದರ್ಶಿ ಬಿಮನ್ ಬಸು ತಕ್ಷಣದ ಕರ್ತವ್ಯಗಳಾಗಿ ಕೆಲವು ಕಾರ್ಯಕ್ರಮಗಳನ್ನು ಗುರುತಿಸಿದರು. ಪ್ರಜಾಪ್ರಭುತ್ವ ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆಗೆ ತಕ್ಷಣದಲ್ಲಿಯೇ ಬೀದಿಗಿಳಿಯಬೇಕು. ಜನತೆಯನ್ನು ಸಂಘಟಿಸುವ ಮೂಲಕ ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸುವ ಶಕ್ತಿಗಳ ಪ್ರಯತ್ನಗಳನ್ನು ಪ್ರತಿರೋಧಿಸಬೇಕು. ಬೆಲೆ ಏರಿಕೆ, ಸಾರ್ವತ್ರಿಕ ಪಡಿತರ ವಿತರಣಾ ಪದ್ಧತಿ, ಎಲ್ಲಾ ಬಡ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ನೀಡುವುದು. ಬಿಪಿಎಲ್ ಪರಿಗಣನೆಗೆ ಆಧಾರವಾಗಿರುವ ಕೇಂದ್ರ ಸರ್ಕಾರದ ವ್ಯಾಖ್ಯಾನದ ಬದಲಾವಣೆಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯನ್ನು ಚುರುಕುಗೊಳಿಸುವುದು, ಮತ್ತು ಗ್ರಾಮೀಣ ವಿದ್ಯುತೀಕರಣದ ಕಾರ್ಯಕ್ರಮಗಳ ಅನುಷ್ಠಾನದ ವಿಷಯಗಳಿಗಾಗಿ ರಾಜ್ಯ ಮಟ್ಟದಲ್ಲಿ ವ್ಯಾಪಕ ಚಳುವಳಿಗಳನ್ನು ಸಂಘಟಿಸಬೇಕು.

‘ಕಾಯ್ದೆಯ ಪ್ರತಿ ಕೈಲಿ ಹಿಡಿದುಕೊಂಡೇ ಶುರುವಾಯ್ತು ವಿಚಾರಣೆ’

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿ ಜಾರಿ ಮಾಡಿಸಲು ಬಡಿದಾಡಿದ ಸಂಗಾತಿಗಳ ಅನುಭವ ಇದು

ಎಲ್ಲವೂ ನಾವಂದುಕೊಂಡಂತೆ ನಡೆಯುತ್ತಿತ್ತು. ಶೇಕಡಾ 64 ಕ್ಕೂ ಹೆಚ್ಚು ಕೂಲಿಕಾರರಿರುವ ಈ ನಾಡಿನಲ್ಲಿ ಅವರ ಕೂಲಿಯು ಹತ್ತು ರೂಪಾಯಿ ಹೆಚ್ಚಾದರೂ ಆಕಾಶ ನೆಲಕ್ಕೆ ಬಿದ್ದಷ್ಟು ಹುಯಿಲೆಬ್ಬಿಸುವುದು ನಾವು ನಿರೀಕ್ಷಿಸಿದ್ದೇವು. ನಮ್ಮ ಕೆಲಸದ ವ್ಯಾಪ್ತಿಯು ಇದ್ದಕ್ಕಿದ್ದಂತೆ ವಿಸ್ತರಿಸಿಕೊಳ್ಳತೊಡಗಿತು. ಔರಾದ ತಾಲ್ಲೂಕಿನ ಐದು ಗ್ರಾಮ ಪಂಚಾಯತ್‌ಗಳತ್ತ ನಮ್ಮ ಯಾತ್ರೆ ಸಾಗಿತು. ಅರ್ಜಿ ಗುಜರಾಯಿಸುವುದೂ ತುಂಬ ಕಷ್ಟದ ಮಾತಾಗಿತ್ತಂತೆ. ನಮ್ಮ ಸಂಘಟನೆಯ ಮಧ್ಯಪ್ರವೇಶದ ತರುವಾಯ ಅನಿವಾರ್ಯವಾಗಿ ಗ್ರಾಮ ಪಂಚಾಯತ್‌ಗಳಲ್ಲಿ ಅರ್ಜಿ ಸ್ವೀಕರಿಸತೊಡಗಿದರು. ಹತ್ತು ದಿನಗಳು ಉರುಳಿದವು. ಉರಿಬಿಸಿಲು ಇನ್ನೂ ತನ್ನ ಪ್ರಖರತೆ ಕಳೆದುಕೊಂಡಿರಲಿಲ್ಲ. ಆದರೆ ಇನ್ನೂ ಹತ್ತು ದಿನಗಳಲ್ಲಿ ಮುಂಗಾರು ಕಾಲಿಡುವ ಸಂಭವನೀಯತೆ ಇತ್ತು. ನೆಲಕೆ ಮಳೆ ಹನಿ ಸೋಕಿದರೂ ಸಾಕು ಕೂಲಿಕಾರರು ತಮ್ಮ ಹೊಲಗಳ ಕೆಲಸಕೆ ಸಿಗುತ್ತಿಲ್ಲ, ಉದ್ಯೋಗ ಖಾತ್ರಿ ನಿಲ್ಲಿಸಿ ಎಂಬ ಎತ್ತರದ ದನಿಗಳು ಹಾರಾಡುತ್ತವೆ.

ಉಳ್ಳವರ ಸುಳ್ಳು ಅಕೌಂಟಿಗೆ

ಕಳೆದ ಮೂರು ವರ್ಷ ಒಂದೇ ಒಂದು ದಿನದ ಕೆಲಸ ಪಡೆದಿರಲಿಲ್ಲ. ಉದ್ಯೋಗ ಖಾತ್ರಿ ಅಂದರೇನೇ ಹಳ್ಳಿಯಲ್ಲಿ ಉಳ್ಳವರ ಸುಳ್ಳು ಅಕೌಂಟಿಗೆ ಕೆಲಸ ಮಾಡದೆ ಹಣ ಬಂದು ಸೇರುವ ಯೋಜನೆ ಎಂದಾಗಿತ್ತು. ಇನ್ನು ಹೋರಾಟಕೆ ಸಜ್ಜಾಗುವುದು ಬಿಟ್ಟರೆ ನಮಗೆ ಬೇರೆ ದಾರಿಯೇ ಇರಲಿಲ್ಲ. ಕೆಲಸ ಕೊಡ್ತಿರಾ ಇಲ್ಲಾ? ಎಂದು ವಿಚಾರಿಸಬೇಕೆಂದರೆ ಕಾರ್ಯದರ್ಶಿಗಳ ಫೋನುಗಳು ದನಿ ಅಡಗಿಸಿಕೊಂಡಿದ್ದವು. ಮೇಲಧಿಕಾರಿಗಳ ಆಶ್ವಾಸನೆಗಳು ಬಿಸಿಲ್ಗುದುರೆಗಳಾಗಿದ್ದವು. ಜೂನ್ ಒಂದರಂದು ತಾಲ್ಲೂಕು ಪಂಚಾಯತ್ ಮುಂದೆ ಐದೂ ಗ್ರಾಮ ಪಂಚಾಯತ್ ಜನ ಬರುವುದು ಎಂದಾಯ್ತು.

ಒಳಗಿನವರು ಒಳಗೆ - ಹೊರಗಿನವರು ಹೊರಗೆ

ಕೆಂಬಾವುಟ ಹಿಡಿದು ಬಂದ ಜನತೆ ಕೆಲಸ ಪಡೆದೇ ಹೋಗುವ ಹಠ ತೊಟ್ಟಿದ್ದರು. ಮೆರವಣಿಗೆ ಸುರುವಾಯ್ತು. ಕಚೇರಿಯ ಮುಂಭಾಗದ ಬಾಗಿಲು ಕಿಟಕಿಗಳಿಗೆ ಬಾವುಟಗಳನ್ನು ಹಾರಿಬಿಟ್ಟರು. ಕಚೇರಿಯುಲ್ಲಿ ಅಧಿಕಾರಿ ಇಲ್ಲ ಎಂಬುದು ಗೊತ್ತಾಗುತ್ತಲೇ ಜನ ಮತ್ತಷ್ಟು ರೊಚ್ಚಿಗೆದ್ದರು. ಇನ್‌ಚಾರ್ಜ್ ಅಧಿಕಾರಿಯನ್ನು ಹಿಂದಕ್ಕೆ ಕಳಿಸಲಾಯಿತು. ಗೇಟುಗಳೆರಡನ್ನೂ ಮುಚ್ಚಲಾಯ್ತು. ಹಿಂಭಾಗದಲ್ಲಿರುವ ಪುಟ್ಟ ಗೇಟಿಗೂ ಬೀಗ ಜಡಿಯಲಾಯ್ತು. ಒಳಗಿನವರು ಒಳಗೆ, ಹೊರಗಿನವರು ಹೊರಗೆ. ಘೋಷಣೆ ಭಾಷಣಗಳಿಗೆ ದಾರಿಹೋಕ ಜನವೂ ಬಂದು ನೆರೆಯಿತು. ಮೇಲೆ ಸುಡುವ ಬಿಸಿಲು. ಬಾರದ ಅಧಿಕಾರಿಗಳು ಬೇಕೆಂದೇ ಸತಾಯಿಸುವ ಇರಾದೆ ಹೊಂದಿದ್ದು ಸ್ಪಷ್ಟವಿತ್ತು. ನಮಗೂ ಜಿದ್ದಿಗೆ ಬೀಳುವ ತಾಖತ್ತು ಇತ್ತು.

ಹೋರಾಟವೂ ಕ್ರಮೇಣ ರಂಗೇರತೊಡಗಿತು. ಜಕನಾಳ ಗ್ರಾಮದ ಮಾದಪ್ಪ ಮತ್ತು ಸಂಗ್ರಾಮ ಎತ್ತರದ ದನಿಯಲ್ಲಿ ‘ಈ ಊರು ಮನದಿರಾ ಈ ಕೇರಿ ಮನದಿರಾ’ ಹಾಡತೊಡಗಿದರು. ಬೆನ್ನಿಗೆ ‘ದಿಲ್ಲಿಯಲ್ಲಿ ಸರಕಾರದ ಜೋರು ಈ ಹಳ್ಳಿಯಲ್ಲಿ ಕೂಳಿಲ್ಲದ ಗೋಳು, ಓಟು ಕದ್ದು ಸೀಟಿಗೋದ ಚೋರ ನಮ ಬಡ ಬಗ್ಗರ ಬದುಕು ನೋಡು ಬಾರ’ ಹಾಡು ಕರುಳ ತಳಮಳದೊಂದಿಗೆ ಹಾಡತೊಡಗಿದ್ದು ಮೊಗಲಪ್ಪ ಮತ್ತಿತರ ಸಂಗಾತಿಗಳು. ನಡುವಲ್ಲಿ ಒಂದು ಪುಟ್ಟ ಭಾಷಣ ಮತ್ತೆ ಒಂದು ಕ್ರಾಂತಿ ಗೀತೆ. ತುಂಬ ವರ್ಷಗಳ ತರುವಾಯ ಮತ್ತೆ ಕೆಂಬಾವುಟ ಎತ್ತಿ ಹಾಡತೊಡಗಿದ್ದರು ಸಂಗಶೆಟ್ಟಿ. ಮರೆವಿಗೆ ಜಾರಿದ ಹಾಡಿನ ಪದಗಳನ್ನು ಸಭೆಯಲ್ಲಿದ್ದ ಸಂಗಾತಿ ನೆನಪಿಸುತ್ತಿದ್ದರು. ಕೆಲವೊಮ್ಮೆ ತಾವೇ ಹಾಡುತ್ತಿದ್ದರು. ಒಮ್ಮೆ ಆ ಭಾಗದಿಂದ ಹಾಡು ಹರಿದು ಬಂದರೆ ಮಗದೊಮ್ಮೆ ಹಿಂದಿನಿಂದ ಮೇಲೇಳುತ್ತಿತ್ತು. ‘ಮನೆ ಮನೆಯು ಕತ್ತಲೇ ಪ್ರತಿ ಕಣ್ಣು ಕಣ್ಣೀರು ರಾಜ್ಯ ಬಂದಿದ್ದಾರಿಗೋ ರಾಮಣ್ಣ ಸುಖವು ದಕ್ಕಿದ್ದಾರಿಗೋ ರಾಮಣ್ಣ’ ಹಸಿದ ಹೊಟ್ಟೆಯ ಜನ ಅವರು ಕ್ರಮ ಕ್ರಮೇಣ ಬಿಸಿಲಿನಷ್ಟೇ ಉರಿವ ಕುಂಡವಾಗತೊಡಗಿದರು. ಐದೂ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳನ್ನು ಕರೆದು ನಾಳೆಯೇ ಕೆಲಸ ಕೊಡಲು ಒಪ್ಪಿಸಿದ ಮೇಲೆಯೇ ಹೋರಾಟ ನಿಲ್ಲಿಸುವುದು. ಇಲ್ಲದಿದ್ದರೆ ಬಸ್ಸುಗಳನ್ನು ಬಂದ್ ಮಾಡುವುದು ಎಂದು ಹೇಳಿದೆವು. ಸೂರ್ಯ ಸಂಜೆ ಬಾಗಿಲಿಗೆ ಜಾರತೊಡಗಿದ.

ಕದಲಬಹುದೆಂಬ ಊಹೆ...

ನಾವು ಕದಲಬಹುದು ಎಂಬ ಪೋಲೀಸರ ಊಹೆ ಸುಳ್ಳು ಮಾಡಿ ಅಲ್ಲಿಯೇ ಇನ್ನಷ್ಟು ತೀವ್ರತೆಯಿಂದ ಸಭೆ ಮುಂದುವರೆಸಿದೆವು. ಯಾವುದಕ್ಕೂ ಬಗ್ಗದ ನಮ್ಮ ಛಲಕ್ಕೆ ಕಡೆಗೂ ಒಬ್ಬ ಅಧಿಕಾರಿ ಬಂದರು. ತುಂಬ ಹೈರಾಣಾಗಿ ಕಡೆಗೂ ನಾಲ್ಕು ಜನ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳನ್ನು ಕರೆಸಿದರು. ಸಭೆಯು ಥಕ್ಕಂತ ಜನತಾ ನ್ಯಾಯಾಲಯವಾಗಿ ಪರಿವರ್ತನೆಯಾಯ್ತು. ರೇಗಾ ಸರ್ಕ್ಯೂಲರ್ ಮತ್ತು ಕಾಯ್ದೆಯ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ವಿಚಾರಣೆ ಸುರುವಾಯ್ತು. ಕಾರ್ಯದರ್ಶಿಗಳು ಬೆವರತೊಡಗಿದರು. ಯಾಕೆಂದರೆ ವಾರಕ್ಕೊಮ್ಮೆಯೂ ಕಚೇರಿಗೆ ಹೋಗುವುದಿಲ್ಲ. ಜನರು ಹತ್ತಾರು ಬಾರಿ ಕಚೇರಿಗೆ ಅಲೆದಾಡಿದರೂ ಅರ್ಜಿ ಪಡೆಯುವವರು ದಿಕ್ಕಿಲ್ಲ. ಪಡೆದ ಅರ್ಜಿಗಳನ್ನು ಮೂಲೆಗೆಸೆದು ನಿರುಮ್ಮಳವಾಗಿದ್ದರು. ಮಾಡಿದ ಬೋಗಸ್ ಕೆಲಸಗಳು ಜನತೆಗೆ ಗೊತ್ತಿತ್ತು, ಬೇಸಿಗೆ ಪೂರ್ತಿ ಜನ



ಕೆಲಸ ಇಲ್ಲದೆ ಒಂದು ಹೊತ್ತು ಮಾತ್ರ ಉಂಡು ದಿನ ದುಡಿರುವರು. ಎಲ್ಲರ ಮನೆಯಲ್ಲಿಯೂ ಹೈಬ್ರಿಡ್ ಜೋಳ. ಎಲುಬು ತೊಗಲಿನ ಹಂದರವಾಗಿ ಹೋಗಿದೆ, ದುಡಿಯುವ ಜನರ ಶರೀರ. ಕಟುಕ ಆಳುವ ವರ್ಗದ ಬಾಲ ಬಡಿದರೆ ಉದ್ಯೋಗ ಖಾತ್ರಿ ಜಾರಿಯಾಗುವುದು ಹೇಗೆ? ಎಂದು ಜನ ವಿಚಾರಿಸತೊಡಗಿದರು.

ಏನೇನು ಮಾಹಿತಿ ಕೊಟ್ಟದ್ದೀರಿ?

ಹೆಡಗಾಪೂರ ಎಂಬ ಊರಲ್ಲಿ ಕಾರ್ಯದರ್ಶಿಯು ಪಕ್ಕಾ ದಲಿತ ವಿರೋಧಿ ಎಂಬುದು ರುಜುವಾಗತೊಡಗಿತು. ದಲಿತ ಕೇರಿಗೆ ಕುಡಿಯುವ ನೀರು ಸಿಗದಂತೆ ಮಾಡಿದ ಭೂಪ. ಗೆದ್ದವರ ಮತ್ತು ಇದ್ದವರ ಏಜೆಂಟನಾಗಿ ಸಂತಪೂರ ಎಂಬ ಊರಲ್ಲಿಯೇ ಠಿಕಾಣಿ. ಜನ ಕೆಲಸವೇ ಮಾಡುವುದಿಲ್ಲ ಎಂಬ ಸಬೂಬು ಹೇಳತೊಡಗಿದರು. ರೇಗಾ ಬಗ್ಗೆ ಜನರಿಗೆ ಏನೇನು ಮಾಹಿತಿ ಕೊಟ್ಟಿದಿರಿ? ಅಂತ ಕೇಳಿದರೆ ‘ಇಲ್ಲ’ ಎಂದು ಉತ್ತರಿಸಿದರು. ರೇಗಾ ಅಂದರೇನು ಅಂತ ಮೊದಲು ಗ್ರಾಮ ಸಭೆಯಲ್ಲಿ ಜನರಿಗೆ ತಿಳಿಸಿ ಹೇಳ್ರಿ ಆಮ್ಯಾಲ ಟೀಕಾ ಮಾಡ್ರಿ ಎಂದು ಹೇಳಿದ್ದಕ್ಕೆ ಸುಮ್ಮನೇ ಹುಂ ಅಂದರು. ಮಾಹಿತಿ ಕೊಡುವ ಕೆಲಸ ಮಾಡುತ ಬಂದಿರುವುದು ನಮ್ಮ ಸಂಘಟನೆಯೇ. ಮುಂದೆಯೂ ನಾವೇ ಮಾಡಬೇಕಿರುವುದು. ಜನತಾ ನ್ಯಾಯಾಲಯ ಮುಗಿಯುವಾಗ ರಾತ್ರಿ ಒಂಬತ್ತು ಗಂಟೆ. ಆ... ಜನರು ಯಾರೂ ಮಿಸುಕಾಡಲು ತಯಾರಿರಲಿಲ್ಲ. ನಾಳೆಯೇ ಎಲ್ಲ ಊರುಗಳಲ್ಲಿ ಕೆಲಸ ಸುರು ಮಾಡ್ಲಿ ಸಂಘದ ಮುಖಂಡರಿಗೆ ಫೋನು ಮಾಡುವುದಾಗಿ ಹೇಳಿದರು. ಜನ ಹಳ್ಳಿಗೆ ವಾಪಾಸು ಹೋಗಲು ಏನೇ ವಾಹನಗಳಿರಲಿಲ್ಲ. ಅದ್ಯಾಕೋ ಕೂಲಿಕಾರರ ಕಡು ಕಷ್ಟಕ್ಕೆ ಬಂದ ಅಧಿಕಾರಿಯೂ ಚೂರು ವಿಚಲಿತನಾಗಿದ್ದ. ‘ಅಕ್ಕಾರೇ, ಅಧಿಕಾರಿಯಾಗಿ ಅಲ್ಲ ಮನುಷ್ಯನಾಗಿ ಹೇಳ್ತೀನ್ರಿ, ಜನರಿಗಿ ಊರು ಮುಟ್ಟಸಲಾಕ ಟ್ಯಾಂಪೋ ನಂದೇ ಖರ್ಚಿನಾಗ ತರಸ್ತೀನಿ’ ಅನ್ನುವಾಗ ಅವರ ಕಣ್ಣಲ್ಲಿ ಕಾಳಜಿ ಮಾತ್ರ ಇತ್ತು. ರಾತ್ರಿ ಹೊತ್ತಲ್ಲಿ ಜನರು ವಿಜಯದ ನಗೆ ಹೊತ್ತು ಮರಳಿದರು. ಮರುದಿನ ಒಂದೊಂದೇ ಊರಿಂದ ದೂರವಾಣಿಯ ರಿಂಗಣ ‘ಕಾಮ್ರೇಡ್ ನಮ್ಮೂರಾಗ ಎರಡು ನೂರು ಮಂದಿ ಕೆಲಸಕ್ಕ ನಿಂತಿವ್ರೀ, ಬಡುರ ಹೊಲ್ದಾಗ ಅರಿಣಿ ಹಾಸ್ತ ಇದಿವ್ರಿ, ನೆಲ ತಳ್ಳ (ಗಟ್ಟಿ) ಇದ್ದರ ಬ್ಯಾಡ ಅಂದಿದೇವ’ ಎಲ್ಲರ ದನಿಯಲ್ಲಿ ಅದ್ಭುತವಾದ ಚೈತನ್ಯ ವ್ಯಕ್ತವಾಗುತ್ತಿತ್ತು. ಮುಂದಿನ ವಾರ ಸಂಘಟನೆಯ ಸದಸ್ಯತ್ವ ಮತ್ತು ಕಮಿಟಿಗಳನ್ನು ಮಾಡಿಸಲು ಚಿಂತಿಸತೊಡಗಿದೆವು.

○ **ಕೆ. ನೀಲಾ**

ಗಂಭೀರ ಸ್ವಯಂ ವಿಮರ್ಶೆ....

ಪುಟ 11 ರಿಂದ

ಹೊಣೆಗಾರಿಕೆಯನ್ನು ಮುಖ್ಯವಾಗಿ ರಾಜ್ಯ ಸರ್ಕಾರಗಳೇ ಹೊರಬೇಕಾಗಿರುವುದರಿಂದ ಸರ್ಕಾರ ಅವುಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ವಿಕೇಂದ್ರೀಕರಿಸಲು ಮತ್ತು ನಿಧಿಗಳನ್ನು ಒದಗಿಸಲು ಕ್ರಮಗಳನ್ನು ವಹಿಸಬೇಕು.

ಬ್ಯಾಂಕಿಂಗ್ ಮತ್ತು ವಿಮಾ ವಲಯದಲ್ಲಿ ವಿಶೇಷ ಬಂಡವಾಳವನ್ನು ಹೆಚ್ಚಿಸುವ ಮತ್ತು ಹಣಕಾಸು ವಲಯದ ಉದಾರೀಕರಣದ ಶಾಸನಗಳನ್ನು ಪಾಸು ಮಾಡಿಕೊಳ್ಳಲು ಪ್ರಯತ್ನಿಸಿದರೆ ಸಿಪಿಐ(ಎಂ) ಅಂತಹ ಎಲ್ಲಾ ಕ್ರಮಗಳನ್ನು ಸಂಸತ್ತಿನ ಒಳಗೂ ಮತ್ತು ಹೊರಗೂ ಬಲವಾಗಿ ವಿರೋಧಿಸುತ್ತದೆ. ಲಾಭದಲ್ಲಿರುವ ಸಾರ್ವಜನಿಕ ವಲಯದ ಘಟಕಗಳಲ್ಲಿ ಹೂಡಿಕೆಗಳ ಹಿಂಪಡಿಕೆ, ಚಿಲ್ಲರೆ ವ್ಯಾಪಾರ ಮತ್ತು ಉನ್ನತ ಶಿಕ್ಷಣ ಮುಂತಾದ ವಲಯಗಳಲ್ಲಿ ದೇಶಕ್ಕೆ ಪ್ರಯೋಜನಕಾರಿ ಯಲ್ಲದ ವಿದೇಶಿ ನೇರ ಹೂಡಿಕೆಗಳನ್ನು ವಿರೋಧಿಸುವುದನ್ನು ಮುಂದುವರೆಸುತ್ತದೆ. ಅದು ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರಕ್ಕೆ ಒತ್ತಡ ಹಾಕುತ್ತದೆ.

ಪಶ್ಚಿಮ ಬಂಗಾಳದಲ್ಲಿ ದಾಳಿಗಳ ವಿರುದ್ಧ ಪ್ರತಿಭಟನೆ :

ಪಶ್ಚಿಮಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಕೂಟ ಮತ್ತು ಮಾವೋವಾದಿಗಳು ಪಕ್ಷದ ಕಾರ್ಯಕರ್ತರು, ಕಛೇರಿಗಳು ಮತ್ತು ಬೆಂಬಲಿಗರ ಮೇಲೆ ನಡೆಸಿರುವ ವ್ಯಾಪಕ ದಾಳಿಗಳನ್ನು ಪ್ರತಿಭಟಿಸಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ ಮತ್ತು ಇತರ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕೇಂದ್ರ ಸಮಿತಿ ಮನವಿ ಮಾಡಿಕೊಂಡಿದೆ. ಪಕ್ಷವು ಪಶ್ಚಿಮಬಂಗಾಳದೊಂದಿಗೆ ಸೌಹಾರ್ದ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ದೇಶಾದ್ಯಂತ ಪ್ರಚಾರಾಂದೋಲನವನ್ನು ನಡೆಸುತ್ತದೆ.

○

'ಪ್ರಜಾಪ್ರಭುತ್ವ'ದ ವಿಚಿತ್ರ ! ಬಹುಮತವಿಲ್ಲದೆಯೂ ಸರ್ಕಾರ

ನಿತ್ಯಾನಂದಸ್ವಾಮಿ

ನಮ್ಮ ಚುನಾವಣಾ ಪದ್ಧತಿ ದೋಷಪೂರಿತವಾಗಿದೆ. ಮತಗಳಿಕೆ ದೃಷ್ಟಿಯಿಂದ ಬಹುಮದ ಇಲ್ಲದಿದ್ದರೂ ರಾಜಕೀಯ ಪಕ್ಷಗಳು ಸ್ಥಾನಗಳ ಲೆಕ್ಕದಲ್ಲಿ ಬಹುಮತಗಳಿಸಿ ಅಧಿಕಾರ ಹಿಡಿಯುವ ಸಂಭವವೇ ಇಲ್ಲಿ ಹೆಚ್ಚಾಗಿದೆ. ಪ್ರಮಾಣಾಧಾರಿತ ಪ್ರಾತನಿಧ್ಯ ಪದ್ಧತಿ ಈ ಸಮಸ್ಯೆಗೆ ಪರಿಹಾರವಾಗಬಲ್ಲದು.

ಇದೇ ಜೂನ್ 5 ರಂದು, ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ಗೊತ್ತುವಳಿ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ, ರಾಜ್ಯ ಸಭೆಯಲ್ಲಿ ಪಕ್ಷದ ನಾಯಕರೂ ಆಗಿರುವ ಸೀತಾರಾಂ ಯೆಚೂರಿ ಅವರು ಹೀಗೆ ಹೇಳಿದರು.

'ನಾವು ಜನಾದೇಶ, ಜನತೆಯ ತೀರ್ಪು, ಜನತೆಯಿಂದ ಆಯ್ಕೆಯಾದ ಸರ್ಕಾರ ಎಂದು ಮಾತನಾಡುತ್ತೇವೆ. ಆದರೆ ಸ್ವಾತಂತ್ರ್ಯಾನಂತರ ಇದುವರೆಗೆ ಆಯ್ಕೆಯಾದ ಒಂದೇ ಒಂದು ಸರ್ಕಾರಕ್ಕೂ ಒಟ್ಟು ಮತದಾನ ಮಾಡಿದವರಲ್ಲಿ ಶೇ.50 ಕ್ಕಿಂತ ಹೆಚ್ಚು ಮತದಾರರ ಬೆಂಬಲ ಸಿಕ್ಕಿದ್ದಿಲ್ಲ. ಬಹುಮತದ ಆಳ್ವಿಕೆಯ ಬಗ್ಗೆ ನಾವು ಮಾತನಾಡುತ್ತೇವೆ. ಆದರೆ ಇದುವರೆಗಿನ ಯಾವುದೇ ಒಂದು ಸರ್ಕಾರಕ್ಕೆ ಶೇ.50ಕ್ಕಿಂತ ಹೆಚ್ಚು ಜನರ ಬೆಂಬಲ ದೊರೆತಿಲ್ಲ. ಇದು ಮೊದಲ-ಗುರಿ-ದಾಟುವ (First-Past-the post system) ಚುನಾವಣಾ ಪದ್ಧತಿ. ಬಹುಮತಕ್ಕೆ ಹತ್ತಿರ ಬಂದದ್ದೆಂದರೆ ಶೇ.48 ರಷ್ಟು ಚಲಾಯಿತ ಮತಗಳನ್ನು ಪಡೆದು ರಾಜೀವ್‌ಗಾಂಧಿ ಪ್ರಧಾನ ಮಂತ್ರಿಯಾದಾಗ. ನಾವು ಈಗ ಪ್ರಜಾಪ್ರಭುತ್ವ ಮತ್ತು ಬಹುಮತದ ಆಳ್ವಿಕೆಯ ಬಗ್ಗೆ ಚರ್ಚಿಸುತ್ತಿದ್ದೇವೆ ಎನ್ನುವುದಾದರೆ ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ಉದ್ದೇಶಿತ ಆಡಳಿತ ಸುಧಾರಣೆಗಳಲ್ಲಿ ಚುನಾವಣಾ ಸುಧಾರಣೆಗಳನ್ನು ಸೇರಿಸುವುದು ಅಗತ್ಯವಾಗಿದೆ. ಸರ್ಕಾರ ಏಕ ಪಕ್ಷ ಸರ್ಕಾರವಾಗಿರಬಹುದು ಅಥವಾ ಸಮ್ಮಿಶ್ರ ಸರ್ಕಾರ. ಸರ್ಕಾರಕ್ಕೆ ಒಟ್ಟು ಮತದಾನ ಮಾಡಿದವರಲ್ಲಿ ಕನಿಷ್ಠ ಬಹುಮತದ ಬೆಂಬಲ ಇರಬೇಕು. ಇದಕ್ಕಾಗಿ ಭಾಗಶಃ ಪ್ರಮಾಣಾಧಾರಿತ ಪ್ರಾತಿನಿಧ್ಯ (Partial Proportional representation) ಚುನಾವಣಾ ಪದ್ಧತಿಯನ್ನು ಅಳವಡಿಸುವ ಕುರಿತು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ದೋಷಪೂರಿತ ಚುನಾವಣಾ ಪದ್ಧತಿ:

ಪ್ರಜಾಪ್ರಭುತ್ವವನ್ನು 'ಬಹುಮತ ಆಳ್ವಿಕೆ' ಎಂದು ವರ್ಣಿಸಲಾಗುತ್ತದೆ. ಬಹುಮತದ ಆಧಾರದಲ್ಲಿ ತೀರ್ಮಾನಗಳನ್ನು ಕೈಗೊಳ್ಳುವುದು ಪ್ರಜಾಪ್ರಭುತ್ವದ ಜೀವಾಳವಾಗಿದೆ. ಒಂದು ಸಂಸ್ಥೆ ಅಥವಾ ಸಂಘಟನೆಯಲ್ಲಿ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸುವ ಮೂಲಕ ಪ್ರಜಾಪ್ರಭುತ್ವವನ್ನು ಜೀವಂತವಾಗಿ ಇಡಲಾಗುತ್ತದೆ. ಆದರೆ ಚುನಾವಣಾ ಪದ್ಧತಿಯಲ್ಲಿರುವ ದೋಷಗಳಿಂದಾಗಿ ಬಹುಮತ ವಿಲ್ಲದ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದನ್ನು ನಾವು ಕಾಣುತ್ತಿದ್ದೇವೆ.

ಉದಾಹರಣೆ, 15ನೇ ಲೋಕಸಭಾ ಚುನಾವಣೆಯಲ್ಲಿ ಒಟ್ಟು 543 ಲೋಕಸಭಾ ಸ್ಥಾನಗಳ ಪೈಕಿ 206 ಸ್ಥಾನಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿರುವ ಕಾಂಗ್ರೆಸ್ ಪಕ್ಷಕ್ಕೆ ಒಟ್ಟು ಚುನಾಯಿತ ಮತಗಳಲ್ಲಿ ಸಿಕ್ಕಿದ್ದು ಶೇ.28.67 ಮತಗಳು ಮಾತ್ರ. ಯುಪಿಎ ಕೂಟಕ್ಕೆ ಸಿಕ್ಕಿರುವ ಒಟ್ಟು ಮತಗಳು ಕೇವಲ ಶೇ.37.04 ವಿವರಗಳು ಹೀಗಿವೆ.

ಪಕ್ಷ	ಗೆದ್ದ ಸ್ಥಾನಗಳು	ಪಡೆದ ಶೇಕಡಾವಾರು ಮತಗಳು
ಕಾಂಗ್ರೆಸ್	206	28.67
ಟಿಎಂಸಿ	19	3.43
ಡಿಎಂಕೆ	18	1.91
ಎನ್‌ಸಿಪಿ	9	2.24
ಎನ್‌ಸಿ	3	0.13
ಜೆಎಂಎಂ	2	0.43
ಐಯುಎಂಎಲ್	2	0.23
ಒಟ್ಟು		ಶೇ.37.04

ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ಘೋಷಿಸಿರುವ ಎಸ್.ಪಿ., ಬಿ.ಎಸ್.ಪಿ., ಆರ್.ಜೆ.ಡಿ., ಎಲ್.ಜೆ.ಪಿ, ಜೆಡಿ(ಎಸ್) ಮೊದಲಾದ ಪಕ್ಷಗಳು ಪಡೆದ ಮತಗಳನ್ನು ಗಣನೆಗೆ ತೆಗೆದುಕೊಂಡರೂ ಯುಪಿಎ ಸರ್ಕಾರಕ್ಕೆ ಒಟ್ಟು ಮತದಾನ ಮಾಡಿದವರ ಪೈಕಿ ಕನಿಷ್ಠ ಶೇ.50 ರಷ್ಟು ಮತಗಳು ಸಿಕ್ಕಂತೆ ಆಗುವುದಿಲ್ಲ. ಹೀಗೆ ಒಂದು ಬಹುಮತ ಇಲ್ಲದ ಸರ್ಕಾರ ಇಂದು ದೇಶದಲ್ಲಿ ಆಡಳಿತ ನಡೆಸುವಂತಾಗಿದೆ. (ಕರ್ನಾಟಕದಲ್ಲಿ ಇಂದು ಅಧಿಕಾರ ನಡೆಸುತ್ತಿರುವ ಬಿಜೆಪಿ ಕೂಡಾ ವಾಸ್ತವಿಕವಾಗಿ ಬಹುಮತ ಇಲ್ಲ. ಇಂದಿನ ಈ ಸರ್ಕಾರ ಮಾತ್ರವಲ್ಲ, ಕಾಂ: ಸೀತಾರಾಂ ಯೆಚೂರಿ ಹೇಳಿರುವಂತೆ, ಇದುವರೆಗಿನ ಯಾವುದೇ ಒಂದು ಕೇಂದ್ರ ಸರ್ಕಾರಕ್ಕೆ ಮತದಾನ ಮಾಡಿದವರ ಪೈಕಿ ಸಹ ಬಹುಮತ ಇರಲಿಲ್ಲ. ಇದು ನಮ್ಮ ಚುನಾವಣಾ ಪದ್ಧತಿಯ ದೋಷವಾಗಿದೆ.

ನಮ್ಮ ದೇಶದ ಚುನಾವಣಾ ಪದ್ಧತಿಯನ್ನು 'ಮೊದಲ ಗುರಿ-ದಾಟುವ' ಪದ್ಧತಿ ಎಂದು ಕರೆಯಲಾಗುತ್ತದೆ. ಇದು ಬ್ರಿಟಿಷ್ ವಸಾಹತುಶಾಹಿಯ ಬಳುವಳಿಯಾಗಿದೆ. ಇಂಗ್ಲೆಂಡಿನಲ್ಲಿ ಮತ್ತು ಅದರ ಹಿಂದಿನ ಅನೇಕ ವಸಾಹತುಗಳಲ್ಲಿ ಈ ಪದ್ಧತಿ ಅಸ್ತಿತ್ವದಲ್ಲಿದೆ. ಅತಂತ್ರ ಶಾಸನ ಸಭೆಗಳನ್ನು ತಪ್ಪಿಸಲು ಮತ್ತು ಸ್ಥಿರ ಸರ್ಕಾರಗಳ ಸ್ಥಾಪನೆಗೆ ಸಹಾಯವಾಗಲು ಈ ಪದ್ಧತಿಯನ್ನು ಅಳವಡಿಸಲಾಯಿತೆಂದು ಹೇಳಲಾಗುತ್ತದೆ. ಈ ಪದ್ಧತಿಯಲ್ಲಿ ದೇಶವನ್ನು ಅಥವಾ ರಾಜ್ಯವನ್ನು ಏಕ ಸದಸ್ಯ ಮತದಾನ ಕ್ಷೇತ್ರಗಳಾಗಿ ಹೆಚ್ಚು ಕಡಿಮೆ ಸಮಾನ ವಿಸ್ತೀರ್ಣವಿರುವಂತೆ ವಿಂಗಡಿಸಲಾಗುತ್ತದೆ. ಮತದಾರರು ಮತ ಚೀಟಿಯಲ್ಲಿ ಒಬ್ಬ ಅಭ್ಯರ್ಥಿಗೆ ಮಾತ್ರ ಮತ ಹಾಕಬೇಕು. ಅತ್ಯಂತ ಹೆಚ್ಚು ಮತಗಳನ್ನು ಗಳಿಸುವ ಅಭ್ಯರ್ಥಿಯು ಜಯಗಳಿಸುತ್ತಾನೆ/ಳೆ. ಒಟ್ಟು ಚಲಾಯಿಸಲಾದ ಮತಗಳಲ್ಲಿ ಅಭ್ಯರ್ಥಿಗೆ ಬಹುಜನರ ಮತಗಳು ಬಂದಿವೆಯೋ ಇಲ್ಲವೋ ಎನ್ನುವುದು ಇಲ್ಲಿ ಮುಖ್ಯವಲ್ಲ. ಶೇಕಡಾವಾರು ಅತಿ ಹೆಚ್ಚು ಮತಗಳನ್ನು ಪಡೆದ ಪಕ್ಷದ ನಾಯಕನನ್ನಲ್ಲ, ಅತಿ ಹೆಚ್ಚು ಸ್ಥಾನಗಳನ್ನು



ಗೆದ್ದ ಪಕ್ಷದ ನಾಯಕನನ್ನು ಸರ್ಕಾರ ರಚಿಸಲು ಆಹ್ವಾನಿಸಲಾಗುತ್ತದೆ.

ಪ್ರಮಾಣಾಧಾರಿತ ಪ್ರಾತಿನಿಧ್ಯ ಪದ್ಧತಿ

ಪ್ರಪಂಚಾದ್ಯಂತ ಅನೇಕ ಚುನಾವಣಾ ಪದ್ಧತಿಗಳಿವೆ. ಪ್ರತಿಯೊಂದರಲ್ಲಿಯೂ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳು ಇವೆ. ಅತಿ ಕಡಿಮೆ ದೋಷಗಳುಳ್ಳ ಪದ್ಧತಿಯೇ 'ಪ್ರಮಾಣಾಧಾರಿತ ಪ್ರಾತಿನಿಧ್ಯ ಪದ್ಧತಿ' ಆಸ್ಟ್ರಿಯಾ, ಬೆಲ್ಜಿಯಂ, ಸೈಪ್ರೆಸ್, ಡೆನ್ಮಾರ್ಕ್, ಫಿನ್‌ಲ್ಯಾಂಡ್, ಜರ್ಮನಿ, ಗ್ರೀಸ್, ಐಯರ್ ಲ್ಯಾಂಡ್, ನೊರ್ವೆ, ಪೋರ್ಚುಗಲ್, ಸ್ಪೈನ್, ಸ್ವೀಡನ್ ಮೊದಲಾದ ಯುರೋಪಿನ ದೇಶಗಳಲ್ಲಿ, ಲ್ಯಾಟಿನ್ ಅಮೇರಿಕಾದ ಬೊಲಿವಿಯಾ, ಬ್ರೆಜಿಲ್ ನಿಕಾರಾಗುವ, ಪರಾಗುವೆ, ಪೆರು ಉರುಗುವೆ, ವೆನೆಜುವೆಲಾ ಮೊದಲಾದ ದೇಶಗಳಲ್ಲಿ ಈ ಪದ್ಧತಿ ಅಸ್ತಿತ್ವದಲ್ಲಿ ಇದೆ. ಈ ಪದ್ಧತಿಯಲ್ಲಿ ಒಂದು ರಾಜಕೀಯ ಪಕ್ಷವು ಪಡೆಯುವ ಸ್ಥಾನಗಳು ಅದು ಪಡೆದಿರುವ ಮತಗಳ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಉದಾಹರಣೆಗೆ 100 ಜನ ಸದಸ್ಯರಿರುವ ಒಂದು ಶಾಸನ ಸಭೆಗೆ ನಡೆಯುವ ಚುನಾವಣೆಯಲ್ಲಿ 'ಎ' ಪಕ್ಷಕ್ಕೆ ಶೇ.50 ರಷ್ಟು ಮತಗಳು ಸಿಕ್ಕರೆ, ಅದಕ್ಕೆ 50 ಸ್ಥಾನಗಳು ಸಿಗುತ್ತವೆ 'ಬಿ' ಪಕ್ಷಕ್ಕೆ ಶೇ.30 ರಷ್ಟು ಮತಗಳು ಸಿಕ್ಕರೆ, ಅದಕ್ಕೆ 30 ಸ್ಥಾನಗಳು ದೊರೆಯುತ್ತದೆ. 'ಸಿ' ಪಕ್ಷಕ್ಕೆ ಶೇ.20 ರಷ್ಟು ಮತಗಳು ಸಿಕ್ಕರೆ, ಒಟ್ಟು ಸ್ಥಾನಗಳಲ್ಲಿ ಆ ಪಕ್ಷಕ್ಕೆ 20 ಸ್ಥಾನಗಳು ಸಿಗುತ್ತವೆ.

ಪ್ರಮಾಣಾಧಾರಿತ ಪ್ರಾತಿನಿಧ್ಯ ಪದ್ಧತಿಯಲ್ಲಿ List system ಪಕ್ಷ ಪಟ್ಟಿ ಪದ್ಧತಿ ಹೆಚ್ಚು ಜನಪ್ರಿಯ ಪದ್ಧತಿಯಾಗಿದೆ. ಅಲ್ಜಿರಿಯಾ, ಅಂಗೋಲ, ಅರ್ಜೆಂಟಿನಾ, ಬೆಲ್ಜಿಯಂ, ಬ್ರೆಜಿಲ್, ಬಲ್ಗೇರಿಯಾ, ಕಂಬೋಡಿಯಾ, ಸೈಪ್ರಸ್, ಗ್ರೀಸ್, ಇಂಡೋನೇಷ್ಯಾ, ಇಸ್ರೇಲ್, ನಿಕಾರಾಗುವ, ನೊರ್ವೆ, ಪೊಲೆಂಡ್, ಪೋರ್ಚುಗಲ್, ದಕ್ಷಿಣ ಆಫ್ರಿಕಾ, ಸ್ಪೈನ್, ಶ್ರೀಲಂಕಾ, ಟರ್ಕಿ, ಉರುಗ್ವೆ, ವೆನೆಜುವೆಲಾ ಮೊದಲಾದ ದೇಶಗಳಲ್ಲಿ 'ಪಕ್ಷ ಪಟ್ಟಿ ಪದ್ಧತಿ' ಜಾರಿಯಲ್ಲಿದೆ. ಈ ಚುನಾವಣಾ ಪದ್ಧತಿಯಲ್ಲಿ ಪಕ್ಷಗಳು ಸ್ಥಾನಗಳಿಗೆ ಅನುಗುಣವಾಗಿ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುತ್ತವೆ. ಮತದಾರನು ತನಗೆ ಇಷ್ಟವಾದ ಒಂದು ಪಕ್ಷಕ್ಕೆ ಮತ ನೀಡುತ್ತಾನೆ. ಆಯಾ ಪಕ್ಷಗಳಿಗೆ ಬಂದ ಒಟ್ಟು ಮತಗಳಿಗೆ ಅನುಸಾರವಾಗಿ ಅನಂತರ ಅಭ್ಯರ್ಥಿಗಳನ್ನು ಆಯಾ ಪಕ್ಷದ ಪಟ್ಟಿಯಿಂದ ಅನುಕ್ರಮವಾಗಿ ಆಯ್ಕೆ ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ ಅಭ್ಯರ್ಥಿಗಿಂತ ರಾಜಕೀಯ ಪಕ್ಷಕ್ಕೆ ಪ್ರಾಮುಖ್ಯತೆ ಇರುತ್ತದೆ. ಒಂದು ಪಕ್ಷವು ತನ್ನ ಪ್ರಾತಿನಿಧ್ಯವನ್ನು ಗೆಲ್ಲಬೇಕಾದರೆ ಒಂದು ನಿರ್ದಿಷ್ಟ ಪ್ರಮಾಣದ ಮತಗಳನ್ನು ಕನಿಷ್ಠ ಪಕ್ಷ ಗಳಿಸಬೇಕಾಗುತ್ತದೆ. ಒಂದು ರಾಜಕೀಯ ಪಕ್ಷವಾಗಲಿ, ಅಥವಾ ಪಕ್ಷಗಳ ಕೂಟವಾಗಲಿ ಮತದಾನ ಮಾಡಿದವರ ಬಹುಮತದ ಬೆಂಬಲವಿಲ್ಲದೆ ಅಧಿಕಾರಕ್ಕೆ ಬರುವುದನ್ನು ಈ ಪದ್ಧತಿಯ ಮೂಲಕ ತಡೆಗಟ್ಟಬಹುದಾಗಿದೆ. ಈ ಪದ್ಧತಿಯಲ್ಲಿ ಒಂದು ರಾಜಕೀಯ ಪಕ್ಷಕ್ಕೆ ಕಮ್ಮಿ ಮತಗಳನ್ನು ಪಡೆದು ಹೆಚ್ಚು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗದು. ಮತದಾರರ ನಿಜವಾದ ಬೆಂಬಲದ ಪ್ರಮಾಣಕ್ಕೆ ಅನುಗುಣವಾಗಿ ಒಂದು ಪಕ್ಷವು ಸ್ಥಾನಗಳನ್ನು ಪಡೆಯುತ್ತದೆ. ಈ ಪದ್ಧತಿಯಲ್ಲಿ ಅಭ್ಯರ್ಥಿಗಳು ವ್ಯಕ್ತಿಗತವಾಗಿ ಚುನಾವಣಾ ಅಕ್ರಮಗಳನ್ನು ನಡೆಸಲು, ಮತದಾರರಿಗೆ ಆಸೆ ಆಮಿಷಗಳನ್ನು ಒಡ್ಡಲು ಅವಕಾಶ ಇರುವುದಿಲ್ಲ. ರಾಜಕೀಯಪಕ್ಷಗಳು ಹೆಚ್ಚೆಚ್ಚು ಉತ್ತರದಾಯಿತ್ವ ಹೊಂದಿರಬೇಕಾಗುತ್ತದೆ. ಪಕ್ಷಗಳ ಧೋರಣೆಗಳಿಗೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತದೆ. ನಮ್ಮ ಚುನಾವಣಾ ಪದ್ಧತಿಯಲ್ಲಿರುವ ಅನೇಕ ಕೊರತೆಗಳಿಗೆ ಪ್ರಮಾಣಾಧಾರಿತ ಪ್ರಾತಿನಿಧ್ಯ ಪಕ್ಷ ಪಟ್ಟಿ ಪದ್ಧತಿಯಲ್ಲಿ ಪರಿಹಾರವಿದೆ. ಈ ಕುರಿತು ರಾಜಕೀಯ ಚರ್ಚೆಯೊಂದು ನಡೆಯುವಂತಾಗುವುದು ತಕ್ಷಣದ ಅವಶ್ಯಕತೆಯಾಗಿದೆ.



ಜಯ

ವ್ಯಾಪಕವಾಗಿ ಹರಡುತ್ತಿರುವ ಹಂದಿ ಜ್ವರ

ಜೀವವುಳಿಸುವ ಔಷಧಿ ಗಳಿಗೆ ಪೇಟೆಂಟ್‌ನಿಂದ ಮುಕ್ತಿ ಎಂದು ?

ಹಂದಿ ಜ್ವರ (ತಾಂತ್ರಿಕವಾಗಿ ಇದನ್ನು ಹೆಚ್1ಎನ್1 ಎಂದು ಕರೆಯಲಾಗುತ್ತದೆ) ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ವ್ಯಾಪಕವಾಗಿ ಹರಡುತ್ತಿದ್ದು ಎಲ್ಲೆಡೆ ದಿಗಿಲುಂಟು ಮಾಡಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಇದುವರೆಗೂ ಹಂದಿ ಜ್ವರದ ವೈರಸ್ ಸುಮಾರು 74 ರಾಷ್ಟ್ರಗಳಲ್ಲಿ ಹರಡಿದ್ದು ಆಸ್ಟೇಲಿಯಾ, ಇಂಗ್ಲೆಂಡ್, ಸ್ಪೇನ್, ಜಪಾನ್ ಮತ್ತು ಚಿಲಿಗಳಲ್ಲಿ ವ್ಯಾಪಕವಾಗಿ ಹರಡುತ್ತಿದೆ. ಹಾಗೆಯೇ ಜೀವವುಳಿಸುವ ಔಷಧಿಗಳು ಪೇಟೆಂಟ್ ಬಂಧನದಲ್ಲಿರುವುದರ ಕುರಿತು ಚರ್ಚೆಯನ್ನು ಹುಟ್ಟುಹಾಕಿದೆ.

ಹಂದಿಗೆ ಏಕೆ ಕೆಟ್ಟ ಹೆಸರು!



ಕೆಲವು ದಿನಗಳ ಹಿಂದೆ ಹಕ್ಕಿ ಜ್ವರ ಬಹಳ ಸುದ್ದಿಯಲ್ಲಿತ್ತು. ಆದರೆ ಹಂದಿ ಜ್ವರವು ಹಕ್ಕಿ ಜ್ವರದಷ್ಟು ಅಪಾಯಕಾರಿಯಲ್ಲ. ಏಕೆಂದರೆ ಹಕ್ಕಿ ಜ್ವರ ಹರಡಿದಾಗ ಸಾಯುವ ದರ ಹೆಚ್ಚು ಹಾಗೂ ಹರಡುವ ವ್ಯಾಪಕತೆಯೂ ಹೆಚ್ಚು. ಹಕ್ಕಿ ಜ್ವರವು ಹಕ್ಕಿಯಿಂದ ಹಕ್ಕಿಗೆ ಹರಡುವ ಮೂಲಕ ಮನುಷ್ಯನಿಗೂ ಹರಡುತ್ತದೆ. ಆದ್ದರಿಂದ ಇದನ್ನು ಹಕ್ಕಿ ಜ್ವರ ಎಂದು ಕರೆಯುತ್ತಾರೆ. ಆದರೆ, ಹಂದಿ ಜ್ವರ ಹಂದಿಯಿಂದ ಹಂದಿಗೆ ಹರಡುವುದಿಲ್ಲ, ಹಾಗೆಯೇ ಹಂದಿಯಿಂದ ಮನುಷ್ಯನಿಗೂ ಹರಡುವುದಿಲ್ಲ. ಹಾಗಾದರೆ ಇದನ್ನೇಕೆ ಹಂದಿ ಜ್ವರ ಎನ್ನಲಾಗುತ್ತದೆ? ಅದಕ್ಕೂ ಖಚಿತ ಉತ್ತರವಿಲ್ಲ. ಹಂದಿ ಜ್ವರವನ್ನು ಹರಡುವ ವೈರಸ್‌ನಲ್ಲಿರುವ ಜೀವತಂತುವು ಹಕ್ಕಿ ಜ್ವರ ಮತ್ತು ಮನುಷ್ಯ ಜ್ವರಗಳನ್ನು ಉಂಟುಮಾಡುವ ಮಿಶ್ರಣದಿಂದಾಗಿದೆ. ಹಕ್ಕಿಜ್ವರ ಮತ್ತು ಮನುಷ್ಯ ಜ್ವರವನ್ನು ಉಂಟುಮಾಡುವ ವೈರಸ್‌ಗಳು ಹಂದಿಗಳಲ್ಲಿ ಆಗಿದೆಯೋ ಅಥವಾ ಮನುಷ್ಯರಲ್ಲಾಗಿದೆಯೋ ಅದೂ ಕೂಡ ಇನ್ನೂ ಸಾಬೀತಾಗಬೇಕಿದೆ. ಅಲ್ಲಿಯವರೆಗೂ ಬಡ ಹಂದಿಗೆ ನಮ್ಮ ವಿಜ್ಞಾನಿಗಳು ಹಚ್ಚಿರುವ ಕಳಂಕಪಟ್ಟಿ ಮುಂದುವರೆಯುತ್ತದೆ! ಆದರೆ ಹಂದಿ ಜ್ವರವು ಹಕ್ಕಿ ಜ್ವರದಷ್ಟು ಅಪಾಯಕಾರಿಯಲ್ಲ. ಏಕೆಂದರೆ ಹಕ್ಕಿ ಜ್ವರ ಹರಡಿದಾಗ ಸಾಯುವ ದರ ಹೆಚ್ಚು ಹಾಗೂ ಹರಡುವ ವ್ಯಾಪಕತೆಯೂ ಹೆಚ್ಚು.

ಜಗತ್ತಿನಾದ್ಯಂತ ಇದುವರೆಗೂ 19000 ವ್ಯಕ್ತಿಗಳಿಗೆ ಮಾತ್ರವೆ ಹರಡಿದ್ದು, ನೂರಾರು ಸಂಖ್ಯೆಯ ಜನರು ಹಂದಿ ಜ್ವರದಿಂದ ಸತ್ತಿದ್ದಾರೆ. ಆದರೂ ಈ ಸಾಂಕ್ರಾಮಿಕ ರೋಗದ ಹರಡುವಿಕೆ ಆತಂಕಕಾರಿ ವಿದ್ಯಮಾನವಾಗಿದೆ. ಆದರೆ ಟೈಫಾಯಿಡ್ ಜ್ವರದಿಂದ ದೆಹಲಿ ನಗರವೊಂದರಲ್ಲೇ ಸಾಯುವವರ ಸಂಖ್ಯೆ ಇದಕ್ಕಿಂತಲೂ ಹೆಚ್ಚಿರುತ್ತದೆ. ಹಾದಾಗ್ಯೂ ವಿಶ್ವ ಆರೋಗ್ಯ ಸಂಸ್ಥೆಯಾದಿಯಾಗಿ ಹಂದಿ ಜ್ವರ ಕುರಿತಂತೆ ಎಲ್ಲೆಲ್ಲೂ ಅಪಾಯ ಗಂಟೆಯನ್ನು ಬಾರಿಸ ಲಾಗುತ್ತಿದೆಯೇಕೆಂದರೆ, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಯಾವುದೇ ಒಂದು ರೋಗವನ್ನು ಅಪಾಯಕಾರಿ ಎಂದು ಕರೆಯಬೇಕಾದರೆ ಆ ರೋಗವು ಹೊಸ ರೋಗವಾಗಿರಬೇಕು, ಮನುಷ್ಯರಿಗೆ ತಗುಲಿ ಗಂಭೀರವಾದ ಕಾಯಿಲೆಯುಂಟು ಮಾಡಬೇಕು, ಮತ್ತು ಬಹಳ ಸುಲಭವಾಗಿ ಮನುಷ್ಯರಲ್ಲಿ ಹರಡಿ ಉಳಿಯುವಂತಿರಬೇಕು. ಈ ಹಿನ್ನೆಲೆಯಲ್ಲಿ ಇದು ಟೈಫಾಯಿಡ್ ಜ್ವರಕ್ಕೆ ಹೋಲಿಸಿದಲ್ಲಿ, ಅಪಾಯಕಾರಿ ರೋಗವೆಂದು ಕರೆಯಲಾಗಿದೆ.

ಹಂದಿ ಮಾಂಸ ಸಂಸ್ಕರಣ ಕೇಂದ್ರಗಳು ಲಾಭದಾಸೆಗಾಗಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ರೋಗ ರುಜಿನಗಳು ಉದ್ಭವಿಸಲು ಕಾರಣವಾಗುತ್ತಿವೆ. ಆದರೆ, ಇದೇ ಕಾರಣಕ್ಕಾಗಿ ಹಂದಿ ಮತ್ತು ಇತರೆ ಪ್ರಾಣಿಗಳನ್ನು ಮಾಂಸಕ್ಕಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಿ ಫ್ಯಾಕ್ಟರಿಗಳಲ್ಲಿ ಅದನ್ನು ಸಂಸ್ಕರಿಸುವ ಘಟಕಗಳನ್ನೇ ಮುಚ್ಚಿಬಿಡಬೇಕೆಂಬ ಕೂಗು ಕೇಳಿಬರುತ್ತಿದೆ. ಇಂಥಹ ಕೂಗು ಹಾಕುತ್ತಿರುವವರು ಕೈಗಾರಿಕೆಗಳನ್ನು ಮುಚ್ಚಿಬಿಟ್ಟರೆ ಸಮಸ್ಯೆ ಪರಿಹಾರವಾದಂತೆಯೇ ಎಂಬ ಮಾತನ್ನು ತೇಲಿಬಿಡುತ್ತಿದ್ದಾರೆ. ಆದರೆ, ಬಂಡವಾಳಶಾಹಿ



ವ್ಯವಸ್ಥೆಯನ್ನು ಪರಿವರ್ತಿಸುವುದರಿಂದ ಸಮಸ್ಯೆಗೆ ಪರಿಹಾರ ಸಿಗುತ್ತದೆಯೇ ಎಂಬುದನ್ನು ಅರಿಯುವುದು ಮುಖ್ಯ.

ಅಪಾಯಕಾರಿ ಸಾಂಕ್ರಾಮಿಕ ರೋಗಗಳ ಅಟ್ಟಹಾಸ

ಕಳೆದ ಎರಡು ಶತಮಾನಗಳಿಂದೀಚೆಗೆ ವ್ಯಾಪಕವಾಗಿ ಹರಡಿ ಹಲವು ಕಾಯಿಲೆ, ಸಾವುಗಳನ್ನು ಉಂಟು ಮಾಡಿರುವ ರೋಗಗಳತ್ತ ದೃಷ್ಟಿ ಹರಿಸಿದಲ್ಲಿ ಹಂದಿ ಜ್ವರವೇನೂ ಅಂತಹ ಮಟ್ಟ ತಲುಪುವ ಸಾಧ್ಯತೆಗಳಿಲ್ಲ. 1918ರಲ್ಲಿ ಸ್ಪೇನ್ ದೇಶದಲ್ಲಿ ಹಕ್ಕಿ ಜ್ವರದಿಂದಾಗಿ ಸುಮಾರು 4 ಕೋಟಿಗೂ ಹೆಚ್ಚು ಜನತೆ ಬಲಿಯಾದರು. 1957ರಲ್ಲಿ ಏಷ್ಯಾದಲ್ಲಿ ಹರಡಿದ್ದ ಜ್ವರದಿಂದಾಗಿ 1 ಲಕ್ಷಕ್ಕೂ ಹೆಚ್ಚು ಜನ ಸತ್ತರು. 1968ರಲ್ಲಿ ಹಾಂಕಾಂಗ್‌ನಲ್ಲಿ ಹರಡಿದ ಜ್ವರದಿಂದಾಗಿ 7ಲಕ್ಷಕ್ಕೂ ಹೆಚ್ಚು ಸತ್ತರು.

ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಸಣ್ಣ ಪ್ರಮಾಣದ ಸಾವು, ಕಾಯಿಲೆಗಳು ಅಂಥಹ ಗಂಭೀರ ಗಮನವನ್ನೇನೂ ಸೆಳೆಯುವುದಿಲ್ಲ. ಉದಾಹರಣೆಗೆ ಭಾರತದಲ್ಲಿ ಕ್ಷಯ ಕಾಯಿಲೆಯಿಂದ ಪ್ರತಿ ವರ್ಷ 5ಲಕ್ಷ ಜನ ಸಾಯುತ್ತಾರೆ. ಜಗತ್ತಿನಾದ್ಯಂತ ಇನ್‌ಫ್ಲೂಯೆಂಜಾ ಜ್ವರದಿಂದ ಸುಮಾರು 5 ಲಕ್ಷ ಜನ ಸಾಯುತ್ತಾರೆ. ಆದರೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇಂತಹ ಸಾಮಾನ್ಯ ಕಾಯಿಲೆಗಳಿಂದ ಅಂಥಹ ದೊಡ್ಡ ಮಟ್ಟದ ಸಾವುಗಳೇನೂ ಉಂಟಾಗುವುದಿಲ್ಲ. ಆದರೆ ಹಕ್ಕಿಜ್ವರದಂಥಹ ಕಾಯಿಲೆಗಳು ಮಾತ್ರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನೂ ಬಹಳವಾಗಿ ಬಾಧಿಸುತ್ತವೆ.

ಜೀವವುಳಿಸುವ ಔಷಧಿಗಳಿಗೆ ಪೇಟೆಂಟ್‌ನಿಂದ ಸಿಗುವುದೆಂದಿಗೆ ಮುಕ್ತಿ?

ವ್ಯಾಪಕವಾಗಿ ಸಾಂಕ್ರಾಮಿಕ ರೋಗದಂತೆ ಹರಡುತ್ತಿರುವ ಹಂದಿ ಜ್ವರ ಕುರಿತ ಚರ್ಚೆ ಅದಕ್ಕೆ ಅಗತ್ಯವಿರುವ ಔಷಧ ಕುರಿತ ಚರ್ಚೆಯನ್ನು ಸಹಜವಾಗಿ ಹುಟ್ಟುಹಾಕಿದೆ. ಈ ರೋಗವನ್ನು ತಡೆಯಲು ಅಗತ್ಯ ಔಷಧಿಯನ್ನು ಉತ್ಪಾದಿಸಿ ರೋಗ ತಗುಲಿದ ಜನರಿಗೆ ತಲುಪಿಸುವುದು ತುರ್ತಿನ ಕೆ[illegible] ರೋಷ್ ಎಂಬ ಬಹುರಾಷ್ಟ್ರೀಯ ಕಂಪನಿಯು ಹಂದಿಜ್ವರಕ್ಕಾಗಿ ಒಸೆಲ್ಟಮಿವಿರ್ ಎಂಬ ಔಷಧಿಯನ್ನು ತಯಾರಿಸಿ ಪೇಟೆಂಟ್ ಪಡೆದಿಟ್ಟುಕೊಂಡಿದೆ. ಆಶ್ಚರ್ಯವೆಂದರೆ ಈ ಕಂಪನಿಯೇನೂ ಆ ಔಷಧವನ್ನು ಕಂಡುಹಿಡಿಯಲಿಲ್ಲ, ಬದಲಿಗೆ ಕೊಂಡುಕೊಂಡು ಮಾರಾಟ ಮಾಡುತ್ತಿದೆಯಷ್ಟೆ! ಭಾರತೀಯ ಕಂಪನಿ ಸಿಪ್ಲಾ ಕೂಡ ಅದೇ ಔಷಧವನ್ನು ಉತ್ಪಾದಿಸುತ್ತಿದ್ದಂತೆಯೇ ರೋಷ್ ಕಂಪನಿಯ ಪೇಟೆಂಟ್ ಎದುರಾಯಿತು. ಸದ್ಯಕ್ಕೆ ಭಾರತೀಯ ಪೇಟೆಂಟ್ ಕಛೇರಿಯು ಸಿಪ್ಲಾ ಕಂಪನಿಯ ಹಕ್ಕನ್ನು ಎತ್ತಿ ಹಿಡಿದಿದೆ. ಭಾರತ ಸರ್ಕಾರ ಕೂಡ ಅರೆಬರೆಯಲ್ಲಿ ದುಬಾರಿ ಬೆಲೆ ತೆತ್ತು ಒಂದಷ್ಟು ಹಂದಿ ಜ್ವರದ ಔಷಧಿಯನ್ನು ಕೊಂಡು ಇಟ್ಟುಕೊಂಡಿದೆ. ಆದರೆ ಜಾಗತಿಕವಾಗಿ ಈ ರೋಗದ ವಿರುದ್ಧ ನಿಲ್ಲಬೇಕಾದರೆ ಅತಿ ಸುಲಭವಾಗಿ ಕಡಿಮೆ ಬೆ[illegible] ಔಷಧಿ ಸಿಗುವಂತಿರಬೇಕು.

ಅತ್ಯಂತ ಶೋಚನೀಯ ಬೆಳವಣಿಗೆಯೆಂದರೆ ಇತ್ತೀಚೆಗೆ ಭಾರತ ಸರ್ಕಾರವು ಸಾರ್ವಜನಿಕ ರ[illegible] ಮೂರು ವ್ಯಾಕ್ಸೀನ್ ತಯಾರಿಕಾ ಘಟಕಗಳನ್ನು ಮುಚ್ಚಿಬಿಟ್ಟಿರುವುದು. ಆದರೆ, ರೋಗಗ್ರಸ್ತ ಜನತೆಗೆ ಔಷಧಿ ಕೊಡಿಸುವ ವೆಚ್ಚವು ರೋಗ ಬಾರದಂತೆ ನಿಯಂತ್ರಿಸುವ ವೆಚ್ಚಕ್ಕಿಂತ ಹೆಚ್ಚು ಎಂಬುದನ್ನು ಸರ್ಕಾರ ಗಂಭೀರವಾಗಿ ಅರಿಯಬೇಕಿದೆ.

ತೃಣಮೂಲ - ಮಾವೋವಾದಿಗಳ ಮೈತ್ರಿ..

ಪುಟ 7 ರಿಂದ

ಜನಸಾಮಾನ್ಯರಿಗೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇದರ ಪರಿಣಾಮವಾಗಿ ಜನಸಾಮಾನ್ಯರು ಅನಗತ್ಯವಾಗಿ ಅಪಾರ ಕಿರುಕುಳ ಮತ್ತು ಭಯದ ವಾತಾವರಣದಲ್ಲಿ ಬದುಕ ಬೇಕಾಗಿ ಬಂದಿದೆ. ತೃಣಮೂಲ ಕಾಂಗ್ರೆಸ್ ತನ್ನ ಚುನಾವಣಾ ಲಾಭಕ್ಕಾಗಿ ಜನಗಳನ್ನು ಮಾವೋವಾದಿಗಳ ಮರ್ಜಿಗೆ ಒಳಪಡಿಸಿದೆ ಎಂದೇ ಹೇಳಬೇಕಾಗುತ್ತದೆ.

ಮಾವೋವಾದಿಗಳೂ ಭಾಗವಾಗಿದ್ದ ತೃಣಮೂಲಿಗಳ ಈ ಮಹಾಕೂಟವನ್ನು ಬೆಂಬಲಿಸಿದ ಕೆಲವು 'ಬುದ್ಧಿಜೀವಿಗಳು' ಮಧ್ಯಸ್ಥಿಕೆ ವಹಿಸುವ ಪ್ರಯತ್ನ ನಡೆಸಿದ್ದಾರೆ. ಸರಕಾರ ತನ್ನ ಕಾರ್ಯಾಚರಣೆಗೆ, ಈ ಪ್ರದೇಶದಿಂದ ಮಾವೋವಾದಿಗಳನ್ನು ಹೊರ ಹಾಕುವುದಕ್ಕೆ ಮತ್ತು ಸಾಮಾನ್ಯ ಸ್ಥಿತಿ ಏರ್ಪಡಿಸುವ ಕೆಲಸಕ್ಕೆ ಸದ್ಯಕ್ಕೆ ವಿರಾಮ ಕೊಟ್ಟರೆ ಮಾವೋವಾದಿಗಳು ಮಾತುಕತೆಗಳಿಗೆ ಉತ್ಸುಕರಾಗಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಮಾವೋವಾದಿಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ, ಹಿಂಸೆ ಮತ್ತು ಭಯೋತ್ಪಾದನೆಯನ್ನು ತ್ಯಜಿಸಿದರೆ ಮಾತ್ರವೇ ಮಾತುಕತೆ ಸಾಧ್ಯ ಎಂದು ಪಶ್ಚಿಮ ಬಂಗಾಳ ಸರಕಾರ ಸ್ಪಷ್ಟಪಡಿಸಿದೆ.

ಈ ನಡುವೆ, ಪಶ್ಚಿಮ ಬಂಗಾಳ ಸರಕಾರ ಭದ್ರತಾ ಪಡೆಗಳಿಂದ ಬುಡಕಟ್ಟು ಜನಗಳಿಗೆ ಆಗಬಹುದಾದ ಕಿರುಕುಳವನ್ನು ತಪ್ಪಿಸಲು ಪ್ರಯತ್ನ ನಡೆಸುತ್ತಿದೆ. ಮಾವೋವಾದಿಗಳು ಹೂತಿಟ್ಟಿರುವ ನೆಲಬಾಂಬುಗಳನ್ನು ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸುವ ಕೆಲಸದಲ್ಲಿ ಸ್ಥಳೀಯ ಜನಗಳನ್ನು ಸೆಳೆಯಬಾರದು ಎಂದು ತಮ್ಮ ಸಿಬ್ಬಂದಿಗೆ ವಿಧಿಸುವಂತೆ ಎಲ್ಲಾ ಪಡೆಗಳ ಮುಖ್ಯಾಲಯಗಳಿಗೆ ರಾಜ್ಯ ಸರಕಾರ ಹೇಳಿದೆ. ಮಾವೋವಾದಿಗಳು ಈ ಪ್ರದೇಶದಲ್ಲೆಲ್ಲಾ ವ್ಯಾಪಕವಾಗಿ ನೆಲಬಾಂಬುಗಳನ್ನು ಹೂತಿಟ್ಟು 'ಯುದ್ಧ'ವನ್ನೇ ಘೋಷಿಸಿದಂತಾಗಿದೆ ಎಂಬುದೀಗ ಸ್ಪಷ್ಟ.

ಹೇಗಾದರೂ ಚುನಾವಣಾ ಲಾಭ ಗಿಟ್ಟಿಸುವ ತವಕದಲ್ಲಿ ಭಯೋತ್ಪಾದನೆಯನ್ನು ಈ ರೀತಿ ಸಿನಿಕತನದಿಂದ ಬಳಸುವುದು ಇಡೀ ನಾಗರಿಕ ಸಮಾಜಕ್ಕೇ ಗಂಡಾಂತರಕಾರಿ, ಅದು ಜನಗಳ ಸಂಕಟಗಳನ್ನು ಹೆಚ್ಚಿಸುತ್ತದೆ ಎಂಬುದೀಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಮಾವೋವಾದಿಗಳು ಒಡ್ಡಿರುವ ಸವಾಲನ್ನು ದೃಢವಾಗಿ ಎದುರಿಸುತ್ತಲೇ, ಸಾಮಾನ್ಯ ಸ್ಥಿತಿ ಏರ್ಪಡುವಂತೆ ಮಾಡಲು, ಮತ್ತೆ ನಾಗರಿಕ ವ್ಯವಸ್ಥೆಯನ್ನು ತರಲು ಇಂತಹ ರಾಜಕೀಯವ[illegible] ಸೋಲಿಸುವ ಅಗತ್ಯವಿದೆ.



ಬಿಕ್ಕಟ್ಟಿನ ಸುನಾಮಿಯ ಸುಳಿ

ಆರ್ಥಿಕ ಬಿಕ್ಕಟ್ಟಿನ ಸುರುಳಿ ಬಿಚ್ಚಿಕೊಳ್ಳುತ್ತಾ ಹೊರಟಿದೆ

ಜಾಗತಿಕ ಆರ್ಥಿಕ ಬಿಕ್ಕಟ್ಟು ಎಂಬುದು ದಿನೇ ದಿನೇ ತನ್ನ ಕರಿನೆರಳನ್ನು ಜಗತ್ತಿನ ಉದ್ದಗಲಕ್ಕೆ ಚಾಚುತ್ತಾ ಬೆಳೀತಾ ಇದೆ. ಬೇರೆ ಬೇರೆ ದೇಶಗಳನ್ನು, ಬೇರೆ ಬೇರೆ ವಿಭಾಗಗಳನ್ನು, ಬೇರೆ ಬೇರೆ ರಂಗಗಳನ್ನು ಇದು ತಟ್ಟುತ್ತಾ, ಹೊಸ ಹೊಸ ಆರ್ಥಿಕ, ಸಾಮಾಜಿಕ ತಲ್ಲಣಗಳನ್ನು ಸೃಷ್ಟಿ ಮಾಡುತ್ತಾ ಮುಂದುವರೀತಾ, ಬೆಳೀತಾ ಇದೆ. ಮಾಧ್ಯಮಗಳಲ್ಲಿ ಈ ಬಗೆಗೆ ಸಾಕಷ್ಟು ಪ್ರಚಾರ ಇಲ್ಲ. ಕೆಲವು ಪತ್ರಿಕೆಗಳು ತುಣುಕು ಮಿಣುಕು ಸುದ್ದಿಗಳನ್ನು ಪ್ರಕಟಿಸುತ್ತಿವೆ. ಹಲವು ಪತ್ರಿಕೆ, ಟಿ.ವಿ.ಗಳಲ್ಲಿ ಆರ್ಥಿಕ ಮುಗ್ಗಟ್ಟು, ಬಿಕ್ಕಟ್ಟು ಇಂತಹ ಶಬ್ದಗಳನ್ನು ಬಳಸಬಾರದು ಅಂತ ವರದಿಗಾಗರು, ವಿಶ್ಲೇಷಕರು, ನಿರೂಪಕರಿಗೆ ನಿರ್ದಿಷ್ಟವಾದ ಸೂಚನೆಯೇ ಇದೆಯಂತೆ.

ಬಿಕ್ಕಟ್ಟಿನ ಸ್ವರೂಪವನ್ನು ಒಂದಷ್ಟು ಸರಿಯಾಗಿ ಬಿಂಬಿಸುವ ಪತ್ರಿಕೆಗಳು ಬಿಕ್ಕಟ್ಟಿನ ಕುರಿತಂತೆ 'ಮೆಲ್ಟ್ ಡೌನ್' ಎಂಬ ಪದವನ್ನು ಬಳಸಿದವು. 'ಮೆಲ್ಟ್‌ಡೌನ್' ಅಂದರೆ 'ಕರಗಿ ದ್ರವ'ವಾಗಿ ಹರಿಯುವುದು. ಜಾಗತಿಕ ಆರ್ಥಿಕತೆಯಲ್ಲಿ ಆರ್ಥಿಕತೆಯ ಆಧಾರ ಸ್ತಂಭಗಳು, ಉತ್ಪಾದನೆ, ಉದ್ಯೋಗ, ಆದಾಯ, ಹಣಕಾಸು ಸಂಸ್ಥೆಗಳು, ಕಾರ್ಖಾನೆ, ಉದ್ದಿಮೆ, ಕಂಪನಿಗಳು ಹೀಗೆ ಇರುವುದೆಲ್ಲಾ ಕ್ರಮೇಣ ಮೇಣದ ಬತ್ತಿಯಂತೆ ಕರಗಿ ನೆಲಗೆ ಹರಿಯುವುದು. ಅಥವಾ ಬೃಹತ್ ಹಿಮ ಬಂಡೆ, ಚಪ್ಪಡಿ, ಹಿಮರಾಶಿ ಬಿಸಿಲ ಧಗೆಗೆ ಕ್ರಮೇಣ ಕರಗಿ ನೀರಾಗಿ ಹರಿಯುವಂತೆ ಕರಗುವುದು.

ಪತ್ರಿಕೆ, ಟಿ.ವಿ. ಚಾನೆಲ್‌ಗಳ ಮಾಲೀಕರು ತಮ್ಮಲ್ಲಿ ಬರೆಯುವವರಿಗೆ ಸುದ್ದಿ ನಿರೂಪಕರಿಗೆ 'ಬಿಕ್ಕಟ್ಟು, ಕುಸಿತ, ಎನ್ನಬೇಡಿ ಎಂದರೆ ಬಿಕ್ಕಟ್ಟು ಇಲ್ಲವಾಗುವುದೇ? ಬೆಕ್ಕು ಕಣ್ಣು ಮುಚ್ಚಿಕೊಂಡು ಬಿಟ್ಟು ತಾನು ಯಾರಿಗೂ ಕಾಣುತ್ತಿಲ್ಲ ಎಂದು ಭಾವಿಸಿದಂತೆ ಅದು. ಜಾಗತಿಕ, ಆರ್ಥಿಕ ಬಿಕ್ಕಟ್ಟಿನಿಂದಾಗಿ ಸ್ವತ: ಮಾಧ್ಯಮ ಕ್ಷೇತ್ರವೂ ಬಿಕ್ಕಟ್ಟಿಗೆ ಸಿಲುಕಿದೆ. ಟಿ.ವಿ. ಪತ್ರಿಕೆಗಳಿಗೆ ಸಾಕಷ್ಟು ಜಾಹಿರಾತುಗಳಿಲ್ಲ, ಹೊಸ ನೇಮಕಾತಿಗಳು ಅಷ್ಟಾಗಿ ನಡೆಯುತ್ತಿಲ್ಲ. ಎಷ್ಟೋ ಕಡೆಗಳಲ್ಲಿ ಇರುವವರನ್ನು ಮನೆಗೆ ಕಳಿಸಬೇಕಾದ ಪರಿಸ್ಥಿತಿ ಇದೆ. ಕೆಲವು ಟಿ.ವಿ. ಚಾನೆಲ್‌ಗಳು ಪತ್ರಿಕೆಗಳು ಮುಚ್ಚಿಯೇ ಹೋಗಬಹುದೆಂಬ ಸುದ್ದಿಗಳು ಹರಿದಾಡುತ್ತಿವೆ. ಆದರೂ ಬಿಕ್ಕಟ್ಟಿನ ಕುರಿತು ಸೂಕ್ತ ಪ್ರಚಾರವನ್ನು ಈ ಮಾಧ್ಯಮಗಳು ನೀಡುವುದಿಲ್ಲ.


ಬಿಕ್ಕಟ್ಟಿನ ಸರಪಳಿ

ಮಾಹಿತಿ ತಂತ್ರಜ್ಞಾನ ಉತ್ಪನ್ನ ರಫ್ತು ಕುಸಿತ

ದೇಶದ ಮಾಹಿತಿ ತಂತ್ರಜ್ಞಾನ (ಐಟಿ) ಉತ್ಪನ್ನಗಳು ಅಂದರೆ ಸಾಫ್ಟ್‌ವೇರ್, ಹಾರ್ಡ್‌ವೇರ್‌ಗಳ ರಫ್ತಿನಲ್ಲಿ ಕರ್ನಾಟಕದ ಪಾಲು ಒಟ್ಟು ರಫ್ತಿನ ಮೂರನೇ ಒಂದು ಭಾಗ. 2007- 08 ರಲ್ಲಿ 58,000 ಕೋಟಿ ಇತ್ತು. ಮತ್ತು ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.24 ರಷ್ಟು ಪ್ರಗತಿ ದಾಖಲಿಸಿತ್ತು. ಆದರೆ 2008- 09 ರಲ್ಲಿ ಈ ಶೇ.24 ರ ಬೆಳವಣಿಗೆ ದರ ಶೇ.15 ಕ್ಕೆ ಕುಸಿದಿದೆ. 2008- 09 ರಲ್ಲಿ 67,500 ಕೋಟಿ ರೂ. ಮೊತ್ತದ ರಫ್ತು ಸಾಧ್ಯವಾಗಿದ್ದರೂ ಬೆಳವಣಿಗೆ ದರ ಎಂದಿನಂತೆ ಇದ್ದಿದ್ದರೆ ಅದು ಇನ್ನೂ ಹೆಚ್ಚು ಆಗಿರುವ ಸಾಧ್ಯತೆ ಇತ್ತು. ಇದು ನೇರವಾಗಿ ಜಾಗತಿಕ, ಆರ್ಥಿಕ ಬಿಕ್ಕಟ್ಟಿನ ಪರಿಣಾಮ

ಶಿಕ್ಷಣ ರಂಗದ ಮೇಲೆ ಪರಿಣಾಮ

ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ರಾಜ್ಯದ ಮಹತ್ವದ ಸ್ಥಾನ ಇರುವಂತೆ ರಾಜ್ಯವ್ಯಾಪಿ ಶಿಕ್ಷಣ ರಂಗದಲ್ಲಿ ಮಾಹಿತಿ ತಂತ್ರಜ್ಞಾನ ಶಿಕ್ಷಣದ್ದು ಪ್ರಮುಖ ಭಾಗ ಮತ್ತು ಈ ಐಟಿ ಶಿಕ್ಷಣಕ್ಕೆ



ಸಾಮಾನ್ಯವಾಗಿ ಯಾವಾಗಲೂ ಬಹು ಬೇಡಿಕೆ. ಆದರೆ ಈಗಿನ ಚಿತ್ರ ಸ್ವಲ್ಪ ಭಿನ್ನವಾಗಿದೆ. ರಾಜ್ಯದಲ್ಲೀಗ ವೃತ್ತಿಶಿಕ್ಷಣ ಪ್ರವೇಶ ಪ್ರಕ್ರಿಯೆ ನಡೆಯುತ್ತಿದೆ. ವೃತ್ತಿ ಶಿಕ್ಷಣದಲ್ಲಿ ಬೇಡಿಕೆಯ ದೃಷ್ಟಿಯಿಂದ ಪ್ರಥಮ ಸ್ಥಾನದಲ್ಲಿದ್ದ ಐ.ಟಿ. ಶಾಖೆ ಈಗ ಪ್ರಥಮ ಸ್ಥಾನ ಕಳೆದುಕೊಂಡಿದೆಯಂತೆ. ಈಗ ಎಲೆಕ್ಟ್ರಾನಿಕ್ಸ್ ವಿಷಯ ಬೇಡಿಕೆಯಲ್ಲಿ ಪ್ರಥಮ ಸ್ಥಾನಕ್ಕೆ ಬಂದಿದೆಯಂತೆ ನಂತರದ ಸ್ಥಾನಗಳಿಗೆ ಕ್ರಮವಾಗಿ ಮೆಕಾನಿಕಲ್ ಇಂಜಿನಿಯರಿಂಗ್, ಆನಂತರ ಸಿವಿಲ್ ಇಂಜಿನಿಯರಿಂಗ್ ಶಾಖೆಗಳಿವೆಯಂತೆ ಪತ್ರಿಕಾ ವರದಿಗಳೇ ಇದನ್ನು ಹೇಳುತ್ತಿವೆ.

ಏರ್ ಇಂಡಿಯಾ ನೌಕರರ ಸಂಬಳ ವಿಳಂಬ

ಏರ್ ಇಂಡಿಯಾ ಸರ್ಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆ. 33 ಸಾವಿರ ಉದ್ಯೋಗಿಗಳು ಇದರಲ್ಲಿ ದುಡಿಯುತ್ತಿದ್ದಾರೆ. ವಿಮಾನಯಾನಕ್ಕೆ ಪ್ರಯಾಣಿಕರ ಕೊರತೆ. ಅದು ಬಿಕ್ಕಟ್ಟಿನ ಪರಿಣಾಮ. ಸಂಸ್ಥೆಯ ಆದಾಯ ಕುಸಿದಿದೆ. 33 ಸಾವಿರ ನೌಕರರಿಗೆ ವೇತನ ನೀಡುವುದನ್ನು ಸಂಸ್ಥೆ 15 ದಿನಗಳ ಕಾಲ ವಿಳಂಬ ಮಾಡುತ್ತಿದೆ.

ಹೋಟೆಲ್‌ಗಳತ್ತ ಮಹಿಳೆಯರ ದಂಡು

ಹೋಟೆಲುಗಳಲ್ಲಿ ಸಾಮಾನ್ಯವಾಗಿ ಅಡುಗೆ ಮಾಡುವುದರಿಂದ ಹಿಡಿದು, ಸ್ವಚ್ಛತೆಯ ಕೆಲಸ ಮಾಡುವವರವರೆಗೆ ಪುರುಷರೇ ತುಂಬಿಕೊಂಡಿರುತ್ತಾರೆಂದು ಎಲ್ಲೆಡೆ ಎದ್ದು ಕಾಣುವ ಅಂಶ. ಕೆಲವೆಡೆ ಅಪವಾದ ಇದ್ದೇ ಇದ್ದವು. ಅದರಲ್ಲಿಯೂ ಸ್ವಚ್ಛತೆಯ ಕೆಲಸಗಳಲ್ಲಿ ಬಾಲಕರು ಅಂದರೆ ಬಾಲ ಕಾರ್ಮಿಕರೇ ಜಾಸ್ತಿ.

ಮಹಿಳೆಯರ ವಲಸೆ

ಈಗ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಎಷ್ಟೋ ಗಾರ್ಮೆಂಟ್ಸ್‌ಗಳು ಮುಚ್ಚಿ ಹೋಗಿವೆ. ಈ ಉದ್ದಿಮೆಯಲ್ಲಿ ದುಡಿಯುತ್ತಿದ್ದ ಸಹಸ್ರಾರು ಮಹಿಳೆಯರು ಬೀದಿಗೆ ಬಿದ್ದಂತಾಗಿದೆ. ಹೀಗೆ ಉದ್ಯೋಗ ಕಳೆದುಕೊಂಡ ಮಹಿಳೆಯರು ಹಲವರು ಉದ್ಯೋಗಕ್ಕಾಗಿ ಹೋಟೆಲ್‌ಗಳತ್ತ ಮುಖ ಮಾಡಿದ್ದಾರಂತೆ. ಅದರಲ್ಲಿಯೂ ಸ್ವಚ್ಛತೆಯ ಕೆಲಸಗಳಲ್ಲಿ ಇವರು ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾರಂತೆ.

ಮಹಿಳೆಯರು ಪುರುಷರಂತೆ ಸೌಲಭ್ಯ, ಸೌಕರ್ಯ ಕೇಳಿ ಸಂಘ ಮಾಡಿಕೊಳ್ಳುವುದು, ಪ್ರತಿಭಟನೆ ಮಾಡುವುದು ಕಡಿಮೆ ಎಂದು ಭಾವಿಸಿರುವ ಮಾಲೀಕರು ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದಾರೆ ಎನ್ನುತ್ತದೆ 'ಉದಯವಾಣಿ'ಯ ವರದಿ. ಹುಡುಗರ ಜಾಗಕ್ಕೆ ಮಹಿಳೆಯರು ಬಂದರೆ ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವ ವಿಷಯದಲ್ಲಿ ಎದುರಾಗುವ ಕಿರಿಕಿರಿಯೂ ತಪ್ಪುತ್ತದೆ ಎಂಬುದು ಮಾಲಿಕರ ಲೆಕ್ಕಾಚಾರ. ಇದನ್ನೆಲ್ಲಾ ಒಳ್ಳೆಯದೂ ಅನ್ನೋಣವೋ, ಕೆಟ್ಟದ್ದು ಅನ್ನೋಣವೋ?

ಬೆಲೆಯೇರಿಕೆ

ನಮ್ಮಲ್ಲಿ ಬೆಲೆ ನೋಡಿ ಈ ರೀತಿ ಹಿಂದೆ
ಏರಿದ್ದೆ ಇರಲಿಲ್ಲ ಗತಿಯೇನು ಮುಂದೆ,
ವ್ಯಾಪಾರಿ ಮಂದಿಗಳು ಎಲ್ಲ ಚಿಡ್ಡಿ
ದೋಸ್ತರ್ರೆ ಹೀಗಾಗಿ ಸುಮ್ಮನ ಯೆಡ್ಡಿ

- ವಿಡಂಬಾರಿ

ಬಿಎಸ್‌ಎನ್‌ಎಲ್ ಪರೋಕ್ಷ ಖಾಸಗೀಕರಣ

ಯುಪಿಎ ಸರ್ಕಾರದ ಜನವಿರೋಧಿ ಧೋರಣೆ

ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದು ಇನ್ನೂ ಒಂದು ತಿಂಗಳು ಪೂರ್ಣವಾಗಿಲ್ಲ. ಆಗಲೇ ಮನಮೋಹನ್‌ಸಿಂಗ್ ನೇತೃತ್ವದ ಸರ್ಕಾರ ಕಾರ್ಮಿಕ ವಿರೋಧಿ ನೀತಿ ಅನುಸರಿಸಲು ಅಣಿಯಾಗುತ್ತಿದೆ. ಈಗಾಗಲೇ ಲಾಭದಲ್ಲಿರುವ ಬಿಎಸ್‌ಎನ್‌ಎಲ್ ಕಂಪನಿಯಲ್ಲಿ ಬಂಡವಾಳ ಹಿಂತೆಗೆತಕ್ಕೆ ಚಾಲನೆ ನೀಡಲು ಚಿಂತನೆ ನಡೆಸುತ್ತಿದೆ. ಬಿಎಸ್‌ಎನ್‌ಎಲ್‌ನಲ್ಲಿ ಬಂಡವಾಳ ಹಿಂತೆಗೆತದ ಸುಳಿವು ನೀಡಿರುವ ದೂರಸಂಪರ್ಕ ಸಚಿವ ಎ.ರಾಜಾ, ಕಂಪನಿ ನೌಕರರಿಗೆ ಹತ್ತು ರೂಪಾಯಿ ಮೌಲ್ಯದ ದರದಲ್ಲಿ 500 ಷೇರುಗಳನ್ನು ಕೊಂಡುಕೊಳ್ಳುವ ಅವಕಾಶ ನೀಡೋದಾಗಿ ಘೋಷಿಸಿದ್ದಾರೆ. ಆದರೆ, ಸರ್ಕಾರ ಮುಂದಿಟ್ಟಿರೋ ಈ ನಿರ್ಧಾರವನ್ನು ಬಿಎಸ್‌ಎನ್‌ಎಲ್ ಕಾರ್ಮಿಕ ಸಂಘಟನೆ ಕಟುವಾಗಿ ಟೀಕಿಸಿದೆ. ದೇಶದ ಭವಿಷ್ಯದ ದೃಷ್ಟಿಯಿಂದ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರದ ಈ ಕ್ರಮ ಸರಿಯಲ್ಲ ಎಂದು ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ವಿ.ಎ.ಎನ್. ನಂಬೂದ್ರಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಇದಲ್ಲದೇ ಬಿಎಸ್‌ಎನ್‌ಎಲ್ ಹಾಗೂ ಎಂಟಿಎನ್‌ಎಲ್ ಸರ್ಕಾರದ ಲಾಭ ಗಳಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಲಾಭದಾಯಕವಾಗಿ ಕಾರ್ಯ ನಿರ್ವಹಿಸುತ್ತಿರುವ -ನಡೆಯುತ್ತಿರುವ ಕಂಪನಿಯಲ್ಲಿ ಬಂಡವಾಳ ಹಿಂತೆಗೆದು ಕೊಳ್ಳುವ ಮೂಲಕ ಯುಪಿಎ ಸರ್ಕಾರ ಕಾರ್ಮಿಕ ವಿರೋಧಿ ನಿಲುವು ತಳೆಯುತ್ತಿದೆ. ಸರ್ಕಾರದ ಈ ನಿರ್ಧಾರದಿಂದ ಖಾಸಗಿ ಕಂಪನಿಗಳು ಆಡಿದ್ದೇ ಆಟವಾಗಿದೆ. ಕೇವಲ ಲಾಭದ ಉದ್ದೇಶಕ್ಕಾಗಿ ಕಾರ್ಯ ನಿರ್ವಹಿಸುವ ಖಾಸಗಿ ದೂರವಾಣಿ ಸೇವೆಯಲ್ಲಿ ಏಕಾಏಕಿ ಬೆಲೆ ಏರಿಕೆ ಮಾಡೋ ಮೂಲಕ ಬಡವರ ಜೇಬಿಗೆ ಕತ್ತರಿ ಹಾಕುತ್ತಿವೆ.

2000 ದಿಂದೀಚೆಗೆ ದೂರ ಸಂಪರ್ಕ ಸಚಿವರಾಗಿ ಕಾರ್ಯ ನಿರ್ವಹಿಸಿದ ರಾಮ ವಿಲಾಸ್ ಪಾಸ್ವಾನ್ ಆಗಲಿ, ದಯಾನಿಧಿ ಮಾರನ್ ಬಿಎಸ್‌ಎನ್‌ಎಲ್‌ನಲ್ಲಿ ಬಂಡವಾಳ ಹಿಂತೆಗೆದುಕೊಳ್ಳೋ ಕೆಲಸಕ್ಕೆ ಮುಂದಾಗಿರಲಿಲ್ಲ. ಯಾಕಂದ್ರೆ, ಇಂತಹ ಜನವಿರೋಧಿ ಕಾರ್ಯಗಳನ್ನು ತಡೆಯೋದಕ್ಕೆ ಎಡಪಕ್ಷಗಳು ಬಿಟ್ಟಿರಲಿಲ್ಲ. ಆದ್ರೆ, ಈ ಬಾರಿ ಎಡಪಕ್ಷಗಳು ಆ ಸ್ಥಿತಿಯಲ್ಲಿ ಇಲ್ಲದಿರುವುದನ್ನೇ ಬಂಡವಾಳ ಮಾಡಿಕೊಂಡಿರೋ ಯುಪಿಎ ಸರ್ಕಾರ, ಬಿಎಸ್‌ಎನ್‌ಎಲ್‌ನಲ್ಲಿ ಬಂಡವಾಳ ಹಿಂತೆಗೆತಕ್ಕೆ ಚಾಲನೆ ನೀಡಲು ಮುಂದಾಗಿದೆ. ಈ ಜನ ವಿರೋಧಿ ಸರ್ಕಾರದ ಕ್ರಮವನ್ನು ಖಂಡಿಸಿ ದೇಶವ್ಯಾಪಿ ಪ್ರತಿಭಟನೆ ನಡೆಸಲು ಬಿಎಸ್‌ಎನ್‌ಎಲ್ ಎಂಪ್ಲಾಯಿಸ್ ಯೂನಿಯನ್ ನಿರ್ಧರಿಸಿದೆ.

JANASHAKTHI KANNADA VARA PATRIKE JULY 05, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

ಹವ್ಯಾಸಿ ರಂಗಭೂಮಿಯ ಆದ್ಯ ಸಂಸ್ಥೆ

ಎ.ಡಿ.ಎ. ಗೆ ನೂರು ವರುಷ



ಜೆ.ಸಿ. ರಸ್ತೆಯಲ್ಲಿದೆ 350 ಆಸನಗಳುಳ್ಳ ಸುಸಜ್ಜಿತ ರಂಗ ಮಂದಿರ ಎಡಿಎ. ಅರ್ಧಶತಮಾನದ ರಂಗ ಜಂಗಮನಾಗಿ ನಗರದ ನಾಟಕ ಲೋಕದಲ್ಲಿ ಸಂಚಲನ ಉಂಟು ಮಾಡಿದ್ದ ಇದು ರಂಗಮಂದಿರವಾಗಿ ಸ್ಥಾವರ ರೂಪದಲ್ಲಿ ಜೀವಂತವಾಗಿದೆ. ಎಡಿಎ ಸಂಸ್ಥೆಗೆ ಈಗ ನೂರರ ಸಂಭ್ರಮ.

ರವೀಂದ್ರ ಕಲಾಕ್ಷೇತ್ರದ ಎದುರಿಗಿರುವ ಎಡಿಎ ರಂಗ ಮಂದಿರಕ್ಕೆ ಶತಮಾನೋತ್ಸವ ಸಂಭ್ರಮ ಶುರುವಾಗಿದೆ. ಈ ರಂಗ ಮಂದಿರ ಅಸ್ತಿತ್ವಕ್ಕೆ ಬರಲು ಕಾರಣವಾದ ಅಮೆಚೂರು ಡ್ರಮ್ಯಾಟಿಕ್ ಅಸೋಸಿಯೇಷನ್(ಎಡಿಎ)ಗೆ ಈಗ ನೂರರ ಪ್ರಾಯ.

1909 ರಲ್ಲಿ ಅಸ್ತಿತ್ವಕ್ಕೆ ತಂದ ಎಡಿಎ, ಆರಂಭದಲ್ಲಿ ಹಿಂದಿ, ತೆಲುಗು, ಇಂಗ್ಲಿಷ್, ಕನ್ನಡ, ತಮಿಳು ಭಾಷೆಗಳಲ್ಲಿ ನಾಟಕ ಪ್ರದರ್ಶಿಸಿದರೂ ಅವುಗಳಲ್ಲಿ ಕನ್ನಡ ನಾಟಕಗಳದ್ದೇ ಸಿಂಹಪಾಲು. ಕಾಸ್ಮೋಪಾಲಿಟನ್ ವ್ಯಕ್ತಿತ್ವದ ಅದರ ಎದ್ದು ಕಾಣುವ ಗುಣ 'ಕನ್ನಡ'ವಾಗಿತ್ತು.

ಕನ್ನಡ ಹವ್ಯಾಸಿ ರಂಗಭೂಮಿ ಇದೆ ಸುಮಾರಿನಲ್ಲಿ ಅಸ್ತಿತ್ವಕ್ಕೆ ಬಂತು. ಬಾಗಲಕೋಟೆ, ಬೆಳಗಾವಿ, ಧಾರವಾಡ, ಮೈಸೂರು ಜಿಲ್ಲೆಗಳಲ್ಲಿ ಹಲವು ಹವ್ಯಾಸಿ ತಂಡಗಳು ಜನ್ಮ ತಾಳಿದವಾದರೂ ಅವುಗಳಲ್ಲಿ ಹಲವಕ್ಕೆ ಅಲ್ಪಾಯುಷ್ಯ. ಆದರೆ ಎಡಿಎ ದೀರ್ಘಾಯುಷಿ. ಅಷ್ಟೇ ಅಲ್ಲ ಕನ್ನಡ ರಂಗಭೂಮಿಯ ಹಲವು ಪ್ರಥಮಗಳನ್ನು ದಾಖಲಿಸಿದ ಹೆಗ್ಗಳಿಕೆ ಇದಕ್ಕೆ. ಹಾಗಾಗಿ ಇದನ್ನು ಕನ್ನಡ ಹವ್ಯಾಸಿ ರಂಗಭೂಮಿಗೆ ನಾಂದಿ ಹಾಕಿದ ತಂಡ ಎಂದೂ ಹೇಳಲಾಗಿದೆ.

ನಾಟಕೋತ್ಸವಕ್ಕೆ ಶ್ರೀಕಾರ:

ನಾಟಕೋತ್ಸವಗಳನ್ನು ಆರಂಭಿಸಿದ್ದು ಇದೇ ತಂಡ. ಎಡಿಎ 1919 ರಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಟಿ.ಪಿ.ಕೈಲಾಸಂರ ಟೊಳ್ಳುಗಟ್ಟಿ ನಾಟಕ ಪ್ರಥಮ ಬಹುಮಾನ ಗಳಿಸಿತು. ನಂತರ ಕೈಲಾಸಂ ಎಡಿಎದ ಅವಿಭಾಜ್ಯ ಅಂಗವಾಗಿ ಬೆಳೆದದ್ದು ಈಗ ಇತಿಹಾಸ. ಕವಿ ರವೀಂದ್ರನಾಥ ಟ್ಯಾಗೋರರು ಒಮ್ಮೆ ನಾಟಕೋತ್ಸವ ಉದ್ಘಾಟಿಸಿದ್ದರೆ, 1927 ರಲ್ಲಿ ಈ ತಂಡದ ದೀನಬಂಧು ಕಬೀರ್ ಹಿಂದಿ ನಾಟಕವನ್ನು ಮಹಾತ್ಮ ಗಾಂಧೀಜಿ ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದ್ದರು. 'ರಂಗಭೂಮಿ' 'Theatre' ಪತ್ರಿಕೆಯನ್ನೂ ಎಡಿಎ ನಡೆಸಿತ್ತು.

ಸ್ಫೂರ್ತಿಯ ಸೆಲೆ:

ಅನೇಕರಿಗೆ ನಾಟಕ ಬರೆಯಲು ಪ್ರೇರವಣೆಯಾದ್ದೇ ಎಡಿಎ. ಮಾಸ್ತಿಯವರು ತಾಳಿಕೋಟೆ, ಶಾಂತ ಹಾಗೂ ಸಿ.ಕೆ.ವೆಂಕಟರಾಮಯ್ಯನವರು ಮಂಡೋದರಿ, ನಚಿಕೇತ ನಾಟಕ ರಚಿಸಲು ಎಡಿಎಯೇ ಪ್ರೇರಣೆ.

ಬೆಳ್ಳಾವೆ ನರಸಿಂಹಶಾಸ್ತ್ರಿ, ದೇವುಡು, ಅನಕೃ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ, ಪಂಡಿತ ತಾರಾನಾಥ ಅವರು ನಾಟಕಗಳನ್ನು ರಚಿಸಲು ಸಹ ಎಡಿಎ ಪ್ರೇರಣೆ. 1949 ರಲ್ಲಿ ರಾಘವರ ನಿಧನದಿಂದ ತಂಡದ ಪ್ರಮುಖ ಕೊಂಡಿ ಕಳಚಿತು.

ಆದರೂ ಎಂ.ಎಲ್.ಎಸ್. ಶಾಸ್ತ್ರಿ ಬಿ.ಶ್ರೀನಿವಾಸ ಅಯ್ಯಂಗಾರ್, ಬಿ.ಎಸ್. ಗರುಡಾಚಾರ್, ಹಿಮಾಂಶು ಶಾಸ್ತ್ರಿ, ವಿಮಲಾ ರಂಗಾಚಾರ್ ಮುಂತಾದವರು ತಂಡವನ್ನು ಜೀವಂತವಾಗಿಟ್ಟಿದ್ದರು. 1960 ರ ದಶಕದಲ್ಲಿ ತಂಡದ ಚಟುವಟಿಕೆ ಕ್ಷೀಣಗೊಂಡಾಗ ಕಮಲಾದೇವಿ ಚಟ್ಟೋಪಾಧ್ಯಾಯ ಬೆಂಬಲಕ್ಕೆ ನಿಂತರು. ಬಿ.ವಿ.ಕಾರಂತರು ತಂಡಕ್ಕೆ ಕೃಷ್ಣ ಪಾರಿಜಾತ ನಾಟಕ ನಿರ್ದೇಶಿಸಿ ಮತ್ತೆ ಗತವೈಭವ ಜೀವಂತವಾಗಿಸಲು ಯತ್ನಿಸಿದರು.

● ಗುಡಿಹಳ್ಳಿ ನಾಗರಾಜ್

ಕೃಪೆ: ಪ್ರಜಾವಾಣಿ

ಅಪ್ರತಿಮ ಬಳಗ

ಬಳ್ಳಾರಿ ರಾಘವರಂತಹ ಅಪ್ರತಿಮ ಕಲಾವಿದರು ಈ ತಂಡದ ಪ್ರಮುಖ ಕಲಾವಿದರಾಗಿ ದೀರ್ಘಕಾಲ ತಂಡ ಮುನ್ನಡೆಸಿದ್ದರು. ಬಳ್ಳಾರಿ, ಆಂಧ್ರದ ಹಲವು ಪಟ್ಟಣಗಳು, ಬೆಂಗಳೂರು, ಮದ್ರಾಸ್ ಹೀಗೆ ರಾಘವ ಅವರ ಕಾರ್ಯಕ್ಷೇತ್ರ ಅಷ್ಟೊಂದು ವಿಶಾಲವಾಗಿತ್ತು.

ಬೆಂಗಳೂರಿನ ವಕೀಲರು, ಅಧ್ಯಾಪಕರು, ವ್ಯಾಪಾರಿಗಳು ಸೇರಿ ಆರಂಭಿಸಿದ ಎಡಿಎ, ಸದಸ್ಯರುಗಳ ಚಂದಾ ಹಣ ಹಾಗೂ ನಾಟಕದ ಟಿಕೆಟ್ ಕಲೆಕ್ಷನ್‌ನಿಂದ ದೀರ್ಘಕಾಲ ಕ್ರಿಯಾಶೀಲವಾಗಿತ್ತು. ಕಠೀರವ ನರಸಿಂಹರಾಜ ಒಡೆಯರ್ ಅವರು ಪೋಷಕರಾಗಿದ್ದರು. ಬಳ್ಳಾರಿ ರಾಘವರ ಜತೆಗೆ ಕೆ. ಭೀಮಸೇನರಾವ್, ಕೆ.ಎಸ್.ವಾಸುದೇವ ರಾವ್, ಎಂ.ಎಲ್.ಶ್ರೀನಿವಾಸಶಾಸ್ತ್ರಿಯವರು ಎಡಿಎ ಆಧಾರ ಸ್ತಂಭಗಳಾಗಿದ್ದರು. ದೇವುಡು ನರಸಿಂಹಶಾಸ್ತ್ರಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಕನಕಲಕ್ಷ್ಮಮ್ಮ ಅನ್ನಪೂರ್ಣ, ಪದ್ಮಾವತಿ ಮುಂತಾದ ಕಲಾವಿದರು ನಂತರ ತಂಡ ಸೇರಿಕೊಂಡರು.

ಮುನ್ನಡೆಸಿದವರು...

1960 ರ ದಶಕದಲ್ಲಿ ಸರ್ಕಾರದಿಂದ ನಿವೇಶನ ಪಡೆದ ಎಡಿಎ ರಂಗ ಮಂದಿರ ನಿರ್ಮಾಣಕ್ಕೆ ಟೊಂಕಕಟ್ಟಿತು. ಅದಕ್ಕೆ ನೂರೆಂಟು ಅಡ್ಡಿ. 1966 ರಲ್ಲಿ ಎಡಿಎ ಥಿಯೇಟರ್ ಟ್ರಸ್ಟ್ ಅಸ್ತಿತ್ವಕ್ಕೆ ಬಂತು. ಆದರೆ ಲೀಸ್‌ಗೆ ಪಡೆದವರು ಜಾಗ ಬಿಟ್ಟುಕೊಡಲು ತಯಾರಿರಲಿಲ್ಲ.

ಆಗ ಇಳೆಯರಾಜ, ಪ್ರಜಾವಾಣಿ ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಕೆ.ಎ.ನೆಟ್ಟಕಲ್ಲಪ್ಪ, ಮಾರ್ತಾಂಡವರ್ಮ, ಬಿ.ಎಸ್.ಗರುಡಾಚಾರ್, ಎಸ್.ಬಿ. ರಾಮಚಂದ್ರ, ವಿಮಲಾ ರಂಗಾಚಾರ್ ಮುಂತಾದವರು ಟ್ರಸ್ಟಿಗಳಾಗಿದ್ದರು. ನೆಟ್ಟಕಲ್ಲಪ್ಪನವರ ನಿಧನಾ ನಂತರ ಕಟ್ಟಡ ನಿರ್ಮಾಣಕ್ಕೆ ತುಸು ಹಿನ್ನಡೆಯಾಯಿತು. ಎಡಿಎ ಟ್ರಸ್ಟಿ ನಾರಾಯಣರಾವ್ ದೆಹಲಿ ಕನ್ನಡ ಭಾರತೀಯ ಕಾರ್ಯದರ್ಶಿಯಾಗಿದ್ದರು. ಅಲ್ಲಿಂದ 4 ಲಕ್ಷ..... ರೂಪಾಯಿ ನೆರವು ಕೋರಿದರು. ಅಂತೂ ಇಂತೂ 1997 ಕ್ಕೆ ಎಡಿಎ ರಂಗಮಂದಿರ ಉದ್ಘಾಟನೆಯಾಯಿತು.

ಹಾಲಿ ಟ್ರಸ್ಟ್ : ಎಂ.ಕೆ. ಪಾಂಡುರಂಗಶೆಟ್ಟಿ (ಅಧ್ಯಕ್ಷ), ವಿಮಲಾ ರಂಗಾಚಾರ್ (ಕಾರ್ಯದರ್ಶಿ), ಎಂ.ಎನ್.ನರಸಿಂಹನ್ (ಖಜಾಂಚಿ), ಎಂ.ಎಸ್.ಸತ್ಯ, ರಾಮಪ್ರಸಾದ್, ಎಂ.ವಿ.ನಾರಾಯಣರಾವ್ (ಟ್ರಸ್ಟಿಗಳು).

ಕವಿತೆ

ಕಾಲ

ನಮ್ಮ ದಿನಗಳು ಎಲ್ಲಿಗೆ
ಹೋಗುತ್ತವೆ?
ಯಾರ ಅಂಗಳಕ್ಕೆ
ರಂಗೋಲಿಯಾಗುತ್ತವೆ?
ಯಾರ ಹಿತ್ತಲದಿ
ಹೂವಾಗಿ ಅರಳುತ್ತವೆ?
ಯಾರ ಮನೆ ಗೋಡೆಯ
ಚಿತ್ರಪಟಗಳಾಗುತ್ತವೆ?
ಮೋಕೇಸಿನ ಪೀಸಾಗುತ್ತವೆ?
ಹೂದಾನಿಯ ಗೊಂಚಲಾಗುತ್ತವೆ?

ಯಾವ ಹಾಳು ಹಗೆಯಲ್ಲಿ
ಮುಗ್ಗಸು ಕಾಳಾಗಿ
ಕೊಳೆಯುತ್ತ ಬೀಳುತ್ತವೆ?
ಯಾವ ನದಿ ದಂಡೆಗುಂಟ
ಹರಿಯುತ್ತ ಕರಗುವ
ನೀರಾಗುತ್ತವೆ?
ಯಾವ ಕತ್ತಲು ಗವಿಯಲ್ಲಿ
ಇರುಳು ತಿರುಗುವ
ಕೊಳ್ಳಿ ದೆವ್ವಗಳಾಗುತ್ತವೆ?
ಯಾವ ಮರುಭೂಮಿಯ
ಮಳಲ ಕಣಗಳಾಗುತ್ತವೆ?
ಯಾವ ಸಾಗರದ ತೆರೆಗಳಾಗಿ
ನಿರಂತರ ಉಳಿಡುತ್ತವೆ?
ನಮ್ಮ ದಿನಗಳು ಎಲ್ಲಿಗೆ ಹೋಗುತ್ತವೆ?

ಎಂ.ಡಿ. ಒಕ್ಕುಂದ

'ಮಗು ಮಲಗಿದೆ ಎದೆಯ ಮೇಲೆ' ಕವನ ಸಂಕಲನದಿಂದ

ಪ್ರಕಾಶನ:

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH